ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 20 ಬುಧವಾರ 2022

ಸಂಪುಟ: 43 | ಸಂಚಿಕೆ: 05 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಹೋಬಲ ಮಠದಲ್ಲಿ ಶ್ರೀ ರಂಗನಾಥ ಯತೀಂದ್ರ ಮಹಾದೇಶಿಕರ್ ಆಶೀರ್ವಾದ ಪಡೆದರು. ಈ ವೇಳೆ ಮಠದ ಅಧ್ಯಕ್ಷ ಅನಂತಕೃಷ್ಣ, ಕಾರ್ಯದರ್ಶಿ ರಂಗನಾಥ್, ಆರಾಧಕರಾದ ಜನಾರ್ಧನ್ ಅಯ್ಯಂಗಾರ್, ಟಿ.ಎಸ್.ಅರುಣ್, ಮಠದ ಶಿಷ್ಯರು ಉಪಸ್ಥಿತರಿದ್ದರು.

ನಾಡೋಜ ಪುರಸ್ಕೃತರಿಗೆ ಅಭಿನಂದನೆ

ಪ್ರಶಸ್ತಿ ಪುರಸ್ಕೃತರು ಸಾಮಾನ್ಯ ಸಾಧಕರಷ್ಟೇ ಅಲ್ಲ... ಸಾಧಕ ವರೇಣ್ಯರು: ಡಾ. ಸಿಪಿಕೆ ನುಡಿ

ಮೈಸೂರು, ಏ.19(ಆರ್‌ಕೆಬಿ)– ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ನಾಡೋಜ ಪ್ರಶಸ್ತಿ ಪುರಸ್ಕೃತರಾದ ಪ್ರೊ.ಭಾಷ್ಯಂ ಸ್ವಾಮೀಜಿ ಮತ್ತು ಪ್ರೊ.ಟಿ.ವಿ. ವೆಂಕಟಾಚಾಲಶಾಸ್ತ್ರಿ ಅವರಿಗೆ ಮೈಸೂರಿನ ವೆಂಕಟಗಿರಿ ಪ್ರಕಾಶನದ ವತಿಯಿಂದ ಅಭಿನಂದಿಸಲಾಯಿತು.

ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ಕಲ್ಯಾಣೋತ್ಸವ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ. ಸಿ.ಪಿ.ಕೃಷ್ಣಕುಮಾರ್ ಅವರು ನಾಡೋಜ ಪ್ರಶಸ್ತಿ ಪುರಸ್ಕೃತರಿಬ್ಬರಿಗೂ ಸನ್ಮಾನಿಸಿದರು.

ಬಳಿಕ ಮಾತನಾಡಿದ ಅವರು, ಪ್ರಶಸ್ತಿ ಪುರಸ್ಕೃತರನ್ನು ಗೌರವಿಸುವುದು ನಿಜಕ್ಕೂ ಗೌರವ ತರುವ ಕೆಲಸ. ಟಿ.ವಿ.ವೆಂಕಟಾಚಲಶಾಸ್ತ್ರಿ ಮತ್ತು ಭಾಷ್ಯಂ ಸ್ವಾಮೀಜಿ ಸಾಮಾನ್ಯ ಸಾಧಕರಷ್ಟೇ ಅಲ್ಲ. ಸಾಧಕ ವರೇಣ್ಯರು. ಇವರಿಂದ ನಾಡೋಜ ಪ್ರಶಸ್ತಿಗೂ ಗೌರವ ಸಿಕ್ಕಂತಾಗಿದೆ. ಇವರಿಬ್ಬರೂ ಸಾಂಸ್ಕೃತಿಕವಾದ ಮೈಸೂರಿನ ವಜ್ರಗಳು. ಅದರಲ್ಲೂ ಸಾಮಾನ್ಯ ವಜ್ರವಲ್ಲ. ಕೋಹಿನೂರು ವಜ್ರಗಳು. ತಪೋವೃದ್ಧರು. ಸಮಾಜದಲ್ಲಿ ಆಧ್ಯಾತ್ಮ, ಧರ್ಮವನ್ನು ಜೀವಂತರಾಗಿ ಇರಿಸಿರುವ ಮಹಾ ಪುರುಷರು ಎಂದು ಅಭಿನಂದಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರೊ.ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು, ನನ್ನ ಜೀವನ ವ್ಯರ್ಥವಾಗಲಿಲ್ಲ. ಹಾಗಾಗಿ ಧನ್ಯತಾ ಭಾವ ನನ್ನಲ್ಲಿದೆ. ಇದುವರೆಗೆ ಸರಸ್ವತಿ ಸೇವೆ ಮಾಡಿದ ನಾವು ಅದಕ್ಕೆ ಭಂಗ ತರದಂತೆ ನೋಡಿಕೊಳ್ಳಬೇಕಾಗಿದೆ ಎಂದರು.



ನಾಡೋಜ ಪುರಸ್ಕೃತರಾದ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ, ಪ್ರೊ.ಭಾಷ್ಯಂ ಸ್ವಾಮೀಜಿ ಅವರನ್ನು ವೆಂಕಟಗಿರಿ ಪ್ರಕಾಶನದ ವತಿಯಿಂದ ಮೈಸೂರು ಯೋಗಾನರಸಿಂಹಸ್ವಾಮಿ ದೇವಾಲಯದ ಆವರಣದಲ್ಲಿ ಅಭಿನಂದಿಸಲಾಯಿತು. ಚಿತ್ರದಲ್ಲಿ ಡಾ.ಸಿಪಿಕೆ, ಡಾ.ಲತಾ ರಾಜಶೇಖರ್, ಪ್ರೊ.ನೀ.ಗಿರಿಗೌಡ ಇನ್ನಿತರರನ್ನು ಕಾಣಬಹುದು.

ಮತ್ತೊಬ್ಬ ಸನ್ಮಾನಿತರಾದ ಭಾಷ್ಯಂ ಸ್ವಾಮೀಜಿ ಮಾತನಾಡಿ, ಖ್ಯಾತ ಸಾಹಿತಿ ಟಿ.ವಿ. ವೆಂಕಟಾಚಲಶಾಸ್ತ್ರಿ ಅವರೊಂದಿಗೆ ನಾನೂ ನಾಡೋಜ ಪ್ರಶಸ್ತಿ ಪಡೆದದ್ದು ನನಗೆ ಹೆಮ್ಮೆ ಎನಿಸಿದೆ. ಕನ್ನಡ, ಸಂಸ್ಕೃತ ಸೇರಿದಂತೆ ನಾನಾ ಭಾಷೆಗಳಲ್ಲಿ 172 ಪುಸ್ತಕ ತಂದಿದ್ದೇನೆ ಎಂಬುದು ನಾನು ಹೆಮ್ಮೆಪಡುವ ವಿಚಾರ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಹಾಕವಯಿತ್ರಿ ಡಾ.ಲತಾ ರಾಜಶೇಖರ್ ಅವರು ಲೇಖಕಿ ಡಾ.ಎ.ಪುಷ್ಪ ಅಯ್ಯಂಗಾರ್ ಅವರ 'ಬಾಳು ಬೆಳಗಿತು' ಕೃತಿ ಬಿಡುಗಡೆ ಮಾಡಿದರು. ಸಮಾಜ ಸೇವಕಿ ಎ.ವೈದೇಹಿ, ಮುಂಗಾರು ಕವಿಗೋಷ್ಠಿಯಲ್ಲಿ ಸಮ್ಮಿಲನದಲ್ಲಿ ಪ್ರೊ.ಕೆ.ಲೀಲಾ ಪ್ರಕಾಶ್, ಸ.ಚ.ಮಹದೇವ ನಾಯಕ್ ಇನ್ನಿತರರು ಭಾಗವಹಿಸಿದ್ದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಪ್ರೊ.ನೀ.ಗಿರಿಗೌಡ, ಸಂಚಾಲಕರಾದ ಹ.ರಾ.ಭದ್ರೇಶ್‌ಕುಮಾರ್, ಬೋಗಾದಿ ಸಿದ್ದೇಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ರಾಜ್ಯ ಸರ್ಕಾರಿ ನೌಕರರ ದಿನಾಚರಣೆ

ಜಿಲ್ಲೆಯ 20 ಸರ್ಕಾರಿ ನೌಕರರು, ಅಧಿಕಾರಿಗಳಿಗೆ 'ಸರ್ವೋತ್ತಮ ಸೇವಾ ಪ್ರಶಸ್ತಿ' ಪ್ರದಾನ



ಮೈಸೂರು, ಏ.19(ಆರ್‌ಕೆಬಿ)–ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪ್ರಥಮ ವರ್ಷದ ದಿನಾಚರಣೆ ಅಂಗವಾಗಿ ಏ.21ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ, ಸರ್ಕಾರಿ ಸೇವೆಯಲ್ಲಿ ಉತ್ತಮ ಕೆಲಸ ನಿರ್ವಹಿಸಿದ 20 ಮಂದಿ ಅಧಿಕಾರಿಗಳು ಮತ್ತು ನೌಕರರಿಗೆ 'ಸರ್ವೋತ್ತಮ ಸೇವಾ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತಿದೆ ಎಂದು ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಕೆ.ಗೋವಿಂದರಾಜು ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2021ನೇ ಸಾಲಿಗೆ ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯ ಹಿರಿಯ ಶ್ವಾಸಕೋಶ ತಜ್ಞ ಡಾ.ಎಂ. ಸದಾಶಿವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಎಚ್.ಎಲ್.ಮಂಜುನಾಥ್, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಜೀವನೋಪಾಯ ಇಲಾಖೆ ಸಹಾಯಕ ನಿರ್ದೇಶಕಿ ಡಿ.ಎಂ.ರಾಣಿ, ಕಿರಿಯ ತರಬೇತಿ ಅಧಿಕಾರಿ ಜಿ.ರವಿಶಂಕರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನರಹರಿ, ಇಎಸ್‌ಐ ಆಸ್ಪತ್ರೆಯ ಕಚೇರಿ ಅಧೀಕ್ಷಕ ಜಿ.ಸತೀಶ್ ಬಾಬು, ಶುಶ್ರೂಷಕ ಅಧೀಕ್ಷಕಿ ಕೆ.ಬಿ.ಶಾಂತಲಾ, ಕೆ.ಆರ್.ಆಸ್ಪತ್ರೆಯ ಹಿರಿಯ ಶುಶ್ರೂಷಾಧಿಕಾರಿ ಹಿಲ್ಡಾ ಡಿಸೋಜ, ಜಿಲ್ಲಾ ನ್ಯಾಯಾಲಯದ ಬೇಲಿಫ್ ಟಿ.ಜಿ.ಶ್ರೀಪತಿ, 2022ನೇ ಸಾಲಿಗೆ ಆರೋಗ್ಯ ಇಲಾಖೆ ವೈದ್ಯಾಧಿಕಾರಿ ಡಾ.ಎಚ್.ಎಂ.ಚಂದ್ರಕಲಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚೆನ್ನಪ್ಪ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಅಧೀಕ್ಷಕಿ ಎ.ಡಿ.ಜಯಲಕ್ಷ್ಮೀಬಾಯಿ, ಕೃಷಿ ಇಲಾಖೆಯ ಅಧೀಕ್ಷಕ ಜಿ.ವರದರಾಜು, ಕಂದಾಯ ಇಲಾಖೆ ಎಫ್‌ಡಿಎ ಶ್ರೀನಿವಾಸರಾಜ್ ಅರಸ್, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಿರಿಯ ತರಬೇತಿ ಅಧಿಕಾರಿ ಜಿ.ಎನ್.ಪ್ರಸನ್ನ, ಪೊಲೀಸ್ ಇಲಾಖೆ ಎಫ್‌ಡಿಎ ಜಿ.ಕೃಷ್ಣ ಪ್ರಸಾದ್, ತೋಟಗಾರಿಕೆ ಇಲಾಖೆ ಸಹಾಯಕ ಕರೀಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧೀಕ್ಷಕ ಎಂ.ಎಲ್.ವಿಶ್ವನಾಥ್, ಉದ್ಯೋಗ ಮತ್ತು ವಿನಿಮಯ ಇಲಾಖೆ ಎಸ್‌ಡಿಎ ಝುಲ್ಫಿಕರ್ ಕಲ್ಲಿಗುಡಿ ಅವರಿಗೆ ಸರ್ವೋದಯ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು. ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಜಿಲ್ಲೆಯ ಶಾಸಕರು, ಸಂಸದರು, ವಿವಿಧ ನಿಗಮ ಮಂಡಳಿ ಅಧ್ಯಕ್ಷರು ಇನ್ನಿತರರು ಭಾಗವಹಿಸುವರು ಎಂದರು. ಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ರೇವಣ್ಣ, ಪದಾಧಿಕಾರಿಗಳಾದ ಡಿ.ಆನಂದ, ಎಸ್.ಜೆ. ರಮೇಶ್, ಮಾಲಂಗಿ ಸುರೇಶ್, ಎಸ್.ರಘು, ರಾಮನಾಯ್ಕ ಉಪಸ್ಥಿತರಿದ್ದರು.

ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಸಿದ್ದರಾಮಯ್ಯರಿಗಿಲ್ಲ

ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ಆಕ್ಷೇಪ

- ಗಾಂಧಿ ವಿಚಾರ ಪರಿಷತ್ತಿಗೆ ಸಿಎ ನಿವೇಶನ ನೀಡಿರುವ ಸಿದ್ದರಾಮಯ್ಯ
- ರಾಮನ ವಿಚಾರವನ್ನು ಒಪ್ಪದವರಿಂದ ಭೂಮಿ ಕಬಳಿಸಲು ಯತ್ನ

ಮೈಸೂರು,ಏ.19(ಆರ್‌ಕೆಬಿ)–ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಹಾಗೂ ಬಿಜೆಪಿ ನಾಯಕರ ವಿರುದ್ಧ ಆರೋಪ ಮಾಡಲು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೈತಿಕತೆ ಇಲ್ಲ ಎಂದು ರಾಜ್ಯ ಬಿಜೆಪಿ ವಕ್ತಾರ ಎಂ.ಜಿ.ಮಹೇಶ್ ತಿಳಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2018ರಲ್ಲಿ ಗಾಂಧಿ ವಿಚಾರ ಪರಿಷತ್ತಿಗೆ ಸಿಎ ನಿವೇಶನ ನೀಡಿ, 37 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಇದು ಯಾವ ಆಧಾರದಲ್ಲಿ ನಿವೇಶನ, ಅನುದಾನ ನೀಡಲಾಗಿದೆ. ಮೈಸೂರಿನ ಮುಖ್ಯ ಭಾಗದಲ್ಲಿ ಎಸ್‌ಬಿಎಂ ಲೇಔಟ್‌ನ ಶಿವ ದೇವಾಲಯದ ಬಳಿ 2 ಎಕರೆ ಜಾಗವನ್ನು ಈ ಟ್ರಸ್ಟ್‌ಗೆ ನೀಡಿ, ಅದನ್ನು ಕಬಳಿಸುವ ಪ್ರಯತ್ನ ಇರಬಹುದು ಎಂದು ಅನುಮಾನಿಸಿದರು. ರಾಜ್ಯ ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಅವರು ಗಾಂಧಿ ವಿಚಾರ ಪರಿಷತ್ತಿನ ಗೌರವ ಅಧ್ಯಕ್ಷರು, ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಗೌರವ ಉಪಾಧ್ಯಕ್ಷರು, ಸಮಾಜವಾದಿ ಪ.ಮಲ್ಲೇಶ್ ಅಧ್ಯಕ್ಷರಾಗಿದ್ದಾರೆ. ತಮ್ಮ ಬದುಕಿನುದ್ದಕ್ಕೂ ರಾಮ ನಾಮವನ್ನೇ ಜಪಿಸಿದವರು ಮಹಾತ್ಮ ಗಾಂಧಿ. ಆದರೆ, ರಾಮನ ವಿಚಾರವನ್ನೇ ಒಪ್ಪದ ಸಿದ್ದರಾಮಯ್ಯ ಭೂಮಿ ಕಬಳಿಸಲು ಪರಿಷತ್ ಸ್ಥಾಪಿಸಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ಭ್ರಷ್ಟಾಚಾರದ ಗಂಗೋತ್ರಿ ಎಂದು ಮುಖ್ಯಮಂತ್ರಿ



ಕರೆದಿದ್ದಾರೆ. 1952ರಲ್ಲಿ ಜೀಪ್ ಹಗರಣದಿಂದ ಆರಂಭವಾಗಿ ಕಾಂಗ್ರೆಸ್ಸಿನ 140 ಮುಖ್ಯಮಂತ್ರಿಗಳ (ಬಹುತೇಕ) ಮೇಲೆ ಭ್ರಷ್ಟಾಚಾರದ ಆಪಾದನೆ ಇದೆ. ಸತ್ಯಹರಿಶ್ಚಂದ್ರರ ರೀತಿ ಮಾತಾಡುವ ಸಿದ್ದರಾಮಯ್ಯ ಅವರು ನಿವೇಶನ ನೀಡಿರುವುದು ಸರಿಯೇ? ಎಂದು ಪ್ರಶ್ನಿಸಿದರು.

ಚಿಕ್ಕಮಗಳೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಮೆಡಿಕಲ್ ಕಾಲೇಜು, ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ಸಿ.ಟಿ.ರವಿ ಅವರ ಭಾವ ಸುದರ್ಶನ್ ಅವರಿಗೆ ಕೊಡಿಸಿರುವುದಾಗಿ ಕಾಂಗ್ರೆಸ್ ವಕ್ತಾರರು ಆರೋಪ ಮಾಡಿದ್ದಾರೆ. ಆದರೆ, ಬಾಲಾಜಿ ಕೃಪಾ ಪ್ರೈ.ಲಿ. ಗುತ್ತಿಗೆ ಪಡೆದಿದೆ ಎಂದು ದಾಖಲೆ ಪ್ರದರ್ಶಿಸಿದರು. ಸಿ.ಟಿ.ರವಿ ಅವರ ಕುಟುಂಬದವರಿಗೆ ಎರಡು ಪ್ರಾಜೆಕ್ಟ್‌ಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಅನವಶ್ಯಕವಾಗಿ ರಾಜಕೀಯ ದುರುದ್ದೇಶದ ಆಪಾದನೆ ಮಾಡಿದ್ದಾರೆ. ಕಾಂಗ್ರೆಸ್ ವಕ್ತಾರರು ಗಾಳಿಗೆ ಗುದ್ದುವ ಸಾಹಸ ಮಾಡಬಾರದು ಎಂದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಸಿ.ಎಚ್.ವಿಜಯಶಂಕರ್, ಜಿಲ್ಲಾ ವಕ್ತಾರ ಎಂ.ಎ. ಮೋಹನ್, ಸಹ ವಕ್ತಾರರಾದ ಎನ್.ರಾಜಕುಮಾರ್, ಕೇಬಲ್ ಮಹೇಶ್, ಮಹೇಶ್‌ರಾಜ್ ಅರಸ್ ಉಪಸ್ಥಿತರಿದ್ದರು.

ಮೈಸೂರು ಮೇಯರ್ ಮೀಸಲಾತಿ ವಿಳಂಬ

ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

ಮೈಸೂರು,ಏ.19(ಆರ್‌ಕೆಬಿ)–ಮೈಸೂರು ನಗರಪಾಲಿಕೆ ಮೇಯರ್ ಹಾಗೂ ಉಪಮೇಯರ್ ಸ್ಥಾನಗಳಿಗೆ ಮೀಸಲಾತಿ ನಿಗದಿಪಡಿಸದೆ ರಾಜ್ಯ ಸರ್ಕಾರ ಬೇಜವಾಬ್ದಾರಿತನದಿಂದ ವರ್ತಿಸುತ್ತಿದೆ. ಬಿಜೆಪಿ ಪಕ್ಷದ ಮೇಯರ್ ಇರುವುದರಿಂದ ಅವರೇ ಮುಂದುವರಿಯಲಿ ಎಂಬಂತೆ ಸರ್ಕಾರ ವರ್ತಿಸುತ್ತಿದ್ದು, ಮೇಯರ್ ಸ್ಥಾನಕ್ಕೆ ಮೀಸಲಾತಿ ನಿಗದಿಪಡಿಸದೇ ಸಂವಿಧಾನಕ್ಕೆ ಅಪಚಾರವೆಸಗುತ್ತಿದೆ ಎಂದು ಮೈಸೂರು ನಗರ ಕಾಂಗ್ರೆಸ್ ಸಮಿತಿ ವಕ್ತಾರ ಎಸ್.ರಾಜೇಶ್ ಆರೋಪಿಸಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಡಿ.27ರಂದೇ ಚುನಾವಣೆ ನಡೆಯಬೇಕಿತ್ತು. ಅವಧಿ ಮೀರಿದ್ದರೂ ಮೀಸಲಾತಿ ಪ್ರಕಟಿಸದೇ ಬೇಕೆಂದೇ ವಿಳಂಬ ಧೋರಣೆ ಅನುಸರಿಸುತ್ತಿದೆ. ಹೀಗಾಗಿ ಮೈಸೂರು ನಗರಪಾಲಿಕೆ ಆಡಳಿತ ಯಂತ್ರ ಕುಸಿದಿದೆ. ಹೀಗಾಗಿ ಸರ್ಕಾರ ಕೂಡಲೇ ಮೀಸಲಾತಿ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು.

ಗಾಂಧಿನಗರದ ಮಾರುಕಟ್ಟೆ ಶಿಥಿಲಾವಸ್ಥೆ ತಲುಪಿದ್ದು, ಛಾವಣಿ ಕುಸಿಯುವ ಹಂತದಲ್ಲಿದೆ. ಮೇಲ್ಛಾವಣಿಗೆ ತರಿ, ತೆಂಗಿನ ಗರಿ, ಪ್ಲಾಸ್ಟಿಕ್ ಚೀಲಗಳನ್ನು ಹಾಕಿಕೊಂಡು ವ್ಯಾಪಾರ ಮಾಡುವ ಸ್ಥಿತಿ ಉಂಟಾಗಿದೆ. ಕೂಡಲೇ ಗಾಂಧಿನಗರ ಮಾರುಕಟ್ಟೆಯನ್ನು ಪುನರ್ ನಿರ್ಮಾಣ ಮಾಡಬೇಕು. ಗಾಂಧಿನಗರದ ಸ್ಮಶಾನ ಅಭಿವೃದ್ಧಿಪಡಿಸಬೇಕು. ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಸ್ಥಳದಿಂದ ಫೌಂಟೇನ್ ವೃತ್ತದವರೆಗೆ ರಸ್ತೆ ಅಗಲೀಕರಣ ಮಾಡಬೇಕು ಎಂದು ಒತ್ತಾಯಿಸಿದರು.

ಕೋವಿಡ್‌ನಿಂದ ಸಾವಿಗೀಡಾದವರ ಕುಟುಂಬಕ್ಕೆ ಪರಿಹಾರ: ಜಿಲ್ಲಾಧಿಕಾರಿ



ಮೈಸೂರು, ಏ.19– ಕೋವಿಡ್‌ನಿಂದಾಗಿ ಮೃತಪಟ್ಟ ಕುಟುಂಬದ ವಾರಸುದಾರರಿಗೆ ವಿಪತ್ತು ಪರಿಹಾರ ನಿಧಿಯಿಂದ ಈಗಾಗಲೇ ಪರಿಹಾರ ನೀಡಲಾಗಿದ್ದು, ಇನ್ನೂ ಹಲವಾರು ಕುಟುಂಬಗಳು ಪರಿಹಾರ ಸಿಕ್ಕಿಲ್ಲ ಎಂದು ದೂರು ನೀಡುತ್ತಿರುವ ಹಿನ್ನೆಲೆಯಲ್ಲಿ ಕೋವಿಡ್ ಪರಿಹಾರಕ್ಕೆ ಈವರೆಗೂ ಅರ್ಜಿ ಸಲ್ಲಿಸದಿದ್ದಲ್ಲಿ ದಾಖಲೆಗಳೊಂದಿಗೆ ಈಗಲೂ ಸಂಬಂಧಪಟ್ಟ ತಹಸೀಲ್ದಾರರಿಗೆ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾರ್ಚ್ 24ರ ಸರ್ವೋಚ್ಚ ನ್ಯಾಯಾಲಯದ ಆದೇಶದ ಅನ್ವಯ ಕೋವಿಡ್–19ರಿಂದ ಮೃತರಾದವರ ಕಾನೂನುಬದ್ಧ ವಾರಸುದಾರರಿಗೆ ಪರಿಹಾರ ನೀಡಲು ಅರ್ಜಿ ಸ್ವೀಕಾರ ಹಾಗೂ ಅರ್ಹ ವ್ಯಕ್ತಿಗಳಿಗೆ ಪರಿಹಾರ ಪಾವತಿಸಲಾಗುತ್ತದೆ ಎಂದರು.

ಮರುನೇಮಕಕ್ಕೆ ಆಗ್ರಹಿಸಿ ಮುಕ್ತ ವಿವಿ ದಿನಗೂಲಿ ನೌಕರರ ಪ್ರತಿಭಟನೆ



ಮೈಸೂರು,ಏ.19(ಪಿಎಂ)– ಕೆಲಸದಿಂದ ಕೈಬಿಟ್ಟಿರುವ ತಮ್ಮನ್ನು ಮರುನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯಿಸಿ ಮುಕ್ತ ವಿವಿ ದಿನಗೂಲಿ ನೌಕರರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದಿನಗೂಲಿ ನೌಕರರ ಸಂಘದ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಮುಕ್ತಗಂಗೋತ್ರಿಯ ವಿವಿ ಮುಖ್ಯದ್ವಾರದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಖಾಯಂ ಮಾಡಬೇಕೆಂಬ ಬೇಡಿಕೆಯೊಂದಿಗೆ 228 ದಿನಗೂಲಿ ನೌಕರರ ಮುಷ್ಕರ ಕೈಗೊಂಡ ಕಾರಣ, 2005–06ನೇ ಸಾಲಿನಲ್ಲಿ ಖಾಲಿ ಇದ್ದ ಹುದ್ದೆಗಳಿಗೆ ನಮ್ಮನ್ನು ನೇಮಕ ಮಾಡಿಕೊಳ್ಳಲಾಯಿತು. ಕೆಲ ವರ್ಷಗಳ ಬಳಿಕ ನಮ್ಮನ್ನು ಕೆಲಸದಿಂದ ತೆಗೆದು, ಮತ್ತೆ 228 ನೌಕರರನ್ನು ಮರುನೇಮಕ ಮಾಡಿಕೊಂಡರು. ನಮ್ಮನ್ನೂ ಮರುನೇಮಕ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಕುಲಸಚಿವರ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ವಿವಿ ಕುಲಸಚಿವ ಡಾ.ರಾಜಣ್ಣ, ಏ.25ರಂದು ವಿವಿಯ ಘಟಿಕೋತ್ಸವ ಇದ್ದು, ಆ ಬಳಿಕ ವ್ಯವಸ್ಥಾಪನಾ ಮಂಡಳಿ ಸಭೆ ಕರೆದು, ತಮ್ಮ ಬೇಡಿಕೆ ಸಂಬಂಧ ಚರ್ಚಿಸಿ, ತೀರ್ಮಾನ ಕೈಗೊಳ್ಳಲು ಕ್ರಮವಹಿಸುವುದಾಗಿ ಭರವಸೆ ನೀಡಿದರು. ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದ ಪ್ರತಿಭಟನಾಕಾರರು, ಕುಲಸಚಿವರ ಭರವಸೆ ಮೇರೆಗೆ ಪ್ರತಿಭಟನೆ ಕೈಬಿಟ್ಟರು. ಕೆಲಸದಿಂದ ಕೈಬಿಟ್ಟಿರುವ 56 ಮಂದಿ ಪೈಕಿ ಸಂಘದ ಅಧ್ಯಕ್ಷ ಎಂ.ನಾಗರಾಜು, ಎಂ.ಸ್ವಾಮಿ, ಸತೀಶ್, ಹರೀಶ್, ಬಿಳಿಗಿರಿ, ನಿಂಗನಾಯಕ ಸೇರಿದಂತೆ 10ಕ್ಕೂ ಹೆಚ್ಚು ಮಂದಿ ಪ್ರತಿಭಟನೆಯಲ್ಲಿದ್ದರು.

ಉಸ್ತುವಾರಿ ಸಚಿವರಿಂದ ಜಿಲ್ಲಾ ಹಾಪ್‌ಕಾಮ್ಸ್ ಮಳಿಗೆಗಳ ಶಂಕುಸ್ಥಾಪನೆ



ಮೈಸೂರು,ಏ.19–ಜಿಲ್ಲಾ ಹಾಪ್‌ಕಾಮ್ಸ್ ಸಂಸ್ಥೆಯ ನೂತನ ಹಣ್ಣು ತರಕಾರಿ ಮಾರಾಟ ಮಳಿಗೆಗಳ ಶಂಕುಸ್ಥಾಪನೆಯನ್ನು ಲಿಂಗಾಂಬುದಿ ಪಾಳ್ಯದಲ್ಲಿ ಸಹಕಾರ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೆರವೇರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಬೆಂಗಳೂರು ಕೆ.ಹೆಚ್.ಎಫ್ ಅಧ್ಯಕ್ಷ ಡಾ.ಬಿ.ಡಿ. ಭೂಕಾಂತ್, ಉಪಾಧ್ಯಕ್ಷರಾದ ಸೂರ್ಯಕುಮಾರ್, ಸಂಘದ ಆಡಳಿತ ಮಂಡಳಿ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ನಿರ್ದೇಶಕರಾದ ಬಿ.ಪಿ.ಬೋರೇಗೌಡ, ರಘು, ಟಿ.ರಾಮೇಗೌಡ, ಡಿ.ಪದ್ಮನಾಭ್, ವೈ.ಜಿ.ಮಹೇಂದ್ರ, ಎಸ್.ಆರ್.ಶ್ರೀನಿವಾಸ್, ಬಿ.ಎನ್.ಪ್ರಭುಸ್ವಾಮಿ, ಜೆ.ಮಹದೇವ, ಹೆಚ್.ಎಸ್.ಚಂದ್ರೇಗೌಡ, ಸೋಮಶೇಖರ್, ಕೆ.ಸುಜಾತ, ಎಸ್.ಜಿ.ನಳಿನಿ, ವಿಜಯ್‌ಕುಮಾರ್, ವ್ಯವಸ್ಥಾಪಕ ನಿರ್ದೇಶಕ ಚೇತನ್ ಇನ್ನಿತರರು ಉಪಸ್ಥಿತರಿದ್ದರು.

ಬೋರಪ್ಪ ನಿಧನ



ಮೈಸೂರು, ಏ.19– ನಗರದ ಕೆ.ಜಿ. ಕೊಪ್ಪಲಿನ ಮದ್ದೂರಮ್ಮನ ಸಣ್ಣಪ್ಪರವರ ಮಗ ಬೋರಪ್ಪ (71) ಮಂಗಳವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ (ಏ.20) ಬೆಳಿಗ್ಗೆ 11ಕ್ಕೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನಲ್ಲಿ ಕೆಲವೆಡೆ ಭಾರೀ ಗಾಳಿ–ಮಳೆ

ಐಶ್ವರ್ಯ ಬಡಾವಣೆ ಜಲಾವೃತ, ಜನಜೀವನ ಅಸ್ತವ್ಯಸ್ತ, ಪರದಾಟ





ಮೈಸೂರು, ಏ.19(ಜಿಎ)– ಮೈಸೂರಿನಲ್ಲಿ ಮಳೆ ಮುಂದುವರೆದಿದ್ದು, ಮಂಗಳವಾರ ಸುರಿದ ಮಳೆಗೆ ಬಡಾವಣೆಯೊಂದು ಜಲಾವೃತವಾದರೆ, ವಿವಿಧೆಡೆ 4 ಮರದ ರೆಂಬೆ–ಕೊಂಬೆಗಳು ಮುರಿದು ಬಿದ್ದಿವೆ.

ಕಳೆದ ಎರಡು ದಿನಗಳಿಂದ ಮೋಡ ಮುಸುಕಿದ ವಾತಾವರಣದಿಂದ ಕೂಡಿದ್ದ ಮೈಸೂರಿನಲ್ಲಿ ಮಂಗಳವಾರ ರಾತ್ರಿ ಕೆಲವೆಡೆ ಭಾರೀ ಗಾಳಿ ಸಮೇತ ಮಳೆಯಾಯಿತು. ಪರಿಣಾಮ ಐಶ್ವರ್ಯ ಬಡಾವಣೆ ಸಂಪೂರ್ಣ ಜಲಾವೃತ್ತಗೊಂಡಿದ್ದು, ಬಹುತೇಕ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ. ಅಲ್ಲದೆ ಹಾವು–ಚೇಳುಗಳು ಸಹ ನುಗ್ಗಿ ಕಾಟ ನಿವಾಸಿಗಳನ್ನು ಕಂಗೆಡಿಸಿದೆ.

ರಾತ್ರಿ 7.30ರ ಸುಮಾರಿಗೆ ಆರಂಭವಾದ ಮಳೆ ಕುವೆಂಪುನಗರ, ಜಯನಗರ, ವಿದ್ಯಾರಣ್ಯಪುರಂ, ಜೆಪಿ ನಗರ, ಸೇರಿದಂತೆ ವಿವಿಧೆಡೆ ತಡರಾತ್ರಿಯವರೆಗೂ ಸುರಿಯಿತು. ಕುವೆಂಪುನಗರದ ಉದಯ ರವಿ ರಸ್ತೆ, ಜಯನಗರದ ಇಸ್ಕಾನ್ ರಸ್ತೆ, ವಿದ್ಯಾರಣ್ಯಪುರಂನ 4ನೇ ಮುಖ್ಯರಸ್ತೆ ಮತ್ತು ಜೆಪಿ ನಗರದ ಪೊಲೀಸ್ ಬೂತ್ ಬಳಿ ಮರಗಳ ರಂಬೆ–ಕೊಂಬೆಗಳು ಮುರಿದು ಬಿದ್ದ ಪರಿಣಾಮ ಕೆಲಕಾಲ ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಪಾಲಿಕೆ ಅಭಯ–2ರ ರಾತ್ರಿ ಪಾಳಿಯ ಸಿಬ್ಬಂದಿ ಮರದ ರಂಬೆ–ಕೊಂಬೆಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.04.2022 ಬುಧವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022 ರಿಂದ 26.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ಚತುರ್ಥೀ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಉತ್ತಿಷ್ಠ ಭಾರತ ಸೇವಾ ಟ್ರಸ್ಟ್ :** ಶ್ರೀಧರಸ್ವಾಮಿಗಳ 49ನೇ ಆರಾಧನಾ ಮಹೋತ್ಸವ ಹಾಗೂ ಸಾಧಕರಿಗೆ ಸಾತ್ವಿಕ ರತ್ನ ಪ್ರಶಸ್ತಿ ಪ್ರದಾನ, ಉದ್ಘಾಟನೆ : ಮಹರ್ಷಿ ವಿದ್ಯಾಸಂಸ್ಥೆ ಮುಖ್ಯ ಕಾರ್ಯನಿರ್ವಾಹಕ ಡಾ. ಭವಾನಿ ಶಂಕರ್, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಮುಖ್ಯ ಅತಿಥಿಗಳು : ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್, ಉದ್ಯಮಿ ಕಡಕೊಳ ಜಗದೀಶ್, ಸಮಾಜ ಸೇವಕ ಎಂ.ಎನ್. ದೊರೆಸ್ವಾಮಿ, ಸ್ವಾಮೀಜಿ ಕುರಿತು ಮಾತನಾಡುವವರು : ಸ್ವಾನಂದ ಯೋಗಕೇಂದ್ರ ಸಂಸ್ಥಾಪಕರಾದ ಪೂರ್ಣಿಮಾ ಸಂದೀಪ್, ಸ್ಥಳ: ಆವನಿ ಶಂಕರ ಮಠ, ವಿದ್ಯಾರಣ್ಯಪುರಂ, ಬೆಳಗ್ಗೆ 10.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಸೆಂಟರ್ ಫಾರ್ ಜಿಯೋ–ಇನ್‌ಫರ್ಮ್ಯಾಟಿಕ್ ಟೆಕ್ನಾಲಜಿ :** ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ, ಉದ್ಘಾಟನೆ : ನಿವೃತ್ತ ಮುಖ್ಯ ಅಭಿಯಂತರ ಶಂಕರ್ ದೇವನೂರು, ಮುಖ್ಯ ಅತಿಥಿಗಳು : ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ. ಚೌಡಯ್ಯ, ಅಧ್ಯಕ್ಷತೆ : ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ. ಪಿ. ಜಯಶ್ರೀ, ಸ್ಥಳ: ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ:** ಹಂಪಿ ಕನ್ನಡ ವಿಶ್ವವಿದ್ಯಾಲಯದ 'ನಾಡೋಜ' ಪುರಸ್ಕೃತರಿಗೆ ಅಭಿನಂದನಾ ಸಮಾರಂಭ, ಅಭಿನಂದಿಸುವವರು: ಶಾಸಕ ಎಲ್.ನಾಗೇಂದ್ರ, ಅಭಿನಂದನಾ ನುಡಿ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್:** ಗ್ರಾಫಿಕ್ ಎರಾ ಡೀಮ್ಡ್ ಟು ಬಿ ಯೂನಿವರ್ಸಿಟಿ ಡೆಹರಾಡೂನ್ ಅಂಡ್ ಇಂಡಸ್ ಯೂನಿವರ್ಸಿಟಿ, ಅಹಮದಾಬಾದ್‌ನ ವಿಶ್ರಾಂತ ಉಪಕುಲಪತಿ ಡಾ.ಗಿರಿಧರ್‌ರಿಂದ ಮಾಡ್ಯುಲರ್ ಇಂಜಿನಿಯರಿಂಗ್ ಎಜುಕೇಷನ್ ಕುರಿತು ಉಪನ್ಯಾಸ, ಗೌರವ ಅತಿಥಿಗಳು: ಎಂಐಟಿ ಇಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲ್ ಡಾ.ಕೃಷ್ಣೇಗೌಡ, ಅಧ್ಯಕ್ಷತೆ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ.

■ **ರೋಟರಿ ಮೈಸೂರು ಮಿಡ್‌ಟೌನ್:** ಪತ್ರಿಕೋದ್ಯಮದಲ್ಲಿನ ಶ್ರೇಷ್ಠತೆಗಾಗಿ ರೋಟರಿ–ಸಿಲಿಕಾನ್ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪ್ರದಾನ: ಅಕಾಡೆಮಿ ನ್ಯೂಸ್‌ಪೇಪರ್ಸ್ ಪ್ರೈವೇಟ್ ಲಿ. ವ್ಯವಸ್ಥಾಪಕ ನಿರ್ದೇಶಕರಾದ ವಿಕ್ರಮ್ ಮುತ್ತಣ್ಣ, ಪ್ರಶಸ್ತಿಗೆ ಭಾಜನರು: ಡೆಕ್ಕನ್ ಹೆರಾಲ್ಡ್ ಬ್ಯೂರೋ ಚೀಫ್ ಟಿ.ಆರ್.ಸತೀಶ್‌ಕುಮಾರ್, ಪತ್ರಿಕಾ ಛಾಯಾಗ್ರಾಹಕ ಗವಿಮಠ ರವಿ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಡಿ.ಪುರುಷೋತ್ತಮ್, ಎಂ.ಆರ್. ಸುಧಾ, ವ್ಯಾಖ್ಯಾನ– ಡಾ.ಜಿ.ಆರ್.ತಿಪ್ಪೇಸ್ವಾಮಿ, 7.15 ಪ್ರಾಯೋಜಿತ ಕಾರ್ಯಕ್ರಮ 'ಕೌಶಲ್ಯ ಕರ್ನಾಟಕ'. ಪ್ರಾಯೋಜಕರು ರಾಜ್ಯ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ–ಬಾನುಲಿ ಸರಣಿ, 10.00 ಕೌಶಲ್ಯ ಕರ್ನಾಟಕ–ಪ್ರಾಯೋಜಿತ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರ ನಾಮ–ಎನ್.ಶ್ರೀನಾಥ್, ಶಂಕರ್ ಶ್ಯಾನುಭಾಗ್, 12.45 ಜನಪದ ಸಂಗೀತ–ಜಯಮ್ಮ ಮತ್ತು ತಂಡ, 1.20 ಭಾವಗೀತೆ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ– ಎಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ದಂತ ವೈದ್ಯೆ ಹಾಗೂ ಗಾಯಕಿ ಡಾ.ಸ್ನೇಹಶ್ರೀ ನಿರ್ಮಲ್‌ಕುಮಾರ್ ಅವರೊಂದಿಗೆ ಮಾತುಕತೆ, ನಡೆಸಿಕೊಡುತ್ತಾರೆ ಅಬ್ದುಲ್ ರಶೀದ್, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ.ಮಳಿಮಠ್ ಮತ್ತು ಕೆ.ಬಿ.ಮೀನಾ, 4.45 ಹಿಂದಿ ಪಾಠ, ಪ್ರಸ್ತುತಿ–ಕಿಶೋರ್ ಎಂ.ಕಾಕಡೆ, 6.50 ಕೃಷಿರಂಗ–ಕಿಸಾನ್ ವಾಣಿ, ಬಹು ಬೆಳೆ ಪದ್ಧತಿ ಹಾಗೂ ಫಲವತ್ತತೆ ಕುರಿತು ಆರ್.ಲೋಹಿತ್ ಅವರೊಡನೆ ಮಾತುಕತೆ, 9.05 ಕ್ಷಿತಿಜ– Literacy ಗುರು, ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಹಳ್ಳಿ ಹಾಡು, ಪ್ರಸ್ತುತಿ– ಅಬ್ದುಲ್ ರಶೀದ್, 10.30 ಸವಿನೆನಪು

ವಿವಿಧೆಡೆ ಶ್ರೀ ರಾಮನವಮಿ



■ **ಗಾನವಿಶಾರದ ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 106ನೇ ವಾರ್ಷಿಕ ಪಾರಂಪರಿಕ ರಾಮನವಮಿ ಸಂಗೀತೋತ್ಸವ, ವಿದ್ವಾನ್ ಟಿ.ಎಂ.ಕೃಷ್ಣ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದುಷಿ ಅಕ್ಕರೈ ಸುಬ್ಬಲಕ್ಷ್ಮಿ–ಪಿಟೀಲು, ವಿದ್ವಾನ್ ತುಮಕೂರು ಬಿ ರವಿಶಂಕರ್–ಮೃದಂಗ, ವಿದ್ವಾನ್ ಗಿರಿಧರ್ ಉಡುಪ –ಘಟಂ, ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ ಸಂಜೆ 5.30ಕ್ಕೆ

■ **ಶ್ರೀ ರಾಮ ಸೇವಾ ಮಂಡಲಿ :** ಶ್ರೀ ರಾಮೋತ್ಸವ ಕಾರ್ಯಕ್ರಮ, ಸಂಜೆ 6ಕ್ಕೆ ಶ್ರೀ ಹನುಮಂತೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ, 4ನೇ ಮೇನ್ 9ನೇ ಕ್ರಾಸ್.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀರಾಮ ಪಟ್ಟಾಭಿಷೇಕ, ಬೆಳಗ್ಗೆ 9.30ಕ್ಕೆ ಅಭಿಷೇಕ, ಅರ್ಚನೆ, ಶ್ರೀಮತಿ ವಸಂತ ವೆಂಕಟೇಶ ಅವರಿಂದ ಗಮಕ ವಾಚನ, ವ್ಯಾಖ್ಯಾನ : ಕೃ. ರಾಮಚಂದ್ರ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಸಂಜೆ 6.30 ರಿಂದ.

ಅಳಗಂಚಿ, ನಂಜನಗೂಡು ತಾಲೂಕು

■ **ಜೆಎಸ್‌ಎಸ್ ಡಿಇಡಿ ಕಾಲೇಜು ಸುತ್ತೂರು:** ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ವಾರ್ಷಿಕ ಶಿಬಿರ ಅಧ್ಯಕ್ಷತೆ: ಮಧ್ಯಾಹ್ನ ಬಿಸಿಯೂಟ ಯೋಜನೆ ಸಹಾಯಕ ನಿರ್ದೇಶಕ ಬಿ. ಮಲ್ಲಿಕಾರ್ಜುನಸ್ವಾಮಿ, ಸಬ್ ಇನ್ಸ್‌ಪೆಕ್ಟರ್ ಬಿ.ಮಹೇಂದ್ರ ಅವರಿಂದ ಸಾರ್ವಜನಿಕರು ಹಾಗೂ ಆರಕ್ಷಕರ ನಡುವಿನ ಬಾಂಧವ್ಯ ಕುರಿತು ಉಪನ್ಯಾಸ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ ಅಳಗಂಚಿ, ಸಮಯ ಸಂಜೆ 5.30

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 20 ಬುಧವಾರ 2022

ಸಂಪುಟ: 43 | ಸಂಚಿಕೆ: 05 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

15 ದಿನದಲ್ಲಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಆರಂಭ

● ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಘೋಷಣೆ ● ಪಿ.ಪಟ್ಟಣದಲ್ಲಿ ತಾಲೂಕು ಉಪಕಚೇರಿ ನೂತನ ಕಟ್ಟಡ, ರಾಸು ಮೇಳ ಉದ್ಘಾಟನೆ ● ಕ್ಷೀರ ಬ್ಯಾಂಕ್, ಡಿಸಿಸಿ ಬ್ಯಾಂಕ್ ವಿಲೀನ ಇಲ್ಲ

ಪಿರಿಯಾಪಟ್ಟಣ, ಏ.19 (ವೀರೇಶ್)– 'ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್' ಇನ್ನು 15 ದಿನಗಳಲ್ಲಿ ಕಾರ್ಯಾರಂಭಿಸುವ ಸಾಧ್ಯತೆ ಇದೆ ಎಂದು ಸಹಕಾರ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಇಂದಿಲ್ಲಿ ತಿಳಿಸಿದರು.

ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಪಿರಿಯಾಪಟ್ಟಣ ತಾಲೂಕು ಉಪ ಕಚೇರಿಯ ನೂತನ ಕಟ್ಟಡ ಹಾಗೂ ರಾಸು ಮೇಳವನ್ನು ಉದ್ಘಾಟಿಸಿ ಮಾತನಾಡಿ, ರೈತರ ಬಗ್ಗೆ ಅಪಾರ ಕಾಳಜಿ ಹೊಂದಿರುವ ಮುಖ್ಯಮಂತ್ರಿಗಳು 'ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್' ಸ್ಥಾಪಿಸುವುದಾಗಿ ಘೋಷಿಸಿದ್ದು, ಈಗಾಗಲೇ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಲೋಗೋ ಬಿಡುಗಡೆ ಮಾಡಿದ್ದಾರೆ. ರಿಸರ್ವ್ ಬ್ಯಾಂಕ್ ಅನುಮತಿಯೊಂದಿಗೆ ಇನ್ನು 15 ದಿನಗಳಲ್ಲಿ ಬ್ಯಾಂಕ್ ಕಾರ್ಯಾರಂಭಿಸಲಿದೆ ಎಂದರು.

ವಿಲೀನ ಮಾಡುವುದಿಲ್ಲ: ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್‌ಗಳನ್ನು ಜಿಲ್ಲಾ ಸಹಕಾರ ಕೇಂದ್ರ(ಡಿಸಿಸಿ) ಬ್ಯಾಂಕ್‌ನೊಂದಿಗೆ ವಿಲೀನಗೊಳಿಸುವ ಪ್ರಮೇಯವೇ ಇಲ್ಲ. ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುವ ಕ್ಷೀರ ಸಮೃದ್ಧಿ ಬ್ಯಾಂಕ್‌ಗಳ ಮೂಲಕ ಹಾಲು ಉತ್ಪಾದಕರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಇದರಿಂದ ರೈತರ ಅಭಿವೃದ್ಧಿ ಜೊತೆಗೆ ಸಹಕಾರ ಕ್ಷೇತ್ರದ ಬೆಳವಣಿಗೆಗೂ ನೆರವಾಗುತ್ತದೆ ಎಂದು ತಿಳಿಸಿದರು.

'ಯಶಸ್ವಿನಿ'ಗೂ ಚಾಲನೆ: ರಾಜ್ಯ ಪ್ರವಾಸದ ವೇಳೆ ಎಲ್ಲೆಡೆ ಸಹಕಾರಿಗಳು ಯಶಸ್ವಿನಿ ಯೋಜನೆ ಜಾರಿಗೆ ಬೇಡಿಕೆ ಇಟ್ಟಿದ್ದರು. ಈ ನಿಟ್ಟಿನಲ್ಲಿ 2–3 ವರ್ಷದಿಂದ ಪ್ರಯತ್ನಿಸಲಾಗಿತ್ತು. ಇದೀಗ 'ಯಶಸ್ವಿನಿ' ಮರುಜಾರಿ ಮಾಡುವುದಾಗಿ ಮುಖ್ಯಮಂತ್ರಿ ಬೊಮ್ಮಾಯಿ ಘೋಷಿಸಿದ್ದು, ಕೇಂದ್ರ ಸಚಿವ ಅಮಿತ್ ಶಾ ಅವರು ಈಗಾಗಲೇ ವಿಧ್ಯುಕ್ತ ಚಾಲನೆ ನೀಡಿದ್ದಾರೆ. ಇನ್ನು 15–20 ದಿನಗಳಲ್ಲಿ ರಾಜ್ಯದಲ್ಲಿ ಮತ್ತೆ 'ಯಶಸ್ವಿನಿ' ಯೋಜನೆ ಜಾರಿಯಾಗಲಿದ್ದು, ರೈತರು, ಸಹಕಾರಿಗಳ ಆರೋಗ್ಯ ಕವಚವಾಗಿರಲಿದೆ ಎಂದು ಹೇಳಿದರು.

● 8ನೇ ಪುಟಕ್ಕೆ



ಪಿರಿಯಾಪಟ್ಟಣದ ತಾಲೂಕು ಉಪ ಕಚೇರಿಯ ನೂತನ ಕಟ್ಟಡವನ್ನು ಮಂಗಳವಾರ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸಿದರು. ಈ ವೇಳೆ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಮಹದೇವ್, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಇನ್ನಿತರರಿದ್ದರು.

ಡಿಸಿಸಿ ಬ್ಯಾಂಕ್‌ಗಳ ಮೂಲಕ ಈ ವರ್ಷ 33 ಲಕ್ಷ ರೈತರಿಗೆ 24 ಸಾವಿರ ಕೋಟಿ ರೂ. ಸಾಲ ವಿತರಿಸುವ ಗುರಿ ಹೊಂದಲಾಗಿದೆ. ಇದರಲ್ಲಿ 3 ಲಕ್ಷ ಹೊಸ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಸಿಗಲಿದೆ. ಅಲ್ಲದೇ 100 ಕೋಟಿ ರೂ. ಹಸು ಸಾಲ ನೀಡಲು ನಿರ್ಧರಿಸಲಾಗಿದೆ. ಮೈಸೂರು ಭಾಗದಲ್ಲಿ ರಾಗಿ ಹೆಚ್ಚಾಗಿ ಬೆಳೆದಿರುವುದರಿಂದ ರಾಗಿ ಖರೀದಿ ಕೇಂದ್ರಗಳನ್ನು ಮತ್ತೆ ಪ್ರಾರಂಭ ಮಾಡಬೇಕೆಂದು ಸಿಎಂ ಭೇಟಿ ಮಾಡಿ ಮನವಿ ಮಾಡಿದ ತಕ್ಷಣವೇ ಅವರು ಅನುಮತಿ ನೀಡಿದ್ದಾರೆ. ಬಿತ್ತನೆ ಬೀಜ, ರಸಗೊಬ್ಬರದ ಅವಶ್ಯಕತೆ ಕುರಿತು ಚರ್ಚಿಸಲು ಕೃಷಿ ಸಚಿವರು 2 ದಿನ ಮೈಸೂರು ಪ್ರವಾಸ ಕೈಗೊಳ್ಳಲಿದ್ದು, ಸಮಸ್ಯೆಗಳಿದ್ದರೆ ಸ್ಥಳದಲ್ಲೇ ಪರಿಹರಿಸಲಿದ್ದಾರೆ.

–ಎಸ್.ಟಿ.ಸೋಮಶೇಖರ್, ಸಚಿವ

ಕೇಂದ್ರ, ರಾಜ್ಯದಲ್ಲಿ ಇರುವುದು ಭ್ರಷ್ಟ ಸರ್ಕಾರ



ಚಾಮರಾಜನಗರ,ಏ.19 (ಎಸ್‌ಎಸ್)–ದೇಶ ಹಾಗೂ ರಾಜ್ಯದಲ್ಲಿಂದು ರೈತ–ಜನ ವಿರೋಧಿ ಸರ್ಕಾರ ಅಧಿಕಾರದಲ್ಲಿದ್ದು, ನನ್ನ 45 ವರ್ಷದ ರಾಜಕಾರಣದಲ್ಲಿ ಇಷ್ಟು ಸುಳ್ಳು ಹೇಳುವ, ಸಮಾಜದಲ್ಲಿ ಅಶಾಂತಿ ಸೃಷ್ಟಿಸಿರುವ ಸರ್ಕಾರಗಳನ್ನು ನೋಡಿರಲಿಲ್ಲ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು. ಭ್ರಷ್ಟಾಚಾರ–ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಹಾಗೂ ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ಈಶ್ವರಪ್ಪ ಅವರನ್ನು ಬಂಧಿಸುವಂತೆ ಒತ್ತಾಯಿಸಿ ನಗರದಲ್ಲಿ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದರು.

(ವರದಿ ಪುಟ–4)

ಏ.22ರಿಂದ ದ್ವಿತೀಯ ಪಿಯುಸಿ ಪರೀಕ್ಷೆ ಪ್ರಾರಂಭ

● ಯಾವುದೇ ಧರ್ಮಸೂಚಕ ವಸ್ತ್ರ ಬಳಕೆಗೆ ಅವಕಾಶವಿಲ್ಲ
● ಪರೀಕ್ಷಾ ಅಕ್ರಮಗಳಿಗೆ ಅವಕಾಶವಿಲ್ಲದಂತೆ ಕಠಿಣ ಕ್ರಮ



ಬೆಂಗಳೂರು ಏ.19 (ಕೆಎಂಶಿ)–ಹತ್ತನೇ ತರಗತಿ ಪರೀಕ್ಷೆಯಂತೆಯೇ ಇದೇ 22ರಿಂದ ಮೇ 18ರವರೆಗೆ ನಡೆಯುವ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಗೆ ಯಾವುದೇ ಧರ್ಮ ಸೂಚಕ ವಸ್ತ್ರ ಬಳಸಲು ಅವಕಾಶವಿಲ್ಲ. ಪರೀಕ್ಷೆ ನಡೆಸಲು ಪದವಿಪೂರ್ವ ಶಿಕ್ಷಣ ಇಲಾಖೆ ಸಂಪೂರ್ಣ ಸಿದ್ಧತೆ ಮಾಡಿಕೊಂಡಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಶ್ನೆ ಪತ್ರಿಕೆ ಸೋರಿಕೆಯಾಗದಂತೆ ಕಟ್ಟುನಿಟ್ಟಿನ ವ್ಯವಸ್ಥೆ ಮಾಡಲಾಗಿದೆ. ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳಿಗೆ ಉತ್ತೇಜನ ನೀಡುವಂತಹ ವ್ಯಕ್ತಿಗಳ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಂಡು ವಶಕ್ಕೆ ಪಡೆಯುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ ಎಂದರು.

ರಾಜ್ಯದ ಒಟ್ಟು 1,076 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. 6,84,255 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

● 8ನೇ ಪುಟಕ್ಕೆ

ಬಂಡೀಪುರದ ಆನೆಗೆ ಅವಳಿ ಭಾಗ್ಯ

● ಎಂ.ಟಿ.ಯೋಗೇಶ್‌ಕುಮಾರ್

ಬಂಡೀಪುರ,ಏ.19–ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ವಲಯದಲ್ಲಿ ಆನೆಯೊಂದು ಅವಳಿ ಮರಿಗಳಿಗೆ ಜನ್ಮ ನೀಡಿದ್ದು, ಬಹುಶಃ ಕಾಡಾನೆಯೊಂದು ಅವಳಿ ಮರಿಗಳಿಗೆ ಜನ್ಮ ನೀಡಿರುವುದು ದೇಶದಲ್ಲೇ ಮೊದಲು.

ದಶಕದ ಹಿಂದೆ ಶ್ರೀಲಂಕಾದ ಮೃಗಾಲಯದಲ್ಲಿ ಆನೆಯೊಂದು ಅವಳಿ ಮರಿಗಳಿಗೆ ಜನ್ಮ ನೀಡಿದ್ದು ಸುದ್ದಿಯಾಗಿತ್ತು. ಕೆಲ ವರ್ಷಗಳ ಹಿಂದೆ ತಮಿಳುನಾಡಿನ ದಿಂಬಂ ರಸ್ತೆಯಲ್ಲಿ ಹೆಣ್ಣಾನೆಯೊಂದು ಒಂದೂವರೆ ವರ್ಷದ ಎರಡು ಮರಿಗಳೊಂದಿಗೆ ನಿಂತಿದ್ದನ್ನು ನೋಡಿದ್ದಾಗಿ ಕೆಲವರು ಪ್ರತಿಪಾದಿಸಿದ್ದರು. ಇದಾವುದೂ ಖಚಿತವಾಗಿರಲಿಲ್ಲ ಆದರೆ, ಇದೀಗ ಬಂಡೀಪುರದಲ್ಲಿ ಕಾಡಾನೆ ಅವಳಿ ಮರಿಗಳಿಗೆ ಜನ್ಮ ನೀಡಿರುವುದು ವಿಶೇಷ ಮತ್ತು ಅಪರೂಪದ್ದಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹಳೆ



● 8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : "ಮಕ್ಕಳೇ, ಇಂದು ನಾನು ಹೇಳುವ ಪಾಠ ಬಹಳ ಮಹತ್ವದ್ದು. ಆದ್ದರಿಂದ ನೀವೆಲ್ಲರೂ ಲಕ್ಷ್ಯಕೊಟ್ಟು ಕೇಳಬೇಕು"

ವಿದ್ಯಾರ್ಥಿ : "ಸಾರ್ ನಿಮ್ಮ ಆ ಮಹತ್ವದ ಪಾಠವನ್ನು ನಾವು 'ಲಕ್ಷ' ಕೊಟ್ಟು ಕೇಳಬೇಕೆ?"

ಮೈಸೂರು ಮಿತ್ರ

ಬುಧವಾರ, 20 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸೋಲು ಎಂದರೇನು? ಏನಿಲ್ಲ, ಅದೊಂದು ಉತ್ತಮತೆಯ ಕಡೆಗೆ ಮೊದಲ ಹೆಜ್ಜೆ – ವೆಂಡಲ್ ಫಿಲಿಪ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಡುಗೆ ಮಾಡುವವನು ಒಬ್ಬನಾದರೆ ಹದ ಹಿಡಿಯುವವರು ಒಂಭತ್ತು ಮಂದಿ

ನಿಮ್ಮ ಪತ್ರಗಳು

ಆಡಳಿತಗಾರರಿಗೆ ಅಭಿವೃದ್ಧಿಯೇ ಮೂಲ ಸಿದ್ಧಾಂತವಾಗಲಿ...

ಮಾನ್ಯರೆ,

ಕರ್ನಾಟಕದಲ್ಲಿ ಯಡ್ಯೂರಪ್ಪನವರ ನಂತರ ಬಂದ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರ ಜನರ ನಿರೀಕ್ಷೆಗಳನ್ನು ಇಮ್ಮಡಿಗೊಳಿಸಿತು.

ಹೊಸ ಆಲೋಚನೆಗಳಿಂದ ಬಡವರು, ಮಧ್ಯಮ ವರ್ಗದವರು ಮತ್ತು ರೈತರಿಗೆ ಅನುಕೂಲವಾಗುವ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತವೆ ಎಂದು ಕಾದಿದ್ದ ಜನರಿಗೆ ನಿರಾಸೆ ಉಂಟಾಗುತ್ತಿದೆ.

ಬೆಲೆ ಏರಿಕೆ ನಿಯಂತ್ರಣದಂತಹ ಜನೋಪಯೋಗಿ ಕೆಲಸಗಳಿಂದ ಮುಂದುವರಿಯಬೇಕಾದ ಬಿಜೆಪಿ ಸರ್ಕಾರ ಧರ್ಮ ಆಧಾರಿತ ರಾಜಕೀಯದೊಂದಿಗೆ ಮುಂದುವರಿಯುತ್ತಿರುವುದು ಶೋಚನೀಯವೇ ಸರಿ.

ಮೋದಿ ಮತ್ತು ಯೋಗಿಯವರ ಮರು ಆಯ್ಕೆ ತಮ್ಮ ಜನಪ್ರಿಯ ಕಾರ್ಯಗಳಿಂದ ಆದದ್ದೇ ಹೊರತು ಧರ್ಮ ಆಧಾರಿತ ರಾಜಕೀಯದಿಂದಲ್ಲ ಎಂಬುದನ್ನು ನಾವು ಇಲ್ಲಿ ಮನಗಾಣಬಹುದಾಗಿದೆ.

ಆಡಳಿತ ಚುಕ್ಕಾಣಿ ಹಿಡಿದಿರುವವರು ಎಲ್ಲಾ ವಿಚಾರಗಳಲ್ಲಿಯೂ ನಿಖರ ಹಾಗೂ ದೃಢ ನಿಲುವುಗಳನ್ನು ತೆಗೆದುಕೊಳ್ಳದಿದ್ದರೆ, ಮುಂದೆ ಅವರಿಗೆ ಇದೇ ಮುಳುವಾಗುವ ಸಾಧ್ಯತೆಗಳಿವೆ.

ಇನ್ನಾದರೂ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರ ಆಡಳಿತ ಯಂತ್ರವನ್ನು ಚುರುಕುಗೊಳಿಸಿ ವಿರೋಧ ಪಕ್ಷಗಳನ್ನು ಸಮರ್ಥವಾಗಿ ಎದುರಿಸಬೇಕಾಗಿದೆ.

ಭ್ರಷ್ಟಾಚಾರವನ್ನು ನಿಯಂತ್ರಿಸುತ್ತಾ ಅಭಿವೃದ್ಧಿಯನ್ನೇ ತಮ್ಮ ಮೂಲ ಸಿದ್ಧಾಂತವನ್ನಾಗಿಸಿ ಮುನ್ನಡೆಯದಿದ್ದರೆ, ಕೈಯಲ್ಲಿರುವ ಅಧಿಕಾರವನ್ನು ಕಳೆದುಕೊಂಡು ಅತಂತ್ರ ಪರಿಸ್ಥಿತಿ ತಲುಪಿದರೂ ಆಶ್ಚರ್ಯ ಪಡುವಂತಿಲ್ಲ...

–ಶಾಂತಾರಾಮ್ ಶೆಟ್ಟಿ, ಮೈಸೂರು. ಮೊ. 9972946618

ಬೀದಿ ದೀಪಗಳನ್ನು ಬದಲಾಯಿಸಿ



ಮಾನ್ಯರೆ,

ಮೈಸೂರು ನಗರದ ಜೆ.ಪಿ. ನಗರದ 3ನೇ ಹಂತ, ಇ ಬ್ಲಾಕ್, ಸಿ ವಲಯ, 17ನೇ ಮುಖ್ಯ ರಸ್ತೆ ಸಾಯಿಬಾಬಾ ದೇವಸ್ಥಾನದ ರಸ್ತೆಯಲ್ಲಿರುವ 'ನಾಚನಹಳ್ಳಿ ಕುಪ್ಪಲೂರು 3ನೇ ಹಂತ' ಎಂಬ ಫಲಕದ ಎದುರಿನಲ್ಲಿರುವ ಎರಡು ವಿದ್ಯುತ್ ಕಂಬಗಳಲ್ಲಿ ಒಂದು ಸೋಡಿಯಂ ದೀಪ ಮತ್ತು ಪಕ್ಕದ ಕಂಬದಲ್ಲಿ ಟ್ಯೂಬ್‌ಲೈಟ್ ಬಹಳ ದಿನಗಳಿಂದ ಕೆಟ್ಟಿರುತ್ತದೆ ಚಿತ್ರದಲ್ಲಿ ಕಾಣಿಸುವಂತೆ ಇದು ಮೂರು ರಸ್ತೆಗಳು ಕೂಡಿರುವ ತಿರುವಿನ ಸ್ಥಳವಾಗಿದ್ದು ನನ್ನಂಥಹ ಅನೇಕ ಹಿರಿಯ ನಾಗರಿಕರು ವಾಯು ವಿಹಾರಕ್ಕಾಗಿ ಸಂಜೆ ವೇಳೆ ಈ ರಸ್ತೆಯಲ್ಲಿಯೇ ಓಡಾಡುತ್ತಾರೆ. ಎರಡೂ ದೀಪಗಳು ಕೆಟ್ಟಿರುವುದರಿಂದ ಈ ಪ್ರದೇಶ ಕತ್ತಲುಮಯವಾಗಿದೆ. ಆದ ಕಾರಣ ತುರ್ತಾಗಿ ಈ ದೀಪಗಳನ್ನು ಬದಲಾಯಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ.

–ಕೆ.ಎನ್.ಅಶ್ವತ್ಥನಾರಾಯಣ, ಮೈಸೂರು.

ಅಂಚೆ ಕಚೇರಿ ವೇಳೆಯ ಗೊಂದಲ ಸರಿಪಡಿಸಿ

ಮಾನ್ಯರೆ,

ಕೆಲಸದ ನಿಮಿತ್ತವಾಗಿ ಪ್ರದಾನ ಅಂಚೆ ಕಚೇರಿಗೆ ರಿಜಿಸ್ಟರ್ ಪೋಸ್ಟ್ ಮಾಡಲು ಹೋದೆ. ಅಲ್ಲಿ ಮಧ್ಯಾಹ್ನ 2.30ರ ನಂತರ ರಿಜಿಸ್ಟರ್ ಪೋಸ್ಟ್ ತೆಗೆದುಕೊಳ್ಳುವುದಿಲ್ಲ. ನೀವು ವಿದ್ಯಾವರ್ಧಕ ಕಾಲೇಜಿನ ಹತ್ತಿರ ಹೋಗಿ ಅಂತ ಹೇಳಿ ಕಳುಹಿಸಿದರು. ಅಲ್ಲಿ ಹೋದರೆ ಸಂಜೆ 5.30ರ ನಂತರ ಬರಬೇಕು. ಅಲ್ಲಿಯ ತನಕ ತೆಗೆದುಕೊಳ್ಳುವುದಿಲ್ಲ ಎಂದು ಸಬೂಬು ಹೇಳುತ್ತಾರೆ. ಸರಿಯಾದ ಮಾಹಿತಿ ಇಲ್ಲದೆ ಗ್ರಾಹಕರು ಪರದಾಡಬೇಕಾಗುತ್ತದೆ. ಎಲ್ಲಾ ಅಂಚೆ ಕಚೇರಿಗಳಲ್ಲಿ ಯಾವ ಸಮಯದ ನಂತರ ಸ್ಪೀಡ್ ಪೋಸ್ಟ್ ತೆಗೆದುಕೊಳ್ಳುತ್ತಾರೆ ಮತ್ತು ರಿಜಿಸ್ಟರ್ ಪೋಸ್ಟ್ ತೆಗೆದುಕೊಳ್ಳುತ್ತಾರೆ ಎಂದು ವೇಳಾ ಫಲಕವನ್ನು ಹಾಕಲಿ. ಅಲ್ಲಿನ ಸಿಬ್ಬಂದಿಗಳು ಕೂಡ ಸಂಯಮದಿಂದ ಹೇಳಿ ಕಳುಹಿಸುವ ಸೌಜನ್ಯ ಕೂಡ ಇಲ್ಲ. ಸಂಬಂಧಿಸಿದ ಅಧಿಕಾರಿಗಳು ಇದನ್ನು ಸರಿಪಡಿಸಲಿ. ಗ್ರಾಹಕರಿಗೋಸ್ಕರ ಅಂಚೆ ಕಚೇರಿ. ಇದನ್ನು ಮನಗಾಣಲಿ.

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು

ಉದ್ಘಾಟನಾ ಫಲಕಕ್ಕೆ ಒದಗಿದ ದುರ್ಗತಿ

ಮಾನ್ಯರೆ,

ಮೈಸೂರಿನ ಜಯನಗರದ ಸಾರ್ವಜನಿಕ ಗ್ರಂಥಾಲಯ ಆರಂಭವಾಗಿ ಐದು ವರ್ಷಗಳೇ ಕಳೆದವು. ಆಗ ಉದ್ಘಾಟನಾ ಸಮಾರಂಭದ ವೇಳೆ ಗೋಡೆಗೆ ಅಳವಡಿಸ ಬೇಕಾದ ಉದ್ಘಾಟನಾ ಫಲಕವನ್ನು ಅಲ್ಲಿಂದ ಇಲ್ಲಿವರೆಗೆ ಬಾಗಿಲು ಬಳಿ ಗೋಡೆ ಒರಗಿಸಿ ನಿಲ್ಲಿಸಲಾಗಿದೆ. ಗ್ರಂಥಾಲಯಕ್ಕೆ ಬರುವ ಓದುಗರು ತಮ್ಮ ಪಾದರಕ್ಷೆಗಳನ್ನು ಈ ನಾಮಫಲಕಕ್ಕೇ ತಾಕಿಸಿ, ಅದರ ಮುಂದೆಯೇ ಬಿಡುತ್ತಾರೆ,



ಈ ಗ್ರಂಥಾಲಯದ ಮೊದಲ ಮಹಡಿಯ ಕಟ್ಟಡ ಅಂದಿನ ಸ್ಥಳೀಯ ನಗರಪಾಲಿಕೆ ಸದಸ್ಯರಾದ "ಚನ್ನಪ್ಪ" ನವರ ಪರಿಶ್ರಮ ಮತ್ತು ದೂರದೃಷ್ಟಿಯಿಂದ ನಿರ್ಮಾಣವಾಗಿತ್ತು.

ಇತ್ತೀಚೆಗೆ ಈ ಗ್ರಂಥಾಲಯಕ್ಕೆ ಭೇಟಿ ನೀಡಿದ್ದ ಈ ಭಾಗದ ಹಾಲಿ ಶಾಸಕರಾದ ಎಸ್.ಎ. ರಾಮದಾಸ್‌ರವರು ಈ ನಾಮಫಲಕವನ್ನು ಕೂಡಲೇ ಗೋಡೆಗೆ ಅಳವಡಿಸಿ ಎಂದು ಅಲ್ಲಿದ್ದ ಗ್ರಂಥಪಾಲಕರಿಗೆ ಹೇಳಿದ್ದರೂ, ಇದುವರೆಗೂ ಈ ಉದ್ಘಾಟನಾ ಫಲಕ ಕಾಲ ಕಸವಾಗಿ ಬಿದ್ದಿರುವುದು, ಗ್ರಂಥಪಾಲಕರ ಬೇಜವಾಬ್ದಾರಿ ಮತ್ತು ಆಸಡ್ಡೆಗೆ ಸಾಕ್ಷಿ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

ದಿನಾಂಕ: 19–04–2022
ಮೈಸೂರು – ಬೂಕನಕೆರೆ ವಿಜೇಂದ್ರ

ಸಾರ್ವಕಾಲಿಕ ಆಂಗ್ಲ ಸಾಹಿತಿ ಶೇಕ್ಸ್‌ಪಿಯರ್ ಜನ್ಮದಿನದ ಆಕರ್ಷಣೆ; ಏಕವ್ಯಕ್ತಿ ರಂಗಪ್ರಯೋಗ

'ಶೇಕ್ಸ್‌ಪಿಯರ್ ಶ್ರೀಮತಿ' ಪ್ರದರ್ಶನ

ಶೇಕ್ಸ್‌ಪಿಯರ್ ತೀರಿಕೊಂಡು ಸುಮಾರು ನಾನೂರು ವರ್ಷಗಳೇ ಕಳೆಯುತ್ತಾ ಬಂದಿವೆಯಾದರೂ ಇಂಗ್ಲಿಷ್ ಸಾಹಿತ್ಯ ಪ್ರೇಮಿಗಳಲ್ಲಿ ಅವನ ಬದುಕನ್ನೂ, ಕೃತಿಗಳನ್ನೂ ಕುರಿತಾದ ಆಸಕ್ತಿ ಸ್ವಲ್ಪವೂ ಕುಂದಿಲ್ಲ. ಇಂದಿಗೂ ಜಗತ್ತಿನ ಎಲ್ಲೆಡೆಯಲ್ಲಿ ಎಲ್ಲಾ ಭಾಷೆಗಳಲ್ಲಿ ಅವನ ನಾಟಕಗಳು ಹೊಸ ಹೊಸ ಪ್ರಯೋಗಗಳನ್ನು ಕಾಣುತ್ತಿವೆ. ಅವನ ಕೃತಿಗಳ ವಿಮರ್ಶೆ ಜೀವನಗಾಥೆಯನ್ನೂ ಕುರಿತಂತೆ ಹೊಸ ಹೊಸ ಹೊತ್ತಿಗೆಗಳು ಹೊರಬರುತ್ತಿವೆ. ಶೇಕ್ಸ್‌ಪಿಯರನನ್ನೂ ಕುರಿತಾದ ಲೇಖನಗಳಿಗೆ ಮೀಸಲಾಗಿರುವ ಶೇಕ್ಸ್‌ಪಿಯರ್‌ನ ಕ್ವಾರ್ಟರ್ಲೀ ಪತ್ರಿಕೆಗಳಲ್ಲಿ ಸಿಗುವ ಮಾಹಿತಿಯ ಪ್ರಕಾರ ಪ್ರತಿವರ್ಷ ಶೇಕ್ಸ್‌ಪಿಯರ್‌ನಿಗೆ ಸಂಬಂಧಿಸಿದಂತೆ ಕನಿಷ್ಠ 4000 ಕೃತಿಗಳು ಪ್ರಕಟವಾಗುತ್ತಿವೆಯಂತೆ. ಶೇಕ್ಸ್‌ಪಿಯರನ ಹುಟ್ಟೂರಾದ ಸ್ಟ್ರಾರ್ಡ್‌ಫರ್ಡಿಗೆ ವರ್ಷಕ್ಕೆ ಸುಮಾರು ಒಂದೂ ಕಾಲು ಲಕ್ಷ ಪ್ರವಾಸಿಗರು ಭೇಟಿ ನೀಡುತ್ತಾರೆ. ಸ್ಟ್ರಾರ್ಡ್‌ಫರ್ಡ್‌ನ ಮುಖ್ಯ ಆಕರ್ಷಣೆಗಳಲ್ಲೊಂದಾದ ಶೇಕ್ಸ್‌ಪಿಯರ್‌ನ ಹೆಂಡತಿ ಆನಾ ಹ್ಯಾತ್‌ವೇಯ ಸುಂದರ ಕಾಟೇಜ್.


ಶೇಕ್ಸ್‌ಪಿಯರನ ಬದುಕನ್ನೂ ಹಾಗೂ ಅವನ ಹೆಂಡತಿಯನ್ನೂ ಕುರಿತಂತೆ ದೊರೆತಿರುವ ಖಚಿತವಾದ ಮಾಹಿತಿಗಳು ಅತ್ಯಲ್ಪವೇ ಆದರೂ, ಶೇಕ್ಸ್‌ಪಿಯರನಿಗಿಂತ ಎಂಟು ವರ್ಷ ಹಿರಿಯಳು ಎಂಬ ಒಂದೇ ಕಾರಣಕ್ಕಾಗಿ ಆನಾ ಹ್ಯಾತ್ ವೇ ಬಹಳಷ್ಟು ಶೇಕ್ಸ್‌ಪಿಯರ್ ಭಕ್ತರು, ವಿಮರ್ಶಕರ ಅವಕೃಪೆಗೆ ಒಳಗಾಗಿದ್ದಾಳೆ. ಮದುವೆಯಾದ 2–3 ವರ್ಷಗಳಲ್ಲೇ ಶೇಕ್ಸ್‌ಪಿಯರ್ ಅವಳನ್ನೂ ಬಿಟ್ಟು ಲಂಡನ್ನಿಗೆ ತೆರಳಿದ್ದಕ್ಕೆ ಕಾರಣ ಅವಳೊಂದಿಗೆ ಬದುಕು ಅಸಹನೀಯವಾಗಿದ್ದು ಎಂದೇ ಅವರ ಅಂಬೋಣ. ಅವರ ದೃಷ್ಟಿಯಲ್ಲಿ ಶೇಕ್ಸ್‌ಪಿಯರ್‌ನ ನಾಟಕಗಳಲ್ಲಿ ಕಾಣಿಸಿಕೊಳ್ಳುವ ಎಲ್ಲಾ ಕೆಟ್ಟ, ಬಜಾರಿ ಹೆಣ್ಣು ಪಾತ್ರಗಳಿಗೆ ಅವಳೇ ಮಾದರಿ.

ವಾಸ್ತವವಾಗಿ, ಆನಾ 18 ವರ್ಷದ ಮುಗ್ಧ ಬಾಲಕನ ದಾರಿ ತಪ್ಪಿಸಿ, ಮೋಸದಿಂದ ಗರ್ಭ ಧರಿಸಿ ಅವನನ್ನೂ ಇಷ್ಟವಿಲ್ಲದ ಮದುವೆಯಲ್ಲಿ ಸಿಕ್ಕಿ ಹಾಕಿಸುವಂತಹ ಕ್ಷುದ್ರ ಹೆಣ್ಣೇ? ಶೇಕ್ಸ್‌ಪಿಯರ್ ತನ್ನಿಂದ ತಪ್ಪಿಸಿಕೊಂಡು ಲಂಡನ್ನಿಗೆ ಓಡಿಹೋಗುವಷ್ಟು ಅವನ ಬದುಕನ್ನು ಅಸಹನೀಯವಾಗಿಸಿದಳೇ? ಹಾಗಾದರೆ ಅವನು ಕೊನೆಗಾಲದಲ್ಲಿ ಅವಳ ಬಳಿಗೆ ಹಿಂತಿರುಗಿದ್ದೇಕೆ? ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ಒಂಟಿಯಾಗಿದ್ದರೂ ಅವಳ ಹೆಸರಿಗೆ ಯಾವುದೇ ಕಳಂಕ ಬಾರದಂತೆ ಬದುಕಿದ್ದು, ಒಬ್ಬಳೇ ದುಡಿದು ಮಕ್ಕಳನ್ನು ಸಾಕಿದ್ದು, ಕೊನೆಗಾಲದಲ್ಲಿ ಅವನ ಆರೈಕೆ ಮಾಡಿದ್ದು–ಇವ್ಯಾವುದೂ ಚರಿತ್ರಕಾರರ ಕಣ್ಣಿಗೆ ಬೀಳಲಿಲ್ಲ ಏಕೆ?

ಜರ್ಮೇನ್ ಗ್ರೇಯರ್‌ಳಂತಹ ಅನೇಕ ಸ್ತ್ರೀವಾದಿ ಚಿಂತಕರ ಸಂಶೋಧನೆಗಳು ಆನಾ ಹ್ಯಾತ್‌ವೇಯ ಬದುಕು ಹಾಗೂ ವ್ಯಕ್ತಿತ್ವದ ಮೇಲೆ ಹೊಸ ಬೆಳಕು ಚೆಲ್ಲುತ್ತವೆ. **ರಾಬರ್ಟ್ ನೇಯುವರ ಕಾದಂಬರಿ 'ಮಿಸೆಸ್ ಶೇಕ್ಸ್‌ಪಿಯರ್' ಜರ್ಮೇನ್ ಗ್ರೇಯರ್‌ಳ ಸಂಶೋಧನಾ ಕೃತಿ 'ಶೇಕ್ಸ್‌ಪಿಯರ್ಸ್ ವೈಫ್'** ಹಾಗೂ ಶೇಕ್ಸ್‌ಪಿಯರ್‌ನ ಸಾನೆಟ್‌ಗಳಿಂದ ಪ್ರೇರಿತವಾದ **ಏಕವ್ಯಕ್ತಿ ರಂಗಪ್ರಯೋಗ ಶೇಕ್ಸ್‌ಪಿಯರ್‌ನ ಶ್ರೀಮತಿ,** ಅನಾ ಹ್ಯಾತ್ ವೇ ಹಾಗೂ ಶೇಕ್ಸ್‌ಪಿಯರ್‌ನ ದಾಂಪತ್ಯವನ್ನು ಬೇರೊಂದು ದೃಷ್ಟಿಕೋನದಿಂದ ನೋಡುವ ಪ್ರಯತ್ನ. ಶೇಕ್ಸ್‌ಪಿಯರ್‌ನ ಜೀವನ ಗಾಥೆಯನ್ನು ಬರೆದ ಒಬ್ಬ ಪಂಡಿತರೇ ಹೇಳುವಂತೆ ಶೇಕ್ಸ್‌ಪಿಯರ್‌ನ ಪ್ರತಿ ಜೀವನಗಾಥೆಯಲ್ಲೂ ಶೇ. 5 ಮಾತ್ರ ಸತ್ಯ, ಉಳಿದದ್ದು ಊಹಾಪೋಹ. ನಮ್ಮ ನಾಟಕದಲ್ಲಿ ಖಂಡಿತ ಶೇ. 5ಕ್ಕಿಂತ ಹೆಚ್ಚು ಸತ್ಯವಿದೆ ಎನ್ನುತ್ತಾರೆ ಬೆಂಗಳೂರು ಕ್ರಿಯೇಟಿವ್ ಥಿಯೇಟರ್ ತಂಡದ ಸದಸ್ಯರು.

ಉದಯ ಇಟಗಿ ಅವರು ರಚಿಸಿರುವ 'ಶೇಕ್ಸ್‌ಪಿಯರ್‌ನ ಶ್ರೀಮತಿ'ಯನ್ನು ವಿಶ್ವರಾಜ್ ಪಾಟೀಲರ ವಿನ್ಯಾಸ ಮತ್ತು ನಿರ್ದೇಶನದಲ್ಲಿ ನಿಮ್ಮ ಮುಂದೆ ಅಭಿನಯಿಸಲಿದ್ದಾರೆ. ಖ್ಯಾತ ಕಲಾವಿದೆ ಲಕ್ಷ್ಮಿ ಚಂದ್ರಶೇಖರ್, ಗಜಾನನ ನಾಯಕ್ ಅವರ ಧ್ವನಿ ಸಂಯೋಜನೆ, ಎನ್. ಮಂಗಳಾರವರ ವಸ್ತ್ರ ವಿನ್ಯಾಸ, ವಿಶ್ವನಾಥ್ ಮಂಡಿಯವರ ರಂಗಸಜ್ಜಿಕೆ, ಮುದ್ದಣ್ಣ ರಟ್ಟೆಹಳ್ಳಿ ಅವರ ಬೆಳಕು, ರಾಮಕೃಷ್ಣ ಕನ್ನರಪಾಡಿಯವರ ಪ್ರಸಾದನ ಇವು ಕ್ರಿಯೇಟಿವ್ ಥಿಯೇಟರ್‌ನ ಈ ಹೊಸ ನಾಟಕಕ್ಕೆ ಮೆರಗು ನೀಡಲಿವೆ. ಶೇಕ್ಸ್‌ಪಿಯರ್‌ನ ಹುಟ್ಟುಹಬ್ಬದ ಸಂದರ್ಭದಲ್ಲಿಯೇ ಪ್ರಿಮಿಯರ್ ಆಗಲಿರುವ ಈ ನಾಟಕ ರಂಗಶಂಕರದಲ್ಲಿ ಏ.22ರಂದು ಸಂಜೆ 7.30ಕ್ಕೆ 23ರಂದು ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ ಪ್ರದರ್ಶನಗೊಳ್ಳಲಿದೆ. ಆನ್‌ಲೈನ್ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: www.bookmyshow.com

ಇದೇ ಸಂದರ್ಭದಲ್ಲಿ ರಂಗಶಂಕರದ ಅಂಗಳದಲ್ಲಿಯೇ ಮೈಸೂರಿನ ಪ್ರೊಫೆಸರ್ ಬಿ.ಎನ್.ಬಾಲಾಜಿಯವರು ಸಂಗ್ರಹಿಸಿರುವ ಶೇಕ್ಸ್‌ಪಿಯರನ ಬದುಕು, ಬರಹವನ್ನೂ ಕುರಿತ ಮಾಹಿತಿಗಳ ಅಪೂರ್ವ ಸಂಗ್ರಹ ಹಾಗೂ ವಿಶ್ವದ ಅನೇಕ ರಂಗ ಮಂದಿರಗಳಲ್ಲಿ ಪ್ರದರ್ಶನಗೊಂಡಿರುವ ಅವನ ನಾಟಕಗಳ ಭಿತ್ತಿಚಿತ್ರಗಳ ಪ್ರದರ್ಶನ ಕೂಡಾ ನಡೆಯಲಿದೆ. ಶೇಕ್ಸ್‌ಪಿಯರನ ಹುಟ್ಟುಹಬ್ಬದ ಆಚರಣೆಗೆ ಇದಕ್ಕಿಂತಾ ಬೇಕೆ?





ಕೇಂದ್ರ, ರಾಜ್ಯದಲ್ಲಿರುವುದು ಭ್ರಷ್ಟ ಸರ್ಕಾರ

ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ



ಚಾಮರಾಜನಗರ, ಏ.19(ಎಸ್‌ಎಸ್)–ದೇಶ ಹಾಗೂ ರಾಜ್ಯದಲ್ಲಿಂದು ರೈತ–ಜನವಿರೋಧಿ ಸರ್ಕಾರ ಅಧಿಕಾರದಲ್ಲಿದ್ದು, ನನ್ನ 45 ವರ್ಷದ ರಾಜಕಾರಣದಲ್ಲಿ ಇಷ್ಟು ಸುಳ್ಳು ಹೇಳುವ, ಸಮಾಜದಲ್ಲಿ ಅಶಾಂತಿ ಸೃಷ್ಟಿಸಿರುವ ಸರ್ಕಾರಗಳನ್ನು ನೋಡಿರಲಿಲ್ಲ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಭ್ರಷ್ಟಾಚಾರ–ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಹಾಗೂ ಗುತ್ತಿಗೆದಾರ ಸಂತೋಷ್ ಕೆ.ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಕೆ.ಎಸ್.ಈಶ್ವರಪ್ಪ ಅವರನ್ನು ಬಂಧಿಸುವಂತೆ ಒತ್ತಾಯಿಸಿ ನಗರದ ಹಳೇ ಬಸ್ ನಿಲ್ದಾಣದ ಬಳಿ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದರು.

ಭ್ರಷ್ಟ ಸರ್ಕಾರ ನಮಗೆ ಬೇಕಾ?: ದೇಶ ದುರಾಡಳಿತ, ಜನವಿರೋಧಿ ನೀತಿ, ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿದ್ದು, ಕರ್ನಾಟಕದಲ್ಲಿ ಹಿಂದೆಂದೂ ಕಂಡು–ಕೇಳರಿಯದಂತಹ ಭ್ರಷ್ಟ ಸರ್ಕಾರ ಅಧಿಕಾರದಲ್ಲಿದೆ. ಇದನ್ನು ಕಾಂಗ್ರೆಸ್ ಹೇಳುತ್ತಿಲ್ಲ. ಇಡೀ ರಾಜ್ಯದ ಜನ ಹಾಗೂ ಅಧಿಕಾರಿಗಳೇ ಹೇಳುತ್ತಿದ್ದಾರೆ. ಇಂತಹ ಭ್ರಷ್ಟ ಸರ್ಕಾರ ನಮಗೆ ಬೇಕಾ? ಎಂದು ಪ್ರಶ್ನಿಸಿದರು.

ಭ್ರಷ್ಟಾಚಾರ ದೂರು ದಾಖಲಿಸಿ: ಗುತ್ತಿಗೆದಾರ ಸಂತೋಷ್ ಜಿ.ಪಾಟೀಲ ಅವರು ಹಿಂಡಲಗಾ ಗ್ರಾಮದಲ್ಲಿ 4 ಕೋಟಿ ಮೊತ್ತದ ಕೆಲಸ ಮಾಡಿಸಿದ್ದರು. 'ಕೆಲಸ ಮಾಡು, ನಂತರ ಹಣ ಬಿಡುಗಡೆ ಮಾಡುತ್ತೇವೆ' ಎಂದು ಸಚಿವರಾಗಿದ್ದ ಈಶ್ವರಪ್ಪ ಹೇಳಿದ್ದರು. ನಂತರ ಹಣ ನೀಡಿಲ್ಲ. ಈಶ್ವರಪ್ಪ ಹಾಗೂ ಅವರ ಇಬ್ಬರು ಆಪ್ತ ಸಹಾಯಕರು ಶೇ.40ರಷ್ಟು ಕಮಿಷನ್ ಕೇಳಿದ್ದಾರೆ. ಈ ಬಗ್ಗೆ ಸಂತೋಷ್ ಪಾಟೀಲ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್‌ಸಿಂಗ್ ಅವರಿಗೂ ಪತ್ರ ಬರೆದಿದ್ದರು. ಹಣ ಬಿಡುಗಡೆ ಮಾಡದೇ ಇದ್ದಾಗ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಬಗ್ಗೆ ವಾಟ್ಸ್ ಆಪ್‌ನಲ್ಲಿ ಸಂದೇಶವನ್ನೂ ಕಳುಹಿಸಿದ್ದಾರೆ. ಅದಕ್ಕಿಂತ ಬೇರೇನು ಸಾಕ್ಷಿ ಬೇಕು? ಈಶ್ವರಪ್ಪ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣ ಮಾತ್ರ ದಾಖಲಾಗಿಸಲಾಗಿದೆ. ಆದರೆ ಭ್ರಷ್ಟಾಚಾರ ವಿರೋಧಿ ಕಾಯ್ದೆಯಡಿ ದೂರು ದಾಖಲಿಸಿ, ಅವರನ್ನು ಬಂಧಿಸಬೇಕೆಂದು ಆಗ್ರಹಿಸಿದರು.

ಪತ್ರ ಬರೆದಿರುವುದು ಇದೇ ಮೊದಲು: ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ 7–6–2021ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದರು. ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರದ ಗುತ್ತಿಗೆ ಕಾಮಗಾರಿ ಮಾಡಬೇಕಾದರೆ ಶೇ.40ರಷ್ಟು ಕಮಿಷನ್ ನೀಡಬೇಕು. ನಾವು 40 ಪರ್ಸೆಂಟ್ ಕಮಿಷನ್ ಕೊಟ್ಟು ಗುಣಮಟ್ಟದ ಕೆಲಸ ಮಾಡಲು ಸಾಧ್ಯವಿಲ್ಲ. ಸರ್ಕಾರದ ಕಿರುಕುಳ ಹೆಚ್ಚಾಗಿದೆ. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಿ ಎಂದು ಪ್ರಧಾನಿಯವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದರು. ಇದು ಅನೇಕ ಪತ್ರಿಕೆಗಳು, ಮಾಧ್ಯಮಗಳಲ್ಲೂ ವರದಿಯಾಗಿದೆ. ಶೇ.40ರಷ್ಟು ಲಂಚ ಹೊಡೆಯುತ್ತಿದ್ದಾರೆ ಎಂದು ರಾಜ್ಯದ ಇತಿಹಾಸದಲ್ಲೇ ಗುತ್ತಿಗೆದಾರರ ಸಂಘದವರು ಪತ್ರದ ಮೂಲಕ ಪ್ರಧಾನಿ ಅವರಿಗೆ ಪತ್ರ ಬರೆದಿರುವುದು ಇದೇ ಮೊದಲು ಎಂದರು.

10 ತಿಂಗಳಾದರೂ ಪ್ರಧಾನಿ ಮೌನ: 2018ರಲ್ಲಿ ನರೇಂದ್ರ ಮೋದಿ ರಾಜ್ಯಕ್ಕೆ ಬಂದು ಚುನಾವಣಾ ಭಾಷಣ ಮಾಡುವಾಗ ಸಿದ್ದರಾಮಯ್ಯ ಅವರ ಸರ್ಕಾರ ಶೇ.10 ಕಮಿಷನ್ ಸರ್ಕಾರ ಎಂದು ದೂರಿದ್ದರು. ಆ ವೇಳೆ ನಾನು(ಸಿದ್ದರಾಮಯ್ಯ) ಅವರಿಗೆ ನಿಮ್ಮ ಬಳಿ ಅಧಿಕಾರ ಇದೆ. ದಾಖಲೆ ಇದ್ದರೆ ತನಿಖೆ ನಡೆಸಿ ಎಂದು ಹೇಳಿದ್ದೆ. ಈಗ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಪ್ರಧಾನಿ ಅವರಿಗೆ ಪತ್ರ ಬರೆದು, ಆರೋಪ ಮಾಡಿದ್ದಾರೆ. ಆದರೆ 10 ತಿಂಗಳಾದರೂ ಪ್ರಧಾನಿ ಮೌನವಾಗಿದ್ದಾರೆ ಎಂದು ಆರೋಪಿಸಿದರು.

ಜನರ ತೆರಿಗೆ ಹಣ ಲೂಟಿ: ಅಡುಗೆ ಎಣ್ಣೆ ರಸಗೊಬ್ಬರ, ಕಬ್ಬಿಣ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನ ತತ್ತರಿಸಿದ್ದಾರೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಕಾರಣ. ಜನರ ತೆರಿಗೆ ಹಣವನ್ನು ಬಿಜೆಪಿ ಸರ್ಕಾರ ಲೂಟಿ ಮಾಡಿದೆ. ರೈತರ ಆದಾಯ ದುಪ್ಪಟ್ಟು ಮಾಡುತ್ತೇನೆಂದು ಹೇಳಿ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡದೆ ರೈತರನ್ನು ನಷ್ಟಕ್ಕೆ ತಳ್ಳಲಾಗಿದೆ. ಅರಿಶಿನ, ರಾಗಿ ಬೆಂಬಲ ಬೆಲೆಯಡಿ ಖರೀದಿಸದೆ ವಂಚಿಸಲಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ: ಆರ್‌ಎಸ್‌ಎಸ್‌ನವರು ರಾಷ್ಟ್ರ ಭಕ್ತರಲ್ಲ, ರಾಷ್ಟ್ರದ್ರೋಹಿಗಳು. ಈ ಹಿನ್ನೆಲೆಯಿಂದ ಬಂದವರು ಅಧಿಕಾರದಲ್ಲಿರಲು ಯೋಗ್ಯರಲ್ಲ. ಹಿಜಾಬ್, ಹಲಾಲ್, ಭಗವದ್ಗೀತೆ ಹೆಸರಲ್ಲಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸಿ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಸಮಾಜದಲ್ಲಿ ದ್ವೇಷದ ಬೀಜ ಬಿತ್ತುತ್ತಿದ್ದಾರೆ. ಹಿಂದು ವೋಟುಗಳನ್ನು ಕೇಂದ್ರೀಕರಿಸಲು ಯತ್ನಿಸುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿಗಳು, ಈಶ್ವರಪ್ಪ ಅವರನ್ನು ಏಕೆ ಬಂಧಿಸಬೇಕು ಎನ್ನುತ್ತಿದ್ದಾರೆ. ಭ್ರಷ್ಟಾಚಾರ ನಡೆಸುವವರಿಗೆ, ಭ್ರಷ್ಟಾಚಾರಿಗಳಿಗೆ ಬೆಂಬಲ ನೀಡುತ್ತಿರುವವರಿಗೆ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕೆಂದು ಸಿದ್ದರಾಮಯ್ಯ ಜನತೆಗೆ ಮನವಿ ಮಾಡಿದರು.

ಸಂತೋಷ್ ಕುಟುಂಬಕ್ಕೆ ಪರಿಹಾರ ನೀಡಿ: ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿ, ಭ್ರಷ್ಟಾಚಾರ ಆರೋಪ ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕೆ.ಎಸ್.ಈಶ್ವರಪ್ಪ ಅವರನ್ನು ಕೂಡಲೇ ಬಂಧಿಸಬೇಕು. ಆತ್ಮಹತ್ಯೆಗೆ ಶರಣಾದ ಗುತ್ತಿಗೆದಾರ ಸಂತೋಷ್ ಕುಟುಂಬಕ್ಕೆ ಪರಿಹಾರ ನೀಡಬೇಕು. ಅವರ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು. ಕಳೆದ ಮೂರು ವರ್ಷದಲ್ಲಿ ಯಾವ ಮುಖ್ಯಮಂತ್ರಿಯೂ ಚಾಮರಾಜನಗರಕ್ಕೆ ಭೇಟಿ ನೀಡಿಲ್ಲ. ಅಲ್ಲದೆ ಜಿಲ್ಲೆಯ ಅಭಿವೃದ್ಧಿಗೆ ಅನುದಾನವನ್ನು ನೀಡಿಲ್ಲ. ಪರಿಣಾಮ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ಸ್ಥಗಿತಗೊಂಡಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಆರ್.ನರೇಂದ್ರ, ಎಂಎಲ್‌ಸಿ ಡಾ.ತಿಮ್ಮಯ್ಯ ಮಾತನಾಡಿದರು. ಕೆಪಿಸಿಸಿ ಮಹಿಳಾ ಅಧ್ಯಕ್ಷೆ ಪುಷ್ಪಾ ಅಮರನಾಥ್, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮರಿಸ್ವಾಮಿ, ಚಾಮುಲ್ ಅಧ್ಯಕ್ಷ ನಂಜುಂಡ ಪ್ರಸಾದ್, ಮುಖಂಡರಾದ ಎ.ಸಿದ್ದರಾಜು, ಕಾಗಲವಾಡಿ ಶಿವಣ್ಣ, ಎ.ಆರ್. ಕೃಷ್ಣಮೂರ್ತಿ, ಜಯಣ್ಣ, ಗಣೇಶ್ ಪ್ರಸಾದ್, ನಂಜಪ್ಪ, ಹೆಚ್.ಸಿ.ಬಸವರಾಜು, ಬಿ.ಕೆ.ರವಿಕುಮಾರ್, ಆರ್.ಮಹದೇವು, ಆರ್.ಉಮೇಶ್, ಚಿಕ್ಕಮಹದೇವು, ಚಂದ್ರು, ತೋಟೇಶ್, ಗುರುಸ್ವಾಮಿ, ಮುನಿರಾಜು, ದೇಮಾಜು, ಈಶ್ವರ್, ರಾಜಶೇಖರ್, ಕೆ.ಪಿ. ಸದಾಶಿವಮೂರ್ತಿ, ಸಿಎ. ಮಹದೇವಶೆಟ್ಟಿ ಇತರರಿದ್ದರು.

ಚಾ.ನಗರದಲ್ಲಿ ಕಾಂಗ್ರೆಸ್‌ನಿಂದ ಭಾರೀ ಪ್ರತಿಭಟನೆ



ಚಾಮರಾಜನಗರ: ರಾಜ್ಯ ಸರ್ಕಾರದ ಭ್ರಷ್ಟಾಚಾರ, ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಗುತ್ತಿಗೆದಾರ ಸಂತೋಷ್ ಕೆ.ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಕೆ.ಎಸ್.ಈಶ್ವರಪ್ಪ ಅವರ ವಿರುದ್ಧ ಭ್ರಷ್ಟಾಚಾರ ಆರೋಪದಡಿ ಪ್ರಕರಣ ದಾಖಲಿಸಿ, ಬಂಧಿಸುವಂತೆ ಒತ್ತಾಯಿಸಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಮಂಗಳವಾರ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಯಿತು.

ನಗರದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾ ಮೆರವಣಿಗೆಯು ಗುಂಡ್ಲುಪೇಟೆ ವೃತ್ತ, ದೊಡ್ಡ ಅಂಗಡಿ ಬೀದಿ, ಮಹಾವೀರ ವೃತ್ತ, ನೃಪತುಂಗ ವೃತ್ತದ ಮೂಲಕ ಸಮಾವೇಶ ಆಯೋಜಿಸಿದ್ದ ಹಳೇ ಖಾಸಗಿ ಬಸ್ ನಿಲ್ದಾಣದ ಬಳಿ ಕೊನೆಗೊಂಡಿತು. ಈ ವೇಳೆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ನೂರಾರು ಮುಖಂಡರು ಹಾಗೂ ಕಾರ್ಯಕರ್ತರು ಕೆ.ಎಸ್.ಈಶ್ವರಪ್ಪ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರ್‍ಯಾಲಿಯಲ್ಲಿ ಈಶ್ವರಪ್ಪ ವಿರುದ್ಧ ಭಿತ್ತಿಪತ್ರಗಳು ರಾರಾಜಿಸಿದವು. ಪ್ರತಿಭಟನಾ ಸಮಾವೇಶ ಮುಗಿದ ಬಳಿಕ ಜಿಲ್ಲಾಡಳಿತ ಭವನಕ್ಕೆ ತೆರಳಿ, ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸಿದ್ದರಾಮಯ್ಯ ನೇತೃತ್ವದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ 62 ಮಂದಿಗೆ ಪಾಸಿಟಿವ್



ಬೆಂಗಳೂರು: ರಾಜ್ಯದಲ್ಲಿ ಕೊರೋನಾ ಮೂರನೇ ಅಲೆಯ ಅಬ್ಬರ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿದ್ದು, ಕಳೆದ 24 ಗಂಟೆಯಲ್ಲಿ ಕೇವಲ 62 ಹೊಸ ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಸೋಂಕಿತರ ಸಂಖ್ಯೆ 39,46,484ಕ್ಕೆ ಏರಿಕೆಯಾಗಿದೆ.

ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೋನಾದಿಂದ ಇಂದು ಯಾವುದೇ ಸಾವು ವರದಿಯಾಗಿಲ್ಲ. ಹೀಗಾಗಿ ಸಾವಿನ ಸಂಖ್ಯೆ 40057 ಇದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಗಳೂರಿನಲ್ಲಿ ಇಂದು 57 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 17,82,516ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲೂ ಯಾವುದೇ ಕೊರೋನಾ ಸಾವು ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ. ರಾಜ್ಯದಲ್ಲಿ ಇಂದು 48 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 39,04898ಕ್ಕೆ ಏರಿಕೆಯಾಗಿದೆ. ಇನ್ನು 1487 ಸಕ್ರಿಯ ಪ್ರಕರಣಗಳಿವೆ.

'ಸಾಧ್ವಿ' ಪತ್ರಿಕೆ ಸಂಪಾದಕ ಮಹೇಶ್ವರನ್ ನಿಧನ

ಮೈಸೂರು, ಏ.19– ಮೈಸೂರಿನ ಶತಮಾನ ಕಂಡ 'ಸಾಧ್ವಿ' ಪತ್ರಿಕೆ ಸಂಪಾದಕ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಿ.ಮಹೇಶ್ವರನ್ (64) ಹೃದಯಾಘಾತದಿಂದ ಮಂಗಳವಾರ ನಿಧನರಾದರು.



ಚಾಮುಂಡಿಬೆಟ್ಟದ ತಪ್ಪಲಿನ ಕೆ.ಸಿ.ಲೇಔಟ್‌ನ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ಕೊನೆಯುಸಿರೆಳೆದರು. ಕೆಲ ದಿನಗಳ ಹಿಂದಷ್ಟೆ ಅನಾರೋಗ್ಯಕ್ಕೆ ಒಳಗಾಗಿ ಚಿಕಿತ್ಸೆ ಪಡೆದು ನಾಲ್ಕು ದಿನಗಳ ಹಿಂದೆ ಮನೆಗೆ ಹಿಂತಿರುಗಿದ್ದರು. 1899ರಲ್ಲಿ ಮೈಸೂರು ತಾತಯ್ಯ ಎಂದೇ ಕರೆಯಲ್ಪಡುವ ಎಂ.ವೆಂಕಟಕೃಷ್ಣಯ್ಯ, ಸ್ವಾತಂತ್ರ್ಯ ಹೋರಾಟಗಾರ ಶ್ರೀ ಅಗರಂ ರಂಗಯ್ಯ ಅವರು ಪ್ರಾರಂಭಿಸಿದ 'ಸಾಧ್ವಿ' ಪತ್ರಿಕೆಯ ಮಾಲಿಕತ್ವವನ್ನು 1995ರಿಂದ ಪಡೆದು ಮುನ್ನಡೆಸಿದ್ದರು. ಡೆಕ್ಕನ್ ನ್ಯೂಸ್ ಆಂಗ್ಲ ಪತ್ರಿಕೆಯ ಮೂಲಕ ಪತ್ರಿಕೋದ್ಯಮ ಪ್ರವೇಶಿಸಿದ ಅವರು, ತದ ನಂತರದಲ್ಲಿ ಸಾಧ್ವಿ ಪತ್ರಿಕೆಯ ಮಾಲೀಕತ್ವವನ್ನು ಪಡೆದು ಬಹಳ ಕಷ್ಟದ ದಿನಗಳಲ್ಲೂ ಪತ್ರಿಕೆಯನ್ನು ಮುನ್ನೆಡೆಸಿಕೊಂಡು ಬಂದಿದ್ದರು. 2020–21ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಸಾಧ್ವಿ ಬಳಗ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಏ.20) ಮಧ್ಯಾಹ್ನ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಸಿ.ಮಹೇಶ್ವರನ್ ನಿಧನಕ್ಕೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸಾಸಲುವಿನಲ್ಲಿ ಸಂಭ್ರಮದ ಜೋಡಿ ರಥೋತ್ಸವ



ಕಿಕ್ಕೇರಿ,ಏ.19– ಹೋಬಳಿಯ ಸಾಸಲು ಗ್ರಾಮದಲ್ಲಿ ಸೋಮವಾರ ಸೋಮೇಶ್ವರ, ಶಂಭುಲಿಂಗೇಶ್ವರ, ಕುದುರೆಮಂಡಮ್ಮನವರ ಜೋಡಿ ಬ್ರಹ್ಮ ರಥೋತ್ಸವ ಸಂಭ್ರಮದಿಂದ ನೆರವೇರಿತು.

ಕಳೆದ ಎರಡು ವರ್ಷಗಳಿಂದ ಕೊರೊನಾದಿಂದ ಜಾತ್ರೆ ನಡೆದಿರಲಿಲ್ಲ. ಈ ಬಾರಿ ಜಾತ್ರೆ ಆರಂಭಗೊಂಡಿದ್ದರಿಂದ ಭಕ್ತರು ನೆಂಟರಿಷ್ಟರನ್ನು ವಿಶೇಷವಾಗಿ ಆಮಂತ್ರಿಸಿದ್ದರು. ಹೋಬಳಿಯಲ್ಲದೆ, ಜಿಲ್ಲೆ, ರಾಜ್ಯ, ಹೊರ ರಾಜ್ಯದಿಂದ ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ಸೋಮೇಶ್ವರ ಉಘೇ, ಶಂಭುಲಿಂಗೇಶ್ವರ ಉಘೇ ಘೋಷಣೆಯೊಂದಿಗೆ ಹಣ್ಣು ಧವನ ಎಸೆದು ಇಷ್ಟಾರ್ಥಸಿದ್ಧಿಗಾಗಿ ಪ್ರಾರ್ಥಿಸಿದರು.

ರಥೋತ್ಸವದಲ್ಲಿ ಗಾರುಡಿ ಗೊಂಬೆ ಪ್ರದರ್ಶನ ವಿಶೇಷ ಆಕರ್ಷಣೆಯಾಗಿತ್ತು.

ರಥೋತ್ಸವಕ್ಕೂ ಮುನ್ನ ದೇವರ ಮೂರ್ತಿಯನ್ನು ದೇವಾಲಯದ ಸುತ್ತ ಅಡ್ಡ ಪಲ್ಲಕ್ಕಿ ಉತ್ಸವ ನಡೆಸಲಾಯಿತು. ನಂತರ ರಥಬೀದಿಯಲ್ಲಿ ಉತ್ಸವ ಮೂರ್ತಿ ಸಾಗಿ ರಥದ ಸುತ್ತ ಪ್ರದಕ್ಷಿಣೆ ಹಾಕಿ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.

ಹರಕೆ ಹೊತ್ತ ಬಾಯಿಬೀಗಧಾರಿಗಳು ರಥದ ಸುತ್ತ ಪ್ರದಕ್ಷಿಣೆ ಹಾಕಿ ತಮ್ಮ ಹರಕೆ ತೀರಿಸಿದರು. ಮಹಾರಥಗಳು ಒಂದರ ಹಿಂದೆ ಸಾಗಿ ಸ್ವಸ್ಥಾನಕ್ಕೆ ಸೇರಿತು. ತದನಂತರ ಕುರಿಗಾಹಿಗಳು ತಮ್ಮ ಕುರಿಗಳನ್ನು ರಥದ ಹಿಂದೆ ಮೆರವಣಿಗೆ ಮೂಲಕ ಸಾಗಿ ರೋಗರುಜಿನ ಬಾರದಂತೆ ದೇವರಲ್ಲಿ ಮೊರೆಇಟ್ಟರು.

ಭಕ್ತರು ಬೆಳಗ್ಗಿನಿಂದಲೇ ದೂರದ ಊರಿನಿಂದ ಆಗಮಿಸಿ ದೇವಾಲಯದ ಆವರಣದಲ್ಲಿ ತಂಗಿದ್ದರು. ಸುತಿಯಲ್ಲಿ ನಿಂತು ಉಪವಾಸ ವ್ರತದೊಂದಿಗೆ ದೇವರ ದರ್ಶನ ಪಡೆದರು.

ರಥಕ್ಕೆ ವಿವಿಧ ವರ್ಣದ ಧ್ವಜ, ಪುಷ್ಪಮಾಲೆಗಳಿಂದ ಅಲಂಕರಿಸಲಾಗಿತ್ತು. ಗ್ರಾಮಸ್ಥರು, ಭಕ್ತರು, ದಾನಿಗಳು ಪುಳಿಯೊಗರೆ, ಮೊಸರನ್ನ, ಕೋಸಂಬರಿ, ನೀರುಮಜ್ಜಿಗೆ ಪಾನಕ ವಿತರಿಸಿದರು.

ತಹಸೀಲ್ದಾರ್ ಎಂ.ವಿ. ರೂಪಾ, ಉಪತಹಸೀಲ್ದಾರ್ ಲಕ್ಷ್ಮೀಕಾಂತ್, ರಾಜಸ್ವ ನಿರೀಕ್ಷಕ ಗೋಪಾಲಕೃಷ್ಣ, ಗ್ರಾಮ ಮುಖಂಡರು, ವಿವಿಧ ಪಕ್ಷಗಳ ಜನಪ್ರತಿನಿಧಿಗಳು ಸುತ್ತಮುತ್ತಲ ಗ್ರಾಮದ ಜನತೆ ಭಾಗವಹಿಸಿದ್ದರು.

ಮನ್‌ಮುಲ್‌ನಿಂದ ಹಾಲು ಕಳ್ಳತನಕ್ಕೆ ಕಡಿವಾಣ



ಮಂಡ್ಯ,ಏ.19(ಮೋಹನ್‌ರಾಜ್)– ಹಾಲು ಉತ್ಪಾದಕರ ಸಹಕಾರ ಸಂಘದ ಹಳೇ ಬಿಎಂಸಿ ಘಟಕಗಳಲ್ಲಿ ನಿತ್ಯ ಸಾವಿರಾರು ಲೀಟರ್ ಹಾಲು ಕಳ್ಳತನವಾಗುತ್ತಿತ್ತು. ಇಂತಹ ಪ್ರಕರಣಗಳನ್ನು ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷರು ಹಾಗೂ ನಿರ್ದೇಶಕರು ಪತ್ತೆ ಹಚ್ಚಿ ತನಿಖೆಗೆ ಆದೇಶ ಮಾಡಿದ್ದು, ಮುಂದಿನ ದಿನಗಳಲ್ಲಿ ಇಂತಹ ಅಕ್ರಮಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಲೂಕಿನ ಹೊಳಲು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನೂತನವಾಗಿ ಹಾಲು ಶೀಥಲೀಕರಣ ಘಟಕವನ್ನು (ಬಿಎಂಸಿ) ಉದ್ಘಾಟಿಸಿ ಮಾತನಾಡಿದ ಅವರು, ಈ ಭಾಗದಲ್ಲಿ ಮಾಜಿ ಶಾಸಕ ದಿ.ಹೆಚ್.ಡಿ.ಚೌಡಯ್ಯ ಬಿಎಂಸಿ ಘಟಕ ಸ್ಥಾಪನೆಗೆ ಸಾಕಷ್ಟು ಶ್ರಮ ವಹಿಸಿದ್ದರು. ಅವರ ಆಶಯದಂತೆ ಇದೀಗ ಗ್ರಾಮದಲ್ಲಿ ಬಿಎಂಸಿ ಘಟಕ ಸ್ಥಾಪನೆಯಾಗಿದೆ. ಇದನ್ನು ಪ್ರತಿಯೊಬ್ಬ ಉತ್ಪಾದಕರೂ ಸರಿಯಾದ ನಿಟ್ಟಿನಲ್ಲಿ ಉಪಯೋಗಿಸಿಕೊಳ್ಳಬೇಕು. ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದರು.

ಶಿಲಾನ್ಯಾಸ ಫಲಕ ಉದ್ಘಾಟಿಸಿದ ಮನ್‌ಮುಲ್ ಅಧ್ಯಕ್ಷ ರಾಮಚಂದ್ರ ಮಾತನಾಡಿ, ಗುಣಮಟ್ಟದ ಹಾಲನ್ನು ಡೈರಿಗೆ ಹಾಕಬೇಕು. ಕಳಪೆ ಹಾಲು ಹಾಕಿದರೆ ಎಷ್ಟು ಪ್ರಮಾಣದ ಹಾಲು ಶೇಖರಣೆಯಾಗಿರುತ್ತೋ ಅಷ್ಟೂ ಪ್ರಮಾಣದ ಹಾಲು ಕೆಡುತ್ತದೆ. ಆದ್ದರಿಂದ ಉತ್ತಮ ಹಾಲನ್ನು ಹಾಕುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಾಜಿ ಶಾಸಕ ಎಚ್.ಬಿ.ರಾಮು, ಮಾಜಿ ಶಾಸಕ ದಿ.ಎಚ್.ಡಿ.ಚೌಡಯ್ಯನವರ ಸಲಹೆ ಮೇರೆಗೆ ಗ್ರಾಮದಲ್ಲಿ ಬಿಎಂಸಿ ಘಟಕ ಉದ್ಘಾಟನೆಯಾಗಿದೆ ಎಂದರು.

ರಾಜ್ಯ ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕ ಎಚ್.ಎಲ್.ಶಿವಣ್ಣ, ಡೈರಿ ಅಧ್ಯಕ್ಷ ತಿಮ್ಮೇಗೌಡ, ಮಾಜಿ ಅಧ್ಯಕ್ಷರಾದ ನಿಂಗರಾಜು, ಟಿ.ಟಿ.ಶ್ರೀನಿವಾಸ್, ಉಪಾಧ್ಯಕ್ಷೆ ಶಾಂತಮ್ಮ, ಮಾಜಿ ಉಪಾಧ್ಯಕ್ಷ ಗಂಗಾಧರ್, ಗ್ರಾ.ಪಂ. ಉಪಾಧ್ಯಕ್ಷ ಎಚ್.ಡಿ. ರವಿ, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಕಾಳೇಗೌಡ, ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಎಸ್. ಪ್ರಭಾಕರ್, ಜನತಾ ಶಿಕ್ಷಣ ಸಂಸ್ಥೆಯ ಎಚ್.ಸಿ. ಮೋಹನ್ ಕುಮಾರ್ ಇತರರು ಉಪಸ್ಥಿತರಿದ್ದರು.



ಪಾಂಡವಪುರ ತಾಲೂಕಿನ ಎಲೆಕೆರೆ ಗ್ರಾಮದಲ್ಲಿ ರಾಮನವಮಿ ಪ್ರಯುಕ್ತ ಶ್ರೀ ಕೋದಂಡರಾಮನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ರೈತರ ಸಾಲ ಮನ್ನಾ ಬಾಕಿ ಬಿಡುಗಡೆಗೆ ಆಗ್ರಹ



ಬೆಂಗಳೂರು,ಏ.19– ಮಂಡ್ಯ ಜಿಲ್ಲೆಯ ರೈತರು ಸೇರಿದಂತೆ ರಾಜ್ಯದಲ್ಲಿ ಸಾಲಮನ್ನಾ ಆಗದೇ ಬಾಕಿ ಇರುವ ಲಕ್ಷಕ್ಕೂ ಹೆಚ್ಚು ರೈತರ ನೆರವಿಗೆ ಧಾವಿಸುವಂತೆ ಮಂಡ್ಯ ಕ್ಷೇತ್ರದ ಶಾಸಕ ದಿನೇಶ್ ಗೂಳಿಗೌಡ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಹಾಗೂ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರಿಗೆ ಪತ್ರ ಬರೆದು ಕೋರಿದ್ದಾರೆ.

ಕೊರೊನಾ ಸಂಕಷ್ಟ ಕಾಲ, ಅತಿವೃಷ್ಟಿ, ಅನಾವೃಷ್ಟಿಗಳಂತಹ ಪ್ರಕೃತಿ ವಿಕೋಪಗಳಿಂದ ನಾಡಿನ ರೈತರು ಕಂಗಾಲಾಗಿದ್ದಾರೆ. ಅನ್ನದಾತ ಅಕ್ಷರಶಃ ಸಂಕಷ್ಟಕ್ಕೆ ಸಿಲುಕಿದ್ದಾನೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ದೇಶದ ಬೆನ್ನೆಲುಬಾಗಿರುವ ರೈತರ ನೆರವಿಗೆ ಸರ್ಕಾರ ಧಾವಿಸಬೇಕಾಗಿದೆ. ಆದರೆ, ಇನ್ನೂ ಮಂಡ್ಯ ಜಿಲ್ಲೆಯ ಬಹುಪಾಲು ರೈತರಿಗೆ ಸಾಲಮನ್ನಾದ ಪ್ರಯೋಜನ ಲಭ್ಯವಾಗಿಲ್ಲ. ರೈತರು ಮೊದಲೇ ಸಂಕಷ್ಟದಲ್ಲಿದ್ದು, ಇಂತಹ ಸಂದರ್ಭದಲ್ಲಿ ದಾಖಲೆಗಳ ನೆಪದಲ್ಲಿ ಅವರಿಗೆ ತೊಂದರೆಯಾಗುತ್ತಿರುವುದು ಸರಿಯಲ್ಲ ಎಂದು ಪತ್ರದಲ್ಲಿ ವಿವರಿಸಿದ್ದಾರೆ.



ನಾಗಮಂಗಲ ತಾಲೂಕಿನ ಆರಣಿ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾಗಿ ಆಯ್ಕೆಯಾದ ಯಶೋಧಮ್ಮ ರಂಗೇಗೌಡ ಅವರನ್ನು ಕಾಂಗ್ರೆಸ್ ಮುಖಂಡರು ಮತ್ತು ಗ್ರಾ.ಪಂ.ಸದಸ್ಯರು ಅಭಿನಂದಿಸಿದರು. ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹೆಚ್.ಟಿ.ಕೃಷ್ಣೇಗೌಡ, ಜಿ.ಪಂ. ಮಾಜಿ ಸದಸ್ಯ ಕಂಚನಹಳ್ಳಿ ಬಾಲು ಇತರರಿದ್ದರು.

ಯಲಕನೂರಿನಲ್ಲಿ ಶ್ರೀಮಹಾಲಿಂಗೇಶ್ವರ ದೇವಾಲಯ ಲೋಕಾರ್ಪಣೆ

ದೇವಾಲಯಗಳು ಒಗ್ಗಟ್ಟಿನ ಸಂಕೇತ



ಸೋಮವಾರಪೇಟೆ, ಏ.19– ಊರಿನಲ್ಲಿ ದೇವಾಲಯಗಳಿರುವುದು ಒಗ್ಗಟ್ಟಿನ ಸಂಕೇತ ಎಂದು ಮಾದ್ರೆ ಗ್ರಾಮದ ಮುದ್ದಿನಕಟ್ಟೆ ಮಠಾಧೀಶ ಅಭಿನವ ಸಿದ್ದಲಿಂಗ ಶಿವಾ ಚಾರ್ಯ ಸ್ವಾಮೀಜಿ ಹೇಳಿದರು.ಇಲ್ಲಿಗೆ ಸಮೀಪದ ಯಲಕನೂರು ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ಮಹಾಲಿಂಗೇಶ್ವರ ದೇವಾಲಯದ ಉದ್ಘಾಟನೆ ನಂತರ ನಡೆದ ಧಾರ್ಮಿಕ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪ್ರತಿ ಗ್ರಾಮಗಳಲ್ಲೂ ದೇವಾಲಯಗಳು ನಿರ್ಮಾಣಗೊಳ್ಳುತ್ತಿರುವುದು ಒಳ್ಳೆಯ ಬೆಳವಣಿಗೆ. ಆಧುನಿಕತೆ ಎಷ್ಟೇ ಬೆಳೆದರೂ ಮನುಷ್ಯ ಆಧ್ಯಾತ್ಮಿಕತೆಯಿಂದ ಮಾತ್ರ ನೆಮ್ಮದಿ ಕಾಣಲು ಸಾಧ್ಯ. ದೇವಾಲಯಗಳ ಪೂಜೆ– ಪುನಸ್ಕಾರಗಳಲ್ಲಿ ಪಾಲ್ಗೊಳ್ಳುವ ಮೂಲಕ ಎಲ್ಲರೂ ಒಟ್ಟಿಗೆ ಸೇರಬಹುದು. ಇದರಿಂದ ಪರಸ್ಪರ ಬಾಂಧವ್ಯ ವೃದ್ಧಿಯಾಗಲಿದೆ ಎಂದರು.

ಮಾಜಿ ಸಚಿವ ಬಿ.ಎ.ಜೀವಿಜಯ ಮಾತನಾಡಿ, ಯಾವುದೇ ಗ್ರಾಮವಾದರೂ ಅಲ್ಲಿ ದೇವಾಲಯ, ಶಾಲೆ ಇರಲೇಬೇಕು. ಆಗ ಆ ಗ್ರಾಮ ಪರಿಪೂರ್ಣವಾಗುತ್ತದೆ ಎಂದರು.

ಧಾರ್ಮಿಕ ಸಮಾರಂಭ ಉದ್ಘಾಟಿಸಿದ ಗ್ರಾಮದ ಗೌರವಾಧ್ಯಕ್ಷ ದಿಲೀಪ್ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೇವಾಲಯ ಸಮಿತಿ ಹಾಗೂ ಗ್ರಾಮ ಸಮಿತಿ ಅಧ್ಯಕ್ಷ ಶಿವಾನಂದ ವಹಿಸಿದ್ದರು. ಜಿಪಂ ಮಾಜಿ ಅಧ್ಯಕ್ಷ ವಿಜಯ, ನೆರುಗಳಲೆ ಗ್ರಾಪಂ ಅಧ್ಯಕ್ಷೆ ಪುಷ್ಪಾ, ಪಟ್ಟಣ ಪಂಚಾಯಿತಿ ನಾಮ ನಿರ್ದೇಶಿತ ಸದಸ್ಯ ಎಸ್.ಮಹೇಶ್, ಗ್ರಾಮದ ಮಾಜಿ ಅಧ್ಯಕ್ಷ ಚನ್ನಬಸಪ್ಪ ತಾಪಂ ಮಾಜಿ ಅಧ್ಯಕ್ಷ ಎಸ್.ಎಂ.ಡಿಸಿಲ್ವ ಸೇರಿದಂತೆ ಹಲವರಿದ್ದರು.

ಮಕ್ಕಳಿಗೆ ಸಂಗೀತದ ಆಸಕ್ತಿ ಮೂಡಿಸಲು ಸಲಹೆ



ವಿರಾಜಪೇಟೆ, ಏ.18– ಪೋಷಕರು ತಮ್ಮ ಮಕ್ಕಳಿಗೆ ಸಂಗೀತದ ಆಸಕ್ತಿ ಮೂಡಿಸಬೇಕು ಎಂದು ಸ್ವರಾರ್ಣ ಸಂಗೀತ ಶಾಲಾ ಮುಖ್ಯ ವ್ಯವಸ್ಥಾಪಕ ದಿಲಿಕುಮಾರ್ ಹೇಳಿದರು.

ಪಟ್ಟಣದ ಗೋಣಿಕೊಪ್ಪ ರಸ್ತೆಯಲ್ಲಿರುವ 'ಚೋಟ ಚಾಂಪ್ಸ್ ಗುರು ಕುಲಂ ಶಾಲಾ ವಾರ್ಷಿಕೋತ್ಸವ'ದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಮಕ್ಕಳಿಗೆ ಮನೆಯೇ ಮೊದಲ ಪಾಠ ಶಾಲೆ, ತಾಯಿಯೇ ಮೊದಲ ಗುರು. ಪೋಷಕರು ತಮ್ಮ ಮಕ್ಕಳನ್ನು ಪ್ರೀತಿ, ವಾತ್ಸಲ್ಯದೊಂದಿಗೆ ಸಂಗೀತ, ನಾಟಕ, ನೃತ್ಯ ಸ್ಪರ್ಧಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡುವ ಮೂಲಕ ಉತ್ತಮ ಗುಣವಂತರಾಗುವಂತೆ ಬೆಳೆಸಬೇಕು ಎಂದು ಸಲಹೆ ನೀಡಿದರು.

ಶಾಲೆಯಲ್ಲಿ ಶಿಕ್ಷಕರು ಮಕ್ಕಳ ಮನಸನ್ನು ಅರಿತುಕೊಂಡು ಮೌಲ್ಯಯುತ ಶಿಕ್ಷಣ ನೀಡುವುದರೊಂದಿಗೆ ವಿದ್ಯಾರ್ಥಿಯನ್ನು ಉತ್ತಮ ಪ್ರಜೆಯಾಗುವಂತೆ ಮಾಡಬೇಕಾಗಿದೆ ಎಂದರು. ವಿ.ಬಾಡಗ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕಿ ವಸಂತಿ ರಾಜಮ್ಮ ಮಾತನಾಡಿ, ಶಿಕ್ಷಣದಲ್ಲಿ ಉತ್ತಮ ಮೌಲ್ಯಗಳು ಅಗತ್ಯವಿದೆ. ಮಗುವಿನ ಮನಸ್ಸಿನಲ್ಲಿರುವ ಗೊಂದಲಗಳನ್ನು ಹೋಗಲಾಡಿಸುವುದು ಹಾಗೂ ಆಧುನಿಕ ಜಗತ್ತಿನಲ್ಲಿ ಮೌಲ್ಯಯುತ ಶಿಕ್ಷಣದ ಅಗತ್ಯವಿದೆ. ಪ್ರತಿಯೊಬ್ಬರು ಗುರು ಹಿರಿಯರಿಗೆ ಗೌರವ ನೀಡುವಂತಾಗಬೇಕು ಎಂದರು. ವೇದಿಕೆಯಲ್ಲಿ ಸ್ವರಾರ್ಣ ಸಂಗೀತ ಶಾಲೆಯ ದಿಲಿಕುಮಾರ್ ಅವರನ್ನು ಸನ್ಮಾನಿಸಲಾಯಿತು. ಚೋಟ ಚಾಂಪ್ಸ್ ಗುರುಕುಲಂ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಧನುಕುಮಾರ್, ಶಾಲಾ ಪ್ರಾಂಶುಪಾಲ ವೀಣಾ ಅಕ್ಕಮ್ಮ, ಶಿಕ್ಷಕರಾದ ಪ್ರಕೃತಿ, ಮುತ್ತಮ್ಮ ಹಾಜರಿದ್ದರು. ಇದೇ ವೇಳೆ ಪುಟಾಣಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಇಂದು ತಾಲೂಕು ಮಟ್ಟದ ಆರೋಗ್ಯ ಮೇಳ

ಮಡಿಕೇರಿ,ಏ.19– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಆರೋಗ್ಯ ಅಭಿಯಾನ, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹಾಗೂ ಎಲ್ಲಾ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ 75ನೇ ವರ್ಷದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ತಾಲೂಕು ಮಟ್ಟದ ಆರೋಗ್ಯ ಮೇಳವು ಏ. 20ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆವರೆಗೆ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಕೆ.ಜಿ.ಬೋಪಯ್ಯ, ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ರವಿಕುಶಾಲಪ್ಪ, ಸಂಸದ ಪ್ರತಾಪ್‌ಸಿಂಹ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಉಪಾಧ್ಯಕ್ಷೆ ಸವಿತಾ ರಾಕೇಶ್, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಎಸ್‌ಪಿ ಎಂ.ಎ.ಅಯ್ಯಪ್ಪ, ಜಿಪಂ ಸಿಇಒ ಭಂವರ್ ಸಿಂಗ್ ಮೀನಾ, ಡಿಹೆಚ್‌ಓ ಡಾ.ಆರ್.ವೆಂಕಟೇಶ್, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಯ ಡೀನ್ ಡಾ.ಕಾರ್ಯಪ್ಪ ಪಾಲ್ಗೊಳ್ಳಲಿದ್ದಾರೆ.

ಕುಶಾಲನಗರದ ವಿವಿಧೆಡೆ ಜನತಾ ಜಲಧಾರೆ ರಥ ಸಂಚಾರ



ಕುಶಾಲನಗರ, ಏ.19–ಕೊಡಗಿನ ತಲಕಾವೇರಿಯಲ್ಲಿ ಆರಂಭಗೊಂಡ ಜೆಡಿಎಸ್‌ನ ಜನತಾ ಜಲಧಾರೆ ರಥ ಕುಶಾಲನಗರ ತಾಲೂಕಿನಲ್ಲಿ ಸಂಚರಿಸಿತು. ಮಡಿಕೇರಿ ಮೂಲಕ ಸುಂಟಿಕೊಪ್ಪ, ಗುಡ್ಡೆಹೊಸೂರು, ಕುಶಾಲನಗರ, ಕೂಡಿಗೆ, ಕಣಿವೆ ಮೂಲಕ ಸೋಮವಾರಪೇಟೆಗೆ ರಥ ತೆರಳಿತು.

ಈ ಸಂದರ್ಭ ಕಣಿವೆಯ ಶ್ರೀ ರಾಮಲಿಂಗೇಶ್ವರ ದೇವಾಲಯದಲ್ಲಿ ಜೆಡಿಎಸ್ ಪ್ರಮುಖರು ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಹಾರಂಗಿ ಮತ್ತು ಕಾವೇರಿ ನದಿ ಸಂಗಮ ಕ್ಷೇತ್ರದಿಂದ ಪವಿತ್ರ ನೀರು ಸಂಗ್ರಹಿಸಿ ರಥದಲ್ಲಿ ಕೊಂಡೊಯ್ಯಲಾಯಿತು. ವಿವಿಧ ಗ್ರಾಮಗಳಲ್ಲಿ ಪಟಾಕಿ ಸಿಡಿಸಿ ಸಂಭ್ರಮದಿಂದ ರಥಕ್ಕೆ ಸ್ವಾಗತ ಕೋರಲಾಯಿತು.

ಜೆಡಿಎಸ್ ಪ್ರಮುಖರಾದ ನಾಪಂಡಮುತ್ತಪ್ಪ ಮಾತನಾಡಿ, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ಮಹತ್ವಾಕಾಂಕ್ಷೆಯ ಕಾರ್ಯಕ್ರಮ. ಜಲಮೂಲಗಳ ಪುನಶ್ಚೇತನ ಉದ್ದೇಶದಿಂದ ರಾಜ್ಯಾದ್ಯಂತ ಆರಂಭಗೊಂಡ ಜನತಾ ಜಲಧಾರೆ ರಥಯಾತ್ರೆ ಕೊಡಗಿನಲ್ಲಿ ಯಶಸ್ವಿಯಾಗಿ ಸಾಗಿದೆ. ಪ್ರತಿ ಗ್ರಾಮಗಳಲ್ಲಿ ಜೆಡಿಎಸ್ ನಾಯಕರು, ಕಾರ್ಯಕರ್ತರು ರಥಕ್ಕೆ ಭವ್ಯ ಸ್ವಾಗತ ಕೋರಿದ್ದಾರೆ. ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರುವುದರೊಂದಿಗೆ ಕುಮಾರಸ್ವಾಮಿ ರಾಜ್ಯದ ಚುಕ್ಕಾಣಿ ಹಿಡಿಯುವ ಮೂಲಕ ಅವರ ಚಿಂತನೆಯಂತೆ ಜಲ ಸಂರಕ್ಷಣೆ, ಪ್ರಮುಖ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುವುದು ಎಂದರು. ಈ ಸಂದರ್ಭ ಜಿಲ್ಲಾ ಯುವ ಜೆಡಿಎಸ್ ಅಧ್ಯಕ್ಷ ಸಿ.ಎಲ್.ವಿಶ್ವ, ಕುಶಾಲನಗರ ತಾಲೂಕು ಅಧ್ಯಕ್ಷ ಪಿ.ಡಿ.ರವಿ, ಪ್ರಮುಖರಾದ ಶರೀಫ್, ಶಿವದಾಸ್, ರುಬೀನಾ, ತ್ರಿನೇಶ್ ಸೇರಿದಂತೆ ಆಯಾಗ್ರಾಮಗಳ ಮುಖಂಡರು, ಕಾರ್ಯಕರ್ತರು ಭಾಗಿಯಾಗಿದ್ದರು.

'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ'

ಜನರ ಸಮಸ್ಯೆ ಆಲಿಸಿದ ಚಾರುಲತಾ



ಚಾಮರಾಜನಗರ, ಏ.19– ತಾಲೂಕಿನ ಬೇಡಗುಳಿ ಗ್ರಾಮದಲ್ಲಿಂದು ನಡೆದ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಸುತ್ತಮುತ್ತಲಿನ ಹಲವು ಪೋಡು– ಹಾಡಿಗಳಿಗೆ ಭೇಟಿ ನೀಡಿ ಸ್ಥಳೀಯರಿಂದ ಅಹವಾಲು ಆಲಿಸಿದರು.ಬೇಡಗುಳಿ ವ್ಯಾಪ್ತಿಯ ಮಾರಿಗುಡಿ ಪೋಡು, ರಾಮಯ್ಯನಪೋಡು, ಬಿಸಿಲಗೆರೆ ಹಾಡಿ, ಕಾಡಿಗೆರೆ ಹಾಡಿಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿ, ಮೂಲಸೌಕರ್ಯ ಸಂಬಂಧ ಮಾಹಿತಿ ಪಡೆದರು. ಖುದ್ದು ಅರಣ್ಯ ದಂಚಿನ ಗ್ರಾಮಗಳಿಗೆ ತೆರಳಿ ಅಲ್ಲಿನ ಜನರ ಕುಂದು–ಕೊರತೆ ಆಲಿಸಿದರು.

ಬೇಡಗುಳಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ವೈದ್ಯಾಧಿಕಾರಿಗಳೊಂದಿಗೆ ಸಮಾಲೋಚಿಸಿದ ಜಿಲ್ಲಾಧಿಕಾರಿ, ಪ್ರತಿನಿತ್ಯ ಎಷ್ಟು ಜನರು ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡುತ್ತಿದ್ದಾರೆ? ಯಾವ ಬಗೆಯ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ? ಔಷಧಗಳ ಲಭ್ಯತೆ ದಾಸ್ತಾನು ಹೇಗಿದೆ? ಎಂದು ವಿವರ ಪಡೆದರು. ಬಳಿಕ ಅಲ್ಲಿನ ನ್ಯಾಯಬೆಲೆ ಅಂಗಡಿ ಪರಿಶೀಲಿಸಿ, ಪಡಿತರದಾರರಿಗೆ ಪಡಿತರ ವಿತರಿಸಿದರು.

ಬಳಿಕ ಮಾರಿಗುಡಿ ಪೋಡಿಗೆ ಭೇಟಿ ಕೊಟ್ಟು ಸ್ಥಳೀಯರ ಸಮಸ್ಯೆ ಆಲಿಸಿದ ಜಿಲ್ಲಾಧಿಕಾರಿ, ಅಡುಗೆ ತಯಾರಿಸಲು ಅನಿಲ ಸಿಲಿಂಡರ್ ಲಭ್ಯವಾಗುತ್ತಿದೆಯೇ ಎಂದು ಮಹಿಳೆಯರಿಂದ ತಿಳಿದುಕೊಂಡರು. ಇದೇ ವೇಳೆ ಸೋಲಾರ್ ವ್ಯವಸ್ಥೆ ಸಮರ್ಪಕವಾಗಿ ಪೂರೈಕೆಯಾಗದಿರುವ ಬಗ್ಗೆ ಅಲ್ಲಿನ ಜನರು ಗಮನಕ್ಕೆ ತಂದರು. ಸ್ಥಳದಲ್ಲಿಯೇ ಇದ್ದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧಿಕಾರಿಗಳಿಗೆ ತುರ್ತುಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದಲ್ಲದೆ, ಪೋಡಿನಲ್ಲಿದ್ದ ಮಕ್ಕಳ ಯೋಗಕ್ಷೇಮ ವಿಚಾರಿಸಿದರು.

ರಾಮಯ್ಯನಪೋಡು, ಬಿಸಿಲಗೆರೆ ಹಾಡಿ, ಕಾಡಿಗೆರೆ ಹಾಡಿಗಳಿಗೆ ತೆರಳಿದ ಜಿಲ್ಲಾಧಿಕಾರಿಗೆ ಸ್ಥಳೀಯರು ಕುಡಿಯುವ ನೀರು, ರಸ್ತೆ, ವಸತಿ ಸೇರಿದಂತೆ ಇತರೆ ಸೌಲಭ್ಯ ಕಲ್ಪಿಸಲು ಮನವಿ ಮಾಡಿದರು.

ಇದಕ್ಕೂ ಮೊದಲು ಬೇಡಗುಳಿಯ ಸರ್ಕಾರಿ ಬುಡಕಟ್ಟು ಆಶ್ರಮ ಶಾಲೆಯಲ್ಲಿ ಆಯೋಜಿಸಿದ್ದ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ವೇದಿಕೆ ಕಾರ್ಯಕ್ರಮದಲ್ಲಿ ಸ್ಥಳೀಯರು ಅಹವಾಲು ಸಲ್ಲಿಸಿದರು. ಸ್ಥಳೀಯ ಭಾಗಕ್ಕೆ ಒಂದು ಖಾಸಗಿ ಬಸ್ ಮಾತ್ರ ಸಂಚರಿಸುತ್ತಿದೆ. ಹೆಚ್ಚು ಬಸ್ ವ್ಯವಸ್ಥೆ ಕಲ್ಪಿಸಬೇಕು. ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಬೇಕು. ರಸ್ತೆ, ಕುಡಿಯುವ ನೀರು ಇನ್ನಿತರ ಮೂಲ ಸೌಕರ್ಯ ಒದಗಿಸಬೇಕು. ವಾರದ ಎಲ್ಲಾ ದಿನಗಳಲ್ಲೂ ವೈದ್ಯರನ್ನು ಆರೋಗ್ಯ ಕೇಂದ್ರಕ್ಕೆ ನಿಯೋಜಿಸಬೇಕು ಎಂದು ಮನವಿ ಮಾಡಿದರು.

ಉಪವಿಭಾಗಾಧಿಕಾರಿ ಡಾ.ಗಿರೀಶ್ ದಿಲೀಪ್ ಬಡೋಲೆ, ಗ್ರಾಪಂ ಅಧ್ಯಕ್ಷ ಮಣಿ ನಾಯ್ಕ, ಸದಸ್ಯರಾದ ಎಂ. ಮಹೇಶ್, ಕುಮಾರಿಬಾಯಿ ಶಿವನಾಯ್ಕ, ತಹಸೀಲ್ದಾರ್ ಚಿದಾನಂದ ಗುರುಸ್ವಾಮಿ, ತಾಪಂ ಇಒ ಪ್ರೇಮ್‌ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ, ಅಬಕಾರಿ ಉಪ ಆಯುಕ್ತ ಕೆ.ಎಸ್.ಮುರಳಿ, ವಲಯ ಅರಣ್ಯ ಅಧಿಕಾರಿ ಕೆ.ಸುರೇಶ್ ಇನ್ನಿತರ ಅಧಿಕಾರಿಗಳಿದ್ದರು.

ಜೆಡಿಎಸ್ ಎಂದೂ ರೈತರ ಪರ ಪಕ್ಷ

ಎಂಎಲ್‌ಸಿ ಸಿ.ಎನ್. ಮಂಜೇಗೌಡ ಪ್ರತಿಪಾದನೆ



ಚಾಮರಾಜನಗರ, ಏ.19– ರಾಜ್ಯದಲ್ಲಿ ಜಾತ್ಯತೀತ ಜನತಾದಳ ಯಾವಾಗಲೂ ರೈತರ ಪರವಾದ ಪಕ್ಷ ಎಂಬುದಕ್ಕೆ ಕರ್ನಾಟಕ ಇತಿಹಾಸದಲ್ಲಿ ಯಾವುದೇ ಸರ್ಕಾರ ಮಾಡದ ಕೆಲಸವನ್ನು ಮಾಡಿದೆ. ಸಮ್ಮಿಶ್ರ ಸರ್ಕಾರದಲ್ಲಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆದ ತಕ್ಷಣ ರೈತರ ಸಾಲ ಮನ್ನಾ ಮಾಡಿರುವುದೇ ಸಾಕ್ಷಿ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಕೊಳ್ಳೇಗಾಲ ಮತ್ತು ಹನೂರು ಕ್ಷೇತ್ರದಲ್ಲಿ ಜನತಾ ಜಲಧಾರೆಯ ಬೃಹತ್ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು ಕುಮಾರಣ್ಣನವರು ಸಹಕಾರ ಬ್ಯಾಂಕುಗಳಲ್ಲಿನ ರೈತರ ಸಾಲ ಮನ್ನಾ ಮಾಡಿದರು. ಗ್ರಾಮ ವಾಸ್ತವ್ಯ ಮಾಡಿ ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ದೇವೇಗೌಡರು ರಾಜ್ಯದ ನೀರಾವರಿ ಯೋಜನೆಗಳಿಗೆ ಮುಖ್ಯಮಂತ್ರಿಯಾಗಿದ್ದಾಗ, ನಂತರ ಪ್ರಧಾನಮಂತ್ರಿಗಳಾಗಿದ್ದಾಗ ಸಾವಿರಾರು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ, ಪೂರ್ಣಗೊಳಿಸಿದ್ದಾರೆ. ಆದ್ದರಿಂದ ಈ ಬಾರಿ ಪ್ರತಿಯೊಬ್ಬ ರೈತನು ಜೆಡಿಎಸ್ ಪಕ್ಷವನ್ನು ಬೆಂಬಲಿಸಬೇಕೆಂದು ಮನವಿ ಮಾಡಿದರು.

ಟಿ.ನರಸೀಪುರ ಕ್ಷೇತ್ರದ ಶಾಸಕ ಅಶ್ವಿನ್‌ಕುಮಾರ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದ್ದು, ಪ್ರತಿನಿತ್ಯ ಬಳಸುವ ಡೀಸೆಲ್, ಪೆಟ್ರೋಲ್, ಗ್ಯಾಸ್ ಬೆಲೆಗಳನ್ನು ಹೆಚ್ಚಿಸುತ್ತ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದ್ದಾರೆ. ಇವೆಲ್ಲದರಿಂದ ಮುಕ್ತಿ ಪಡೆಯಬೇಕಾದರೆ ಪ್ರಾದೇಶಿಕ ಪಕ್ಷದ ಅವಶ್ಯಕತೆ ಇದ್ದು, ಈ ಬಾರಿ ಜೆಡಿಎಸ್ ಪಕ್ಷವನ್ನು ಬೆಂಬಲಿಸಿ ಮತ್ತೊಮ್ಮೆ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಲು ಸಹಕರಿಸಿ ಎಂದ ಅವರು, ಹನೂರು ಕ್ಷೇತ್ರದಲ್ಲಿ ಮಂಜುನಾಥ್ ಅವರು ಕಳೆದ ಚುನಾವಣೆಯಲ್ಲಿ ಕಡಿಮೆ ಅಂತರದಿಂದ ಸೋತಿದ್ದಾರೆ. ಈ ಬಾರಿ ಅವರನ್ನು ಹೆಚ್ಚಿನ ಅಂತರದಿಂದ ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಚಾಮರಾಜನಗರ ಜಿಲ್ಲಾ ಜೆ.ಡಿ.ಎಸ್ ಅಧ್ಯಕ್ಷ ಮಂಜುನಾಥ್ ಮಾತನಾಡಿ ಹನೂರು ಕ್ಷೇತ್ರದಲ್ಲಿ ಈ ಬಾರಿ ನನಗೆ ಉತ್ತಮ ಬೆಂಬಲ ಸಿಗುತ್ತಿದೆ. ನಾನು ಸೋತಿದ್ದರು ಕಳೆದ ನಾಲ್ಕು ವರ್ಷಗಳಿಂದ ಜನರ ಸಂಪರ್ಕದಲ್ಲಿದ್ದು, ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಿದ್ದೇನೆ. ಈ ಬಾರಿ ಜೆಡಿಎಸ್ ಸರ್ಕಾರ ರಾಜ್ಯದಲ್ಲಿ ಬರುವ ಲಕ್ಷಣಗಳಿದ್ದು, ಕುಮಾರಣ್ಣ ಮತ್ತೆ ಮುಖ್ಯಮಂತ್ರಿ ಆಗುತ್ತಾರೆ. ನಿಮ್ಮೆಲ್ಲರ ಆಶೀರ್ವಾದ ನನ್ನ ಮೇಲಿರಲಿ ಎಂದು ಮನವಿ ಮಾಡಿದರು.

ಎಪಿಎಂಸಿ ಚುನಾವಣೆ; ಇಂದು ಮತ ಎಣಿಕೆ



ಗುಂಡ್ಲುಪೇಟೆ, ಏ.19(ಸೋಮ್.ಜಿ)–ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ನಡೆದ ಚುನಾವಣೆಯ ಮತ ಎಣಿಕೆ ಬುಧವಾರ ನಡೆಯಲಿದ್ದು, ತಾಲೂಕು ಆಡಳಿತ ಸಂಪೂರ್ಣ ಸಜ್ಜಾಗಿದೆ.

ಪಟ್ಟಣದ ದೊಡ್ಡಹುಂಡಿ ಭೋಗಪ್ಪ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಎಲ್ಲಾ ಬೂತ್‌ನ ಮತಪತ್ರಗಳಿರುವ ಪೆಟ್ಟಿಗೆಗಳನ್ನು ಭದ್ರಪಡಿಸಲಾಗಿದ್ದು, ಮತ ಎಣಿಕೆ ಇಲ್ಲಿಯೇ ನಡೆಯಲಿದೆ. ಕಾಲೇಜಿನ 3 ಕೋಣೆಗಳಲ್ಲಿ 12 ಟೇಬಲ್ ಅಳವಡಿಸಲಾಗಿದೆ. ಬುಧವಾರ ಬೆಳಗ್ಗೆ 8 ಗಂಟೆಯಿಂದಲೇ ಮತ ಎಣಿಕೆ ಆರಂಭವಾಗಲಿದೆ. ಪ್ರತಿ ಅಭ್ಯರ್ಥಿಯ ಪರ ಒಬ್ಬರು ಏಜೆಂಟ್ ಮಾತ್ರ ಎಣಿಕೆಯಲ್ಲಿ ಪಾಲ್ಗೊಳ್ಳಬಹುದು. ಮತ ಎಣಿಕೆ ಕೇಂದ್ರದ ಸುತ್ತ ಸೆಕ್ಷನ್ 144 ಜಾರಿಗೊಳಿಸಲಾಗಿದೆ ಎಂದು ತಹಸೀಲ್ದಾರ್ ಸಿ.ಜೆ.ರವಿಶಂಕರ್ ತಿಳಿಸಿದ್ದು, ಮತ ಎಣಿಕೆ ಕೇಂದ್ರಕ್ಕೆ ಸಿಬ್ಬಂದಿಯೊಂದಿಗೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದರು. ಕಾಂಗ್ರೆಸ್, ಬಿಜೆಪಿ ಪ್ರಬಲ ಪೈಪೋಟಿ ನೀಡಿ ಪ್ರಚಾರ ಮಾಡಿದ್ದರೂ ಶೇ.37.82 ಮತದಾನವಾಗಿರುವುದು ಅಭ್ಯರ್ಥಿಗಳ ಎದೆಬಡಿತ ಹೆಚ್ಚಿಸಿದ್ದು, ಎಲ್ಲರ ಚಿತ್ತ ಬುಧವಾರ ಹೊರಬರುವ ಫಲಿತಾಂಶದ ಮೇಲಿದೆ.

ಬೇಗೂರು ಬಳಿ ಕಾರು–ಬೈಕ್ ಡಿಕ್ಕಿ; ಸವಾರ ಸಾವು




ಬೇಗೂರು,ಏ.19(ಕಿರಣ್)–ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಪೆಟ್ರೋಲ್ ಹೊರ ಚೆಲ್ಲಿ ಬೈಕ್ ಬೆಂಕಿಗಾಹುತಿಯಾಗಿರುವ ಘಟನೆ ಮಂಗಳವಾರ ಗುಂಡ್ಲುಪೇಟೆ ತಾಲೂಕಿನ ಬೇಗೂರು ಹೊರವಲಯದಲ್ಲಿ ನಡೆದಿದೆ.

ಕೇರಳದ ಕಣ್ಣೂರು ಜಿಲ್ಲೆಯ ಅಲಕೋಡೆ ಗ್ರಾಮದ ಜೇಮ್ಸ್ ವರ್ಕಿ ಪುತ್ರ, ಬೆಂಗಳೂರಿನಲ್ಲಿ ಖಾಸಗಿ ಕಂಪನಿ ಉದ್ಯೋಗಿ ಗೆರೆಗೆಕುಟ್ಟಿ ಜೇಮ್ಸ್(38) ಮೃತಪಟ್ಟವರು. ಇವರು ಇಂದು ಬೆಳಗ್ಗೆ ತಮ್ಮ ರಾಯಲ್ ಎನ್‌ಫೀಲ್ಡ್ ಬೈಕ್(ಕೆಎ04, ಕೆಡಿ4684)ನಲ್ಲಿ ಮೈಸೂರಿನ ಕಡೆ ತೆರಳುತ್ತಿದ್ದರು. ಈ ವೇಳೆ ಗುಂಡ್ಲುಪೇಟೆ ಕಡೆಗೆ ಬರುತ್ತಿದ್ದ ಕನಕಪುರ ಮೂಲದ ಶೇಖರ್, ಅವರ ಪತ್ನಿ ಸೌಂದರ್ಯ ಅವರಿದ್ದ ಕಾರು(ಕೆಎ04, ಎಂಕ್ಯೂ3942) ಗ್ರಾಮದ ಐಟಿಐ ಕಾಲೇಜು ಸಮೀಪ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಎದೆ ಹಾಗೂ ಕುತ್ತಿಗೆಗೆ ಗಂಭೀರವಾದ ಪೆಟ್ಟುಬಿದ್ದು ಜೇಮ್ಸ್ ಸ್ಥಳದಲ್ಲಿಯೇ ಅಸುನೀಗಿದ್ದಾರೆ. ಅಪಘಾತ ರಭಸಕ್ಕೆ ಸುಮಾರು 20 ಅಡಿ ದೂರ ನೆಲಕ್ಕೆ ಉಜ್ಜಿಕೊಂಡು ಹೋದ ಬೈಕ್‌ನ ಟ್ಯಾಂಕ್ ಮುಚ್ಚಳ ತೆರೆದುಕೊಂಡು ಪೆಟ್ರೋಲ್ ಹೊರಚೆಲ್ಲಿದ ಪರಿಣಾಮ ಬೆಂಕಿ ಹೊತ್ತಿಕೊಂಡು ಬೈಕ್ ಸಂಪೂರ್ಣ ಸುಟ್ಟುಕರಕಲಾಗಿದೆ.

ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಸಣ್ಣಪುಟ್ಟ ಗಾಯಗಳಾಗಿದ್ದ ಶೇಖರ್ ದಂಪತಿಯನ್ನು ಆಸ್ಪತ್ರೆಗೆ ಕಳುಹಿಸಿದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಬೇಗೂರು ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದರು. ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

4ನೇ ವರ್ಷದ ಪುಣ್ಯಸ್ಮರಣೆ



ಆನಂದ್ ಎನ್.
20-04-2018

ನೀನು ನಮ್ಮನ್ನಗಲಿ ಇಂದಿಗೆ
4 ವರ್ಷಗಳು ಆಯಿತು

ಸದಾ ನಿನ್ನ ಸ್ಮರಣೆಯಲ್ಲಿರುವ

ನಿನ್ನ ತಾಯಿ – ರಾಜಮ್ಮ (ಕನಕಮ್ಮ)
ಆರೋಗ್ಯ ಇಲಾಖೆ,
ತಂಗಿ – ಉದಯವಾಣಿ ಪಂಡಿತ್
(ನ್ಯಾಯಾಂಗ ಇಲಾಖೆ),
ಮಕ್ಕಳು – ನಿತ್ಯ, ರಿಷಿ, ಕುಟುಂಬದವರು
ಲೊಕ್ಕೇನಹಳ್ಳಿ ಗ್ರಾಮ & ಹೋಬಳಿ
ಹನೂರು ತಾಲ್ಲೂಕು,
ಚಾಮರಾಜನಗರ ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ವಿಜಯನಗರ 4ನೇ ಹಂತ, 2ನೇ ಫೇಸ್, ಮನೆ ನಂ. 8075 ರಲ್ಲಿ ವಾಸವಾಗಿರುವ ಎಂ.ನಂಜಶೆಟ್ಟಿರವರ ಮಗನಾದ ಹರೀಶ್.ಎನ್. ಇವರ ಇಚ್ಛೆಯ ಮೇರೆಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಹುಂಡಿ ಗ್ರಾಮದ ನಿವಾಸಿ ಚಿಕ್ಕೇಗೌಡರ ಮಗನಾದ ನಿಂಗರಾಜು.ಸಿ. ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿಗಳಿಗೆ ಅಥವಾ ಬ್ಯಾಂಕ್ / ಹಣಕಾಸು ಸಂಸ್ಥೆ / ಸಹಕಾರಿ ಸಂಘಗಳಿಗೆ ಯಾವುದೇ ವಿಧವಾದ ಋಣಭಾರಗಳಾಗಲೀ, ಹಕ್ಕು ಹಿತಾಸಕ್ತಿಗಳಾಗಲೀ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ 7 ದಿವಸಗಳ ಒಳಗಾಗಿ ನಮ್ಮ ಕಛೇರಿಗೆ ದಾಖಲಾತಿಗಳ ಸಮೇತ ಬಂದು ತಮ್ಮ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು ನಂತರ ಬಂದ ಆಕ್ಷೇಪಣೆಗಳನ್ನು ಕಾನೂನು ಪ್ರಕಾರ ಪರಿಗಣಿಸಲಾಗುವುದಿಲ್ಲ. ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

1) ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಗೊದ್ದನಪುರ ಗ್ರಾಮದ ಸರ್ವೆ ನಂ.16/3 ರಲ್ಲಿರುವ 0–20 ಗುಂಟೆ ಜಮೀನು.

2) ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಗೊದ್ದನಪುರ ಗ್ರಾಮದ ಸರ್ವೆ ನಂ.16/7 ರಲ್ಲಿರುವ 0–20 ಗುಂಟೆ ಜಮೀನು

Sd/- Shivakumar.A.P
B.Sc, LL.B., Advocate
#1563/1A, 2nd Floor,
N.S.Road, K.R.Mohalla,
Mysore.Mobile: 9945415045

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಬೆಂಗಳೂರು ನಗರದ ಬಿ ಟಿ ಯಂ 1ನೇ ಹಂತದಲ್ಲಿ ವಾಸವಿರುವ ಪೌತಿ ಶ್ರೀ ಕೆ ರಾಮದಾಸ್ ರೈ ಅವರ ಮಗ ಶ್ರೀ ಸಂಭ್ರಮ ರೈ ಕೋಟೇಕರ್ ಅವರಿಂದ ಶುದ್ಧ ಕ್ರಯಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ ಸಂಬಂಧ ಪಟ್ಟ ಮೂಲ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯ ಹದಿನೈದು (15) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು. ತಪ್ಪಿದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾರದೇ, ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುತ್ತದೆ. ತದ ನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಯಾವುದೇ ರೀತಿಯಲ್ಲಿ ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಕರ್ನಾಟಕ ರಾಜ್ಯ, ಮೈಸೂರು ಜಿಲ್ಲೆ, ತಾಲ್ಲೂಕು ಮತ್ತು ನಗರದ ವಿಜಯನಗರ 4ನೇ ಹಂತ, 2ನೇ ಫೇಸ್ ಬಡಾವಣೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು, ಇವರಿಂದ ಮಂಜೂರಾತಿ ಆಗಿರುವ ನಿವೇಶನ ಸಂಖ್ಯೆ 3928 (ಪೂರ್ವದಿಂದ ಪಶ್ಚಿಮಕ್ಕೆ 18.00 ಮೀಟರ್, ಉತ್ತರದಿಂದ ದಕ್ಷಿಣಕ್ಕೆ 12.00 ಮೀಟರ್) ಅದರ ಚೆಕ್ಕುಬಂದಿ ಪೂರ್ವಕ್ಕೆ–ರಸ್ತೆ, ಪಶ್ಚಿಮಕ್ಕೆ–ನಿವೇಶನ ಸಂಖ್ಯೆ 3876, ಉತ್ತರಕ್ಕೆ – ನಿವೇಶನ ಸಂಖ್ಯೆ 3927 ಮತ್ತು ದಕ್ಷಿಣಕ್ಕೆ ನಿವೇಶನ ಸಂಖ್ಯೆ 3929.

ಸಹಿ/–**ಧ್ಯಾನ್ ದೇವಯ್ಯ**
ವಕೀಲರು, **KAR : 2546/2013**
ಕಛೇರಿ: ಟೌನ್ ಕೋ ಆಪರೇಟಿವ್ ಬ್ಯಾಂಕ್ ಹತ್ತಿರ, ಪೊನ್ನಂಪೇಟೆ – 571216, ಪೊನ್ನಂಪೇಟೆ
ದಿ: 19/4/22 ತಾಲ್ಲೂಕು, ಕೊಡಗು ಜಿಲ್ಲೆ.
ಸ್ಥಳ:ಪೊನ್ನಂಪೇಟೆ ಫೋ: 9964897363

PUBLIC NOTICE

Notice is hereby given to the general public that my clients **Sri. Selvaraj, S/o. Late Subraman and Smt. S. Ramya**, W/o. R. Balaji both residing at # 1204, 3rd Cross, Gange Road, E&F Block, Kuvempunagar, Mysuru-570023 have agreed to purchase the below mentioned schedule property from its present owner Smt. Rajeshwari, W/o. Late Ramesh residing at 1524, Gaddige main road, Bogadi, Mysuru-570026. If any individual person or group of persons, including bank, financial institutions private financiers, money lenders, decree holders, if any and other statutory authorities claiming any right, interest, objections or charges on the below mentioned schedule property or any part thereof in any manner whatsoever is/are hereby called upon to furnish their objections in writing along with self-attested copies of the documents to the undersigned advocate within 15 days from the date of this publication. If no objections are received within the above-mentioned stipulated time, it shall be presumed that there are no claims over the schedule property & the said sale transaction will be completed. Further any claims in future made thereupon over the schedule property will be not binding on my clients.

SCHEDULE

All that piece and parcel of the vacant residential property bearing **site no 2723** carved out in survey number 22 /1 situated at Bogadi Village, Kasaba Hobli, Mysuru District having Site Measurement East to West 18.8976 meters North to South 12.192 meters , bounded as follows :East Road, West by Gnyanamandir , North site no. 2722, South site no. 2724.

Sd/- **Dr.Sharath Raj,**
BAL.LL.B.,LL.M.,Ph.D.
Advocate , # 918, Sahukar Chennaiah Road, T.K. Layout, Mysuru-09 .Ph: 9620777176
E-mail:sharathrajlaw@gmail.com
918, Sahukar Chennaiah Road, T.K. Layout, Mysuru-570009

ನಾಲ್ಕನೇ ವರ್ಷದ ಸವಿನೆನಪು



ಮನೋಹರ್ H.R
ನೀವು ನಮ್ಮನ್ನಗಲಿ 4 ವರ್ಷ ಕಳೆದರೂ
ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಧರ್ಮಪತ್ನಿ, ಅನಿತಾ.B ಮತ್ತು ಮಕ್ಕಳು
ತರುಣ್.M, ತರಣ್.M, ಲೇಟ್ ಜೋತಲಿಂಗೇಗೌಡರು
ಹಾಗೂ ಕುಟುಂಬವರ್ಗ, ಲೋಕನಾಯಕ ನಗರ.

ನೈರುತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ನಂ. 11/ಎಂಜ್ಯೆಎಸ್/2022
ದಿನಾಂಕ : 13-04-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಸಬ್‌ವರ್ಕ್–1 : ಶಿವಮೊಗ್ಗ – ತಾಳಗುಪ್ಪ ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಶಿವಮೊಗ್ಗ ಟೌನ್ ಉಪವಿಭಾಗದಲ್ಲಿ ಆನಂದಪುರಂ – ಸಾಗರ ಜಂಬಗಾರು ನಿಲ್ದಾಣಗಳ ನಡುವೆ ಕಿ.ಮೀ.125/500–600ನಲ್ಲಿ ರೈಲು ಕೆಳಸೇತುವೆ ನಂ.228ಎ ಗಾಗಿ ಒಳಚರಂಡಿ ವ್ಯವಸ್ಥೆ. ಸಬ್‌ವರ್ಕ್–2 : ಶಿವಮೊಗ್ಗ – ತಾಳಗುಪ್ಪ ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಶಿವಮೊಗ್ಗ ಟೌನ್ ಉಪವಿಭಾಗದಲ್ಲಿ ಕಿ.ಮೀ.117/800–900ನಲ್ಲಿನ ರಸ್ತೆ ಕೆಳಸೇತುವೆ ನಂ.215ಎ, ಕಿ.ಮೀ.123/500–600ನಲ್ಲಿನ ರಸ್ತೆ ಕೆಳಸೇತುವೆ ನಂ.223ಎ ಮತ್ತು ಕಿ.ಮೀ.129/000–100ನಲ್ಲಿ ರಸ್ತೆ ಕೆಳಸೇತುವೆ ನಂ.233ಎ ಗೆ ಒಳಚರಂಡಿ ವ್ಯವಸ್ಥೆ, ಸಂಪರ್ಕ ರಸ್ತೆ ಮತ್ತು ರಿಟೇನಿಂಗ್ ವಾಲ್‌ಗೆ ರಿಪೇರಿ. ಸಬ್‌ವರ್ಕ್–3 : ಶಿವಮೊಗ್ಗ – ತಾಳಗುಪ್ಪ ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಶಿವಮೊಗ್ಗ ಟೌನ್ ಉಪವಿಭಾಗದಲ್ಲಿ ಕಿ.ಮೀ.49/500–600ನಲ್ಲಿನ ರಸ್ತೆ ಕೆಳಸೇತುವೆ ನಂ.68ಜಿ ಮತ್ತು ಕಿ.ಮೀ.54/900–55/000ನಲ್ಲಿನ ರಸ್ತೆ ಕೆಳಸೇತುವೆ ನಂ.72ಎ ಗೆ ಒಳಚರಂಡಿ ವ್ಯವಸ್ಥೆ, ಸಂಪರ್ಕ ರಸ್ತೆ ಮತ್ತು ರಿಟೇನಿಂಗ್ ವಾಲ್‌ಗೆ ರಿಪೇರಿ.	ರೂ. 2,59,33,197/-
2	ಸಬ್‌ವರ್ಕ್–1 : ಶಿವಮೊಗ್ಗ ತಾಳಗುಪ್ಪ ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಶಿವಮೊಗ್ಗ ಟೌನ್ ಉಪವಿಭಾಗದಲ್ಲಿ ಕಿ.ಮೀ.71/000–100ನಲ್ಲಿನ ರಸ್ತೆ ಕೆಳಸೇತುವೆ ನಂ.114ಎ, ಕಿ.ಮೀ.77/400–500ನಲ್ಲಿನ ರಸ್ತೆ ಕೆಳಸೇತುವೆ ನಂ.124ಎ ಗೆ ಒಳಚರಂಡಿ ವ್ಯವಸ್ಥೆ, ಸಂಪರ್ಕ ರಸ್ತೆ ಮತ್ತು ರಿಟೇನಿಂಗ್ ವಾಲ್‌ಗೆ ರಿಪೇರಿ. ಸಬ್‌ವರ್ಕ್–2 : ಶಿವಮೊಗ್ಗ – ತಾಳಗುಪ್ಪ ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಶಿವಮೊಗ್ಗ ಟೌನ್ ಉಪವಿಭಾಗದಲ್ಲಿ ಕಿ.ಮೀ.78/800–900ನಲ್ಲಿನ ರಸ್ತೆ ಕೆಳಸೇತುವೆ ನಂ.125ಎ, ಕಿ.ಮೀ.85/800–900ನಲ್ಲಿನ ರಸ್ತೆ ಕೆಳಸೇತುವೆ ನಂ.148ಎ ಮತ್ತು ಕಿ.ಮೀ.89/800–900ನಲ್ಲಿ ರಸ್ತೆ ಕೆಳಸೇತುವೆ ನಂ.169ಎ, ಕಿ.ಮೀ.91/200–300ನಲ್ಲಿ ರಸ್ತೆ ಕೆಳಸೇತುವೆ ನಂ.171ಎ ಮತ್ತು ಕಿ.ಮೀ.102/200–300ನಲ್ಲಿ ರಸ್ತೆ ಕೆಳಸೇತುವೆ ನಂ.193ಎ ಗೆ ಒಳಚರಂಡಿ ವ್ಯವಸ್ಥೆ, ಸಂಪರ್ಕ ರಸ್ತೆ ಮತ್ತು ರಿಟೇನಿಂಗ್ ವಾಲ್‌ಗೆ ರಿಪೇರಿ. ಸಬ್‌ವರ್ಕ್–3 : ಶಿವಮೊಗ್ಗ – ತಾಳಗುಪ್ಪ ಸೆಕ್ಷನ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಶಿವಮೊಗ್ಗ ಟೌನ್ ಉಪವಿಭಾಗದಲ್ಲಿ ಕಿ.ಮೀ.107/400–500ನಲ್ಲಿನ ರಸ್ತೆ ಕೆಳಸೇತುವೆ ನಂ.202ಎ, ಕಿ.ಮೀ.109/200–300ನಲ್ಲಿನ ರಸ್ತೆ ಕೆಳಸೇತುವೆ ನಂ.204ಎ, ಕಿ.ಮೀ.113/500–600ನಲ್ಲಿ ರಸ್ತೆ ಕೆಳಸೇತುವೆ ನಂ.209ಜಿ ಮತ್ತು ಕಿ.ಮೀ.122/700–800ನಲ್ಲಿ ರಸ್ತೆ ಕೆಳಸೇತುವೆ ನಂ.221ಎ ಗೆ ಒಳಚರಂಡಿ ವ್ಯವಸ್ಥೆ, ಸಂಪರ್ಕ ರಸ್ತೆ ಮತ್ತು ರಿಟೇನಿಂಗ್ ವಾಲ್‌ಗೆ ರಿಪೇರಿ.	ರೂ. 2,86,09,727/-
3	ಸಹಾಯಕ ವಿಭಾಗೀಯ ಇಂಜಿನಿಯರ್ / ಸಕಲೇಶಪುರ ಉಪವಿಭಾಗ – ಸಕಲೇಶಪುರ – ಸುಬ್ರಹ್ಮಣ್ಯ ರಸ್ತೆ ನಿಲ್ದಾಣಗಳ ನಡುವೆ ಒಂದು ವರ್ಷದ ಅವಧಿಗೆ ತಿರುವುಗಳಲ್ಲಿ ಸವೆದು ಹೋದ ಫಾಸ್ಟೆನಿಂಗ್‌ಗಳ ಬದಲಾವಣೆ ಮತ್ತು ತಿರುವುಗಳಲ್ಲಿ ರೈಲ್ವೆ ಗ್ರೀಸಿಂಗ್‌ನಿಂದ ರೈಲ್‌ಗಳ ಗ್ರೀಸಿಂಗ್ ಒಳಗೊಂಡಂತೆ ಟ್ರ್ಯಾಕ್‌ನ ನಿರ್ವಹಣೆ.	ರೂ. 1,84,08,260/-
4	ಮೈಸೂರು : ಮೈಸೂರಿನಲ್ಲಿ ಕನ್‌ಸ್ಟ್ರಕ್ಷನ್ ಪವರ್ ಕಂಟ್ರೋಲ್ ಮತ್ತು ರಿಮೋಟ್ ಕಂಟ್ರೋಲ್‌ನ ಉನ್ನತೀಕರಣ ನಿರ್ಮಾಣ.	ರೂ. 2,15,85,669/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 05-05-2022ರಂದು 11:00 ಗಂಟೆವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ, ಮೈಸೂರು
S.W.Railways SWRRLY SWRRLY

SDJ JEWELERS

ಪುರುಷರು ಮತ್ತು ಮಹಿಳೆಯರು
Tele Callers ಮತ್ತು **Sales Executive** ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು **PG** ವ್ಯವಸ್ಥೆ ಇರುತ್ತದೆ
Salary : 20,000
8884304444

ತಕ್ಷಣ ಬೇಕಾಗಿದ್ದಾರೆ

ಮೈಸೂರು ಕೆ. ಆರ್.ಎಸ್. ರಸ್ತೆಯಲ್ಲಿರುವ ಕಾರ್ಖಾನೆಯಲ್ಲಿ ಕೆಲಸಮಾಡಲು **ಹೆಲ್ಪರ್ಸ್** (**HELPERS**) ತಕ್ಷಣ ಬೇಕಾಗಿದ್ದಾರೆ.
ವಯಸ್ಸು : 20 ರಿಂದ 45
ತೂಕ : 50 ರಿಂದ 70
8 ಘಂಟೆಗಳ ಕೆಲಸ.
ಸಂಬಳ : **14,000(ESI, PF** +ಉಚಿತ ಊಟ)
9980211233/ 8867911233

ಒಂದನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ
ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು:
ಶ್ರೀಮತಿ ಗಾಯತ್ರಿ ಮತ್ತು ಮಕ್ಕಳು, ಗಣೇಶ ಮತ್ತು ನವೀನ, ನಿರಂಜನ್.ಟಿ.ಕೆ ಮತ್ತು ಮೊಮ್ಮಕ್ಕಳು, ಚಿರಾಗ್, ದಿಯಾ, ಚರಿಷ್ಮ ಕಳಲೂರು ಗ್ರಾಮ ಮೈಸೂರು ತಾ।
ಶ್ರೀ ಕಲ್ಯಾಣಯ್ಯ
ನಿಧನ: 20.04.2021





ಹುಬ್ಬಳ್ಳಿ ಗಲಭೆ: ಮತ್ತೆ 15 ಜನರ ಬಂಧನ

ಹುಬ್ಬಳ್ಳಿ, ಏ. 19–ಇಲ್ಲಿನ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ಮತ್ತೆ 15 ಜನರನ್ನು ಬಂಧಿಸಲಾಗಿದ್ದು, ಒಟ್ಟು 12 FIRಗಳನ್ನು ದಾಖಲಾಗಿದೆ. ಹುಬ್ಬಳ್ಳಿ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಒಟ್ಟು 104 ಜನರನ್ನು ಬಂಧಿಸಲಾಗಿದೆ. ದೇವಸ್ಥಾನ, ಮನೆ ಹಾಗೂ ಪೋಸ್ಟ್ ಆಫೀಸ್ ಮೇಲೆ ಕಲ್ಲು ಎಸೆದಿರುವ ಪ್ರಕರಣಕ್ಕೆ ಸಂಬಂಧಿಸಿ ದೂರು ದಾಖಲಿಸಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಸೂಕ್ತ ಬಂದೋಬಸ್ತ್ ಮುಂದುವರೆಸಿದ್ದು, ಬೇರೆ ಕಡೆ ಎಲ್ಲೂ ಗಲಾಟೆ ಆಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಪೊಲೀಸ್ ವಾಹನದ ಮೇಲೆ ಮೌಲ್ವಿ ಸೇರಿದಂತೆ ಹಲವರು ಹತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ತನಿಖೆ ಆರಂಭ ಮಾಡಲಾಗಿದೆ. ತನಿಖೆ ನಂತರ ಎಲ್ಲಾ ಸತ್ಯಾಸತ್ಯತೆ ಗೊತ್ತಾಗಲಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮೂರನೇ ಪುಟದಿಂದ

ಸಹಕಾರ ಬ್ಯಾಂಕ್ ಆರಂಭ

ಕೆರೆ ತುಂಬಿಸುವ ಪ್ರಯತ್ನ: ಪಿರಿಯಾಪಟ್ಟಣ ಭಾಗದಲ್ಲಿ ಕೆರೆ ತುಂಬಿಸುವ ಕಾರ್ಯಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಈಗಾಗಲೇ ಶೇ.70ರಷ್ಟು ಭಾಗದ ಕೆರೆಗಳಿಗೆ ನೀರು ತುಂಬಿಸಿದ್ದು ಉಳಿದ ಸ್ಥಳಗಳಲ್ಲಿರುವ ಅಡತಡೆ ನಿವಾರಣೆಗೆ ಕ್ರಮ ಕೈಗೊಳ್ಳಲಾಗುವುದು. ಈ ಭಾಗದಲ್ಲಿ ಪಶು ಆಹಾರ ಉತ್ಪಾದನೆ ಘಟಕ ಆರಂಭಕ್ಕೆ 10 ಎಕರೆ ಜಾಗ ಖರೀದಿಸಲು ಆದೇಶಿಸಲಾಗಿದ್ದು, ಇದರಿಂದ ಈ ಭಾಗದ ರೈತರಿಗೆ ಅನುಕೂಲವಾಗುವುದರ ಜೊತೆಗೆ ಸ್ಥಳೀಯ ಯುವಕರಿಗೆ ಉದ್ಯೋಗವೂ ಸಿಗಲಿದೆ ಎಂದರು. ರಾಜ್ಯದಲ್ಲಿ 15 ಹಾಲು ಒಕ್ಕೂಟಗಳಿದ್ದು, ಇವುಗಳಲ್ಲಿ ಪ್ರಥಮವಾಗಿ ಪಿರಿಯಾಪಟ್ಟಣದಲ್ಲಿ ಪಶು ಆಹಾರ ತಯಾರಿಕಾ ಘಟಕ ಸ್ಥಾಪನೆಯಾಗುವುದು ಹೆಮ್ಮೆಯ ಸಂಗತಿ. ಈ ಘಟಕದಿಂದ ಮೆಕ್ಕೆ ಜೋಳ, ದ್ವಿದಳ ಧಾನ್ಯಗಳಿಗೆ ಬೇಡಿಕೆ ಹೆಚ್ಚುವುದರಿಂದ ರೈತರ ಆರ್ಥಿಕ ಸುಧಾರಣೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ನಮ್ಮ ಸರ್ಕಾರ ಅಭಿವೃದ್ಧಿ ವಿಚಾರದಲ್ಲಿ ಪಕ್ಷ ಬೇಧ ಮಾಡಿಲ್ಲ. ಕಾಂಗ್ರೆಸ್ ಶಾಸಕರಿರಲಿ, ಜೆಡಿಎಸ್‌ನವರಾಗಲೀ ಎಲ್ಲರಿಗೂ ಒಂದೇ ರೀತಿಯಲ್ಲಿ ಬೆಂಬಲ ನೀಡಿದೆ. ಮೈಸೂರು ಉಸ್ತುವಾರಿ ಸಚಿವನಾಗಿ ಪಿರಿಯಾಪಟ್ಟಣ ಕ್ಷೇತ್ರದ ಅಭಿವೃದ್ಧಿಗೂ ನಾನು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ ಎಂದು ಇದೇ ವೇಳೆ ಹೇಳಿದರು.

ಅಭಿವೃದ್ಧಿ ಪಥ: ಸಂಸದ ಪ್ರತಾಪ್ ಸಿಂಹ ಮಾತನಾಡಿ, ಪಿರಿಯಾಪಟ್ಟಣದಲ್ಲಿ ಮುಂದಿನ ದಿನಗಳಲ್ಲಿ ಅತಿ ಹೆಚ್ಚು ಅಭಿವೃದ್ಧಿ ಕಾರ್ಯಗಳಾಗಲಿವೆ. 4 ಪಥದ ರಸ್ತೆ ಕಾಮಗಾರಿಗೆ ಶೀಘ್ರ ಚಾಲನೆ ಸಿಗಲಿದ್ದು, ಮಸಣಿಕಮ್ಮ ದೇವಸ್ಥಾನದ ಸರ್ವಾಂಗೀಣ ಅಭಿವೃದ್ಧಿಗೆ 50 ಲಕ್ಷ ರೂ. ಬಿಡುಗಡೆಯಾಗಿದೆ ಎಂದು ತಿಳಿಸಿದರು.

ಹೈನುಗಾರಿಕೆ ಮಾಡಿ: ಶಾಸಕ ಕೆ.ಮಹದೇವ್ ಮಾತನಾಡಿ, ತಾಲೂಕಿನಲ್ಲಿ ಅತೀ ಹೆಚ್ಚು ರೈತರು ಹೊಗೆಸೊಪ್ಪು ಬೆಳೆಯನ್ನು ಅವಲಂಭಿಸಿದ್ದಾರೆ. ರೈತರು ಹೈನುಗಾರಿಕೆಗೆ ಪ್ರಾಶಸ್ತ್ಯ ನೀಡಿದ್ದಲ್ಲಿ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಅನೇಕ ಕುಟುಂಬಗಳು ಇಂದಿಗೂ ಹೈನುಗಾರಿಕೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಕೋವಿಡ್ ವಿಷಮ ಪರಿಸ್ಥಿತಿಯಲ್ಲಿಯೂ ಮೈಸೂರು ಹಾಲು ಒಕ್ಕೂಟ ರೈತರ ಹಿತ ಕಾದಿದೆ ಎಂದು ಬಣ್ಣಿಸಿದರು.

ಸಾಲಕ್ಕೆ ಮನವಿ: ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಪಿ.ಎಂ.ಪ್ರಸನ್ನ ಮಾತನಾಡಿ, ಎಸ್‌ಬಿಐ ಸಹಕಾರದಿಂದ ಹೈನುಗಾರಿಕೆ ಮಾಡಲಿಚ್ಛಿಸುವವರಿಗೆ 5 ಸಾವಿರ ರಾಸುಗಳಿಗೆ ಸಾಲ ನೀಡಲು ಮನವಿ ಮಾಡಲಾಗಿದೆ. ಈ ಹಿಂದೆ ತಾಲೂಕಿನಲ್ಲಿ 40 ಸಾವಿರ ಲೀಟರ್ ಹಾಲು ಉತ್ಪಾದನೆಯಾಗುತ್ತಿತ್ತು. ಆದರೆ ಪ್ರಸ್ತುತ 1 ಲಕ್ಷ ಲೀಟರ್‌ಗೂ ಅಧಿಕ ಹಾಲು ಉತ್ಪಾದನೆಯಾಗುತ್ತಿದ್ದು, ಇದನ್ನು 2 ಲಕ್ಷಕ್ಕೆ ಮುಟ್ಟಿಸುವ ಗುರಿ ನಮ್ಮದಾಗಿದೆ. ಈ ನಿಟ್ಟಿನಲ್ಲಿ 70 ರಿಂದ 80 ಹಾಲು ಉತ್ಪಾದಕರ ಸಂಘಗಳು, 42 ಹಾಲು ಉತ್ಪಾದಕ ಕೇಂದ್ರಗಳು ಶ್ರಮಿಸುತ್ತಿದೆ. ಮೈಮುಲ್‌ನಿಂದ ಯುಎಸ್ಬಿ ಬ್ಯಾಂಕ್ ತೆರೆಯುವ ಯೋಜನೆ ಇದೆ. ತಾಲೂಕಿನಲ್ಲಿಯೂ ಪಶು ಆಹಾರ ಘಟಕ ಸ್ಥಾಪನೆ ಮಾಡುವ ಜೊತೆಗೆ 250 ವಿದ್ಯಾರ್ಥಿನಿಯರ ವಾಸ್ತವ್ಯಕ್ಕೆ ವಿದ್ಯಾರ್ಥಿ ನಿಲಯ ನಿರ್ಮಿಸುವ ಗುರಿ ಹೊಂದಿದ್ದೇವೆ. ಈ ಕಾರ್ಯಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಂಸದರು ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿದರು. ಇದೇ ವೇಳೆ ಹಾಲು ಕರೆಯುವ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ವಸ್ತು ಪ್ರದರ್ಶನ, ಆರೋಗ್ಯ ಇಲಾಖೆ ವತಿಯಿಂದ ಉಚಿತ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕರಾದ ಸೋಮಶೇಖರ್, ಮಹೇಶ್, ಈರೇಗೌಡ, ಓಂಪ್ರಕಾಶ್, ಕುಮಾರ್, ದಾಕ್ಷಾಯಿಣಿ, ಓಂಪ್ರಕಾಶ್, ಉಮಾ ಶಂಕರ್, ಲೀಲಾ, ಶಿವಗಾಮಿ, ರಾಜೇಂದ್ರ, ಪುರಸಭೆ ಅಧ್ಯಕ್ಷೆ ನಾಗರತ್ನ, ಸದಸ್ಯರಾದ ಮಂಜುನಾಥ ಸಿಂಗ್, ಪ್ರಕಾಶ್‌ಸಿಂಗ್, ಮಹೇಶ್, ಪಿ.ಸಿ.ಕೃಷ್ಣ ನಿರಂಜನ್, ಆಶಾ, ಪುಷ್ಪಾ, ಭಾರತಿ, ನಳಿನಿ, ಪ್ರಸಾದ್, ಶಿವರಾಮ್, ಅಣ್ಣಯ್ಯ ಶೆಟ್ಟಿ, ಆರ್.ಟಿ.ಸತೀಶ್, ಪಶುಸಂಗೋಪನೆ ಇಲಾಖೆ ಉಪನಿರ್ದೇಶಕ ಡಾ.ಬಿ.ಎನ್.ಷಡಕ್ಷರಮೂರ್ತಿ, ವಿಜಯಕುಮಾರ್ ಮತ್ತಿತರರಿದ್ದರು.

ಪಿಯುಸಿ ಪರೀಕ್ಷೆ ಪ್ರಾರಂಭ

ಅದರಲ್ಲಿ 6,00,519 ರೆಗ್ಯುಲರ್ ವಿದ್ಯಾರ್ಥಿಗಳು, 61,808 ಪುನರಾವರ್ತಿತ ಹಾಗೂ 21,928 ಖಾಸಗಿ ಅಭ್ಯರ್ಥಿಗಳು ಇದ್ದಾರೆ. ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಣೆ ಮಾಡಲು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಪರೀಕ್ಷಾ ಕೇಂದ್ರಗಳ ಬಳಿ ಪೊಲೀಸ್ ಬಂದೋಬಸ್ತ್ ಇರಲಿದೆ. ಪಿಯು ಪರೀಕ್ಷೆಗೆ ಸಂಬಂಧಿಸಿದ ಎಲ್ಲ ಕಾರ್ಯಗಳು ಪೊಲೀಸ್ ಬಂದೋಬಸ್ತ್‌ನಲ್ಲಿ ನಡೆಯಲಿವೆ. 24/7 ಸಿಸಿಟಿವಿ ಕ್ಯಾಮರಾ ನಿಗಾ ಇರಲಿದೆ ಎಂಬ ಮಾಹಿತಿ ನೀಡಿದರು. ಪರೀಕ್ಷೆಗೂ ಸಮವಸ್ತ್ರ ನಿಯಮ ಅನ್ವಯವಾಗುತ್ತದೆ. ಪುನರಾವರ್ತಿತ ಮತ್ತು ಖಾಸಗಿ ಅಭ್ಯರ್ಥಿಗಳಿಗೆ ಸಮವಸ್ತ್ರದಿಂದ ವಿನಾಯಿತಿ ಇರುತ್ತದೆ ಆದರೆ ಸಾಮಾನ್ಯ ಧಿರಿಸಿನಲ್ಲಿ ಪರೀಕ್ಷೆಗೆ ಹಾಜರಾಗುವವರು ಸರ್ಕಾರ ಮತ್ತು ಹೈಕೋರ್ಟ್ ಆದೇಶಗಳನ್ನು ಪಾಲಿಸಬೇಕು. ಪರೀಕ್ಷಾ ಅಕ್ರಮಗಳನ್ನು ತಡೆಯಲು ಮತ್ತು ನಿಗಾ ಇರಿಸಲು ಜಾಗೃತ ದಳಗಳು ಕಾರ್ಯ ನಿರ್ವಹಿಸಲಿವೆ. ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸಲು ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

> **ಏ–22:** ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, **ಏ.23:** ಗಣಿತ, ಶಿಕ್ಷಣ ಶಾಸ್ತ್ರ, **ಏ–25:** ಅರ್ಥಶಾಸ್ತ್ರ, **ಏ–26:** ಹಿಂದೂಸ್ತಾನಿ ಸಂಗೀತ, ಸೈಕಾಲಜಿ, ರಸಾಯನಶಾಸ್ತ್ರ, ಮೂಲ ಗಣಿತ, **ಏ–27:** ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, **ಏ–28:** ಕನ್ನಡ, ಅರೇಬಿಕ್, **ಮೇ–4:** ಭೂಗೋಳ ಶಾಸ್ತ್ರ, ಜೀವಶಾಸ್ತ್ರ, **ಮೇ–5:** ಮಾಹಿತಿ ತಂತ್ರಜ್ಞಾನ, ರಿಟೇಲ್, ಆಟೋ ಮೊಬೈಲ್, ಹೆಲ್ತ್ ಕೇರ್, ಬ್ಯೂಟಿ ಮತ್ತು ವೆಲ್ ನೆಸ್, **ಮೇ–6:** ಇಂಗ್ಲಿಷ್, **ಮೇ–10:** ಇತಿಹಾಸ, ಭೌತಶಾಸ್ತ್ರ, **ಮೇ–14:** ಸಮಾಜಶಾಸ್ತ್ರ, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್, **ಮೇ–17:** ಐಚ್ಛಿಕ ಕನ್ನಡ, ಲೆಕ್ಕ ಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹ ವಿಜ್ಞಾನ, **ಮೇ–18:** ಹಿಂದಿ

ಈ ಹಿಂದೆ ನಕಲು ಪ್ರಯತ್ನ ನಡೆದಿರುವ ಪರೀಕ್ಷಾ ಕೇಂದ್ರಗಳ ಬಳಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಕೈಗೊಳ್ಳುವ ಕುರಿತು ಶಿಕ್ಷಣ ಇಲಾಖೆ ಅಧಿಕಾರಿಗಳ ಜೊತೆ ಚರ್ಚಿಸಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ವರಿಷ್ಠಾಧಿಕಾರಿಗಳು ನಿರ್ಧಾರ ತೆಗೆದುಕೊಳ್ಳುತ್ತಾರೆ. ಈ ಕುರಿತು ಹಲವು ಸುತ್ತಿನ ಸಭೆಗಳು ನಡೆದಿವೆ ಎಂದರು. ಪರೀಕ್ಷೆಗೆ ತೆರಳುವ ವಿದ್ಯಾರ್ಥಿಗಳು ಪರೀಕ್ಷೆ ನಡೆಯುವ ದಿನಗಳಂದು ತಮ್ಮ ಹಾಲ್‌ಟಿಕೆಟ್ ತೋರಿಸಿ ಉಚಿತವಾಗಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸಲು ಸಾರಿಗೆ ಇಲಾಖೆ ಅವಕಾಶ ಕಲ್ಪಿಸಿದೆ ಎಂದರು.

ಆನೆಗೆ ಅವಳಿ ಭಾಗ್ಯ

ಕ್ಯಾಂಪಸ್‌ಗೆ ಹೊಂದಿಕೊಂಡಂತಿರುವ ರಿಸೆಪ್ಷನ್ ರೋಡ್‌ನಲ್ಲಿ ಮೈಸೂರು–ಊಟಿ ಮುಖ್ಯ ರಸ್ತೆಗೆ ಕೂಗಳತೆಯ ಅಂತರದಲ್ಲೇ ಎರಡು ಮರಿಗಳಿಗೆ ಹೆಣ್ಣಾನೆ ಜನ್ಮ ನೀಡಿದೆ. ಬಂಡೆಗಳ ನಡುವೆ ಎರಡು ದಿನಗಳ ಹಿಂದೆ ಮರಿಗಳಿಗೆ ಜನ್ಮ ನೀಡಿದೆ. ಸಫಾರಿಗೆಂದು ಬಂದ ಪ್ರವಾಸಿಗರಿಗೆ ಅವಳಿ ಮರಿಗಳ ಅಪರೂಪದ ದರ್ಶನವಾಗಿದೆ.

ಮರಿಗಳನ್ನು ರಕ್ಷಿಸಿದ ಅರಣ್ಯ ಸಿಬ್ಬಂದಿ: ರಿಸೆಪ್ಷನ್ ರಸ್ತೆಯ ಬಂಡೆಗಳ ನಡುವೆ ಮರಿಗೆ ಜನ್ಮ ನೀಡಿದ್ದರಿಂದ ಮರಿಗಳೆರಡು ಬಂಡೆಯೊಂದರ ಮೇಲಿದ್ದ ಸಣ್ಣ ಹಳ್ಳಕ್ಕೆ ಸಿಲುಕಿದ್ದವು. ಆನೆ ಘೀಳಿಡುತ್ತಿದ್ದನ್ನು ಗಮನಿಸಿದ ಸಫಾರಿ ವಾಹನಗಳ ಚಾಲಕರು ಹಾಗೂ ಕ್ಯಾಂಪಸ್‌ನಲ್ಲಿ ಗಸ್ತಿನಲ್ಲಿದ್ದ ಅರಣ್ಯ ಸಿಬ್ಬಂದಿ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಕೂಡಲೇ ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ ಡಾ.ರಮೇಶ್‌ಕುಮಾರ್ ಸೂಚನೆ ಮೇರೆಗೆ ಎಸಿಎಫ್ ನವೀನ್, ಆರ್‌ಎಫ್‌ಓ ಶಶಿಧರ್ ಹಾಗೂ ಇನ್ನಿತರ ಸಿಬ್ಬಂದಿಗಳು ಜೀಪ್‌ನಲ್ಲಿ ತೆರಳಿ ತಾಯಿ ಆನೆಯನ್ನು ಜೀಪ್ ಶಬ್ದದಿಂದ ಸ್ವಲ್ಪ ದೂರ ಓಡಿಸಿದ್ದಾರೆ. ಜೀಪ್ ಹತ್ತಿರಕ್ಕೆ ಬಂದದ್ದನ್ನು ಕಂಡು ಹೆದರಿದ ತಾಯಿ ಆನೆ ಬಂಡೆ ಏರಿದೆ. ಈ ವೇಳೆ ಅರಣ್ಯ ಸಿಬ್ಬಂದಿ ಪ್ರಾಣದ ಹಂಗು ತೊರೆದು ಗುಂಡಿಯಲ್ಲಿ ಸಿಲುಕಿದ್ದ ಅವಳಿ ಮರಿಗಳನ್ನು ಮೇಲೆತ್ತಿದ್ದಾರೆ. ಇದನ್ನು ಬಂಡೆ ಮೇಲೆ ನಿಂತು ನೋಡುತ್ತಿದ್ದ ತಾಯಿ ಆನೆ ಸಿಬ್ಬಂದಿಗಳು ದೂರ ಹೋದ ನಂತರ ಕರುಳ ಕಡಿಯನ್ನು ಮುದ್ದಾಡಿ ಹಾಲು ಕುಡಿಸಿದೆ.

ಸಮಯ ಪ್ರಜ್ಞೆ: ಗುಂಡಿಯಲ್ಲಿ ಆನೆ ಮರಿಗಳಿರುವುದನ್ನು ಆರಂಭದಲ್ಲೇ ಗಮನಿಸಿ, ಮೇಲೆತ್ತಿದ್ದರಿಂದ ಅವಳಿ ಮರಿಗಳಿಗೆ ಯಾವುದೇ ಹಾನಿಯಾಗಿಲ್ಲ. ಒಂದು ವೇಳೆ ರಕ್ಷಣಾ ಕಾರ್ಯಾಚರಣೆ ತಡವಾಗಿದ್ದರೆ ಹಸಿವಿನಿಂದ ನಿತ್ರಾಣವಾಗುತ್ತಿದ್ದವು. ಅಪರೂಪದಲ್ಲಿ ಅಪರೂಪ ಎನಿಸಿರುವ ಈ ಪ್ರಕರಣದ ಮಹತ್ವ ಅರಿತ ಸಿಬ್ಬಂದಿ ತುರ್ತಾಗಿ ಕಾರ್ಯಾಚರಣೆ ನಡೆಸಿದ್ದರಿಂದ ಅವಳಿ ಮರಿಗಳ ರಕ್ಷಣೆ ಸಾಧ್ಯವಾಗಿದೆ.

ಅರಣ್ಯ ಇಲಾಖೆ ಸಿಬ್ಬಂದಿ ಕೃಪಾಕಟಾಕ್ಷದಿಂದ ಗುಂಡಿಯಿಂದ ಮೇಲೆದ್ದಿರುವ ಮರಿಗಳು ಇದೀಗ ತಾಯಿಯೊಂದಿಗೆ ಲವಲವಿಕೆಯಿಂದ ಕೂಡಿದೆ. ಜನ್ಮ ನೀಡಿದ ಸ್ಥಳದ ಸುತ್ತಮುತ್ತಲಿನ ಪ್ರದೇಶದಲ್ಲೇ ತಾಯಿ ಆನೆ ಅವಳಿ ಮರಿಗಳೊಂದಿಗೆ ಓಡಾಡುತ್ತಿದೆ. ಸದರಿ ಜಾಗ ಸುರಕ್ಷಿತವೆಂದು ಆನೆ ಆಯ್ಕೆ ಮಾಡಿಕೊಂಡಿದೆ. ಕಾಡೊಳಗೆ ತೆರಳಿದರೆ ಮರಿಗಳಿಗೆ ಹುಲಿಗಳಿಂದ ಆತಂಕ ಎದುರಾಗಬಹುದೆಂಬ ಲೆಕ್ಕಾಚಾರದಿಂದ ಸಫಾರಿ ವಾಹನ ಓಡಾಡುವ ವಲಯದ ಆಸುಪಾಸಿನಲ್ಲೇ ಓಡಾಡುತ್ತಿರುವುದು ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಮೈಸೂರು ಆರೋಗ್ಯ ಶಿಬಿರದಲ್ಲಿ ಭಾರೀ ಜನ

● ಹೈರಾಣಾದ ವೈದ್ಯಕೀಯ ಸಿಬ್ಬಂದಿ, ಚಿಕಿತ್ಸೆ ಪಡೆಯದೆ ಕೆಲವರು ವಾಪಸ್ ● ಏಪ್ರಿಲ್ 22ರವರೆಗೆ ಆರೋಗ್ಯ ತಪಾಸಣಾ ಶಿಬಿರ
● ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್ ವಿತರಣೆ ● ಹೆಚ್ಚಿನ ಚಿಕಿತ್ಸೆ ಅಗತ್ಯವಿರುವವರಿಗೆ ಸರ್ಕಾರದಿಂದ ನೆರವು





ಮೈಸೂರು, ಏ.19(ಎಂಟಿವೈ)– ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಸೇಠ್ ಮೋಹನ್‌ದಾಸ್ ತುಳಸಿದಾಸ್(ಎಸ್‌ಎಂಟಿ) ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರಕ್ಕೆ ನಿರೀಕ್ಷೆಗೂ ಮೀರಿದ ಜನರು ಆಗಮಿಸಿದ್ದು, ಜನಜಂಗುಳಿಯಿಂದಾಗಿ ವೈದ್ಯಕೀಯ ಸಿಬ್ಬಂದಿ ಹೈರಾಣಾದರೆ, ಹಲವು ಮಂದಿ ತಪಾಸಣೆ ಮಾಡಿಸಿಕೊಳ್ಳದೆ ನಿರಾಶೆಯಿಂದ ವಾಪಸ್ಸಾದರು.

ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಬೃಹತ್ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದ್ದು, ಅಭಿಯಾನದ ಎರಡನೇ ದಿನವಾದ ಮಂಗಳವಾರ ಎಸ್‌ಎಂಟಿ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮೈಸೂರು ನಗರದ ವಿವಿಧ ಬಡಾವಣೆ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಿಂದ ಸಾವಿರಾರು ಮಂದಿ ಪಾಲ್ಗೊಂಡಿದ್ದರಿಂದ ಈ ಸಮಸ್ಯೆ ಉಂಟಾಯಿತು.

ಜನರ ಆರೋಗ್ಯ ರಕ್ಷಣೆಗೆ ಆದ್ಯತೆ: ಶಿಬಿರವನ್ನು ಉದ್ಘಾಟಿಸಿದ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಏ.18ರಿಂದ 22ರವರೆಗೆ ಆರೋಗ್ಯ ತಪಾಸಣೆ ಶಿಬಿರ ನಡೆಸುವಂತೆ ಪ್ರಧಾನಿ ಮೋದಿ ಕರೆ ನೀಡಿದ್ದಾರೆ. ದೇಶದ ಆರ್ಥಿಕ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡುವಂತೆಯೇ ಜನರ ಆರೋಗ್ಯ ರಕ್ಷಣೆಗೂ ಒತ್ತು ಕೊಟ್ಟಿದ್ದಾರೆ ಎಂದರು.

ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್ ವಿತರಿಸಿದ ಬಳಿಕ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಆರೋಗ್ಯ ಜಾಗೃತಿ ಅಭಿಯಾನದ ಮುಗಿಸಿ ಸುಮ್ಮನಾಗುವುದಿಲ್ಲ. ಪರೀಕ್ಷೆ ಮಾಡಿಸಿ ಮನೆಗೆ ಕಳುಹಿಸುವುದರೊಂದಿಗೆ ಹೆಚ್ಚಿನ ಚಿಕಿತ್ಸೆ ಅವಶ್ಯವಿರುವ ಎಲ್ಲರಿಗೂ ಸರ್ಕಾರದ ನೆರವು ಕೊಡಿಸಲು ಶ್ರಮಿಸುತ್ತೇನೆ. ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ತಾಯಿ ಮತ್ತು ಮಕ್ಕಳ ಮರಣ ಮುಕ್ತ ಮಾಡಲು ಶ್ರಮಿಸಬೇಕು. 5 ಲಕ್ಷ ರೂಪಾಯಿಯ ಆರೋಗ್ಯ ರಕ್ಷಣಾ ಕಾರ್ಡ್ ಪ್ರತಿಯೊಬ್ಬರಿಗೂ ಸಿಗುವಂತೆ ಆರೋಗ್ಯ ಕಾರ್ಯಕರ್ತರು ಶ್ರಮಿಸಬೇಕು. ಕುಡಿಯುವ ನೀರಿನಿಂದ, ವಾಹನಗಳ ಹೊಗೆಯಿಂದ, ಕಲುಷಿತಗೊಂಡಿರುವ ಆಹಾರದಿಂದ ಕ್ಯಾನ್ಸರ್ ರೋಗ ಬರುತ್ತಿದೆ. ಹಾಗಾಗಿ ಶುದ್ಧ ಕುಡಿಯುವ ನೀರು ಬಳಸಬೇಕು. ವಾಯುಮಾಲಿನ್ಯ ತಡೆ, ಗುಣಮಟ್ಟದ ಆರೋಗ್ಯ, ಆಯುರ್ವೇದ, ನ್ಯಾಚುರೋಪತಿ, ಇಂಗ್ಲಿಷ್ ಔಷಧದೊಂದಿಗೆ ಯೋಗದ ಮೂಲಕ ತಮ್ಮ ಆರೋಗ್ಯ ಕಾಪಾಡಿಕೊಳ್ಳುವಂತೆ ಸಲಹೆ ನೀಡಿದರು.

> **ಇನ್ನೆರಡು ದಿನ ವಿಸ್ತರಿಸಿ**
>
> ಆರೋಗ್ಯ ಮೇಳದಲ್ಲಿ ನೂಕುನುಗ್ಗಲು ಹೆಚ್ಚಾಗಿದ್ದರಿಂದ ಹಲವು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳದೆ ವಾಪಸ್ಸಾದರು. ಜನರ ಹಿತದೃಷ್ಟಿಯಿಂದ ಆರೋಗ್ಯ ತಪಾಸಣಾ ಶಿಬಿರವನ್ನು ಇನ್ನೆರಡು ದಿನ ವಿಸ್ತರಿಸುವಂತೆ ಸಾರ್ವಜನಿಕರು ಒತ್ತಾಯಿಸಿದರು.

ಮೇಳದಲ್ಲಿ: ಆರೋಗ್ಯ ತಪಾಸಣಾ ಮೇಳದಲ್ಲಿ ಎನ್‌ಸಿಡಿ, ಟಿಬಿ ಪರೀಕ್ಷೆ, ಯೋಗ, ಐಇಸಿ, ಆಯುಷ್ ವಿಭಾಗ, ಔಷಧಿ ವಿತರಣೆ, ಪ್ರಯೋಗಾಲಯ, ಪ್ರಸೂತಿ ಹಾಗೂ ಸ್ತ್ರೀರೋಗ ವಿಭಾಗ, ಮಕ್ಕಳ ತಜ್ಞರ ವಿಭಾಗ, ಚರ್ಮ ರೋಗ, ಕೀಲು ಮತ್ತು ಮೂಳೆ ವಿಭಾಗ, ದಂತ ಚಿಕಿತ್ಸಾ ವಿಭಾಗ, ರಕ್ತನಿಧಿ ಸಂಗ್ರಹ ಕೇಂದ್ರ, ಫಿಜಿಶಿಯನ್, ಲಸಿಕಾ ಕೇಂದ್ರ, ಇಎನ್‌ಟಿ ಆಪ್ತಸಮಾಲೋಚನಾ ಕೇಂದ್ರ ತೆರೆಯಲಾಗಿತ್ತು.

ಜಾಗೃತಿ ಮೇಳ: ಆರೋಗ್ಯ ತಪಾಸಣಾ ಶಿಬಿರದಲ್ಲಿ ಆಹಾರ ಸುರಕ್ಷಿತ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಸುರಕ್ಷಿತ ಆಹಾರದಿಂದ ಸದೃಢ ಆರೋಗ್ಯ ಅರಿವು ಮೂಡಿಸಲಾಯಿತು. ಕ್ಷಯರೋಗ ತಪಾಸಣೆ ಮಾಡಲಾಯಿತು. ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಆಯುಷ್ ಆರೋಗ್ಯ ಮೇಳ, ಎನ್‌ಸಿಟಿ ಸ್ಕ್ರೀನಿಂಗ್, ಐಇಸಿ ವಸ್ತುಪ್ರದರ್ಶನ ಇತ್ತು. ಸಾಂಕೇತಿಕವಾಗಿ ಆರೋಗ್ಯ ರಕ್ಷಣಾ ಕಾರ್ಡ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಮಾತನಾಡಿದರು. ತಾಲೂಕು ಆರೋಗ್ಯಾಧಿಕಾರಿ ಡಾ.ಎಸ್. ರಾಜೇಶ್ವರಿ, ಸರ್ವಲನ್ಸ್ ಅಧಿಕಾರಿ ಡಾ.ಶಿವಪ್ರಸಾದ್, ಆರ್‌ಸಿಹೆಚ್‌ಓ ಡಾ.ಎಂ.ಎಸ್.ಜಯಂತ್, ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ಡಾ.ಮಂಜುನಾಥ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಸಂತೋಷ್, ಶಿವಾನಂದ್, ಕೃಷ್ಣ ಮೊದಲಾದವರು ಭಾಗವಹಿಸಿದ್ದರು.

ಡಿ.ದೇವರಾಜ ಅರಸು ರಸ್ತೆ ಪಾರ್ಕಿಂಗ್ ಸಮಸ್ಯೆ ಪರಿಹರಿಸಲು
ಸಂಚಾರ ಪೊಲೀಸರು, ಮಳಿಗೆದಾರರ ಜಂಟಿ ಪ್ರಯತ್ನ



ಮೈಸೂರು, ಏ. 19(ಆರ್‌ಕೆ)– ಕೋವಿಡ್–19 ಪರಿಸ್ಥಿತಿ ಸುಧಾರಣೆ ನಂತರ ಮತ್ತೆ ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿ ವಾಹನ ಸಂಚಾರ ಸಮಸ್ಯೆ ಮತ್ತೆ ತಲೆದೋರಿದೆ.

ಹಲವು ವರ್ಷಗಳಿಂದ ತಲೆದೋರಿರುವ ಈ ಪ್ರಮುಖ ವಾಣಿಜ್ಯ ರಸ್ತೆಯ ವಾಹನ ನಿಲುಗಡೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಹಲವು ಬಾರಿ ಮಾಡಿದ್ದ ಪ್ರಯತ್ನವೂ ವಿಫಲವಾಗಿತ್ತು. ಇದೀಗ ಸಂಚಾರ ಪೊಲೀಸರು ಹಾಗೂ ಅಂಗಡಿ ಮಳಿಗೆದಾರರು ಪಾರ್ಕಿಂಗ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಮತ್ತೊಮ್ಮೆ ಪ್ರಯತ್ನ ಮಾಡಿದ್ದಾರೆ.

ದೇವರಾಜ ಅರಸು ರಸ್ತೆಯಲ್ಲಿ ಒಂದು ಕಡೆ ದ್ವಿಚಕ್ರ ವಾಹನಗಳು ಹಾಗೂ ಮತ್ತೊಂದು ಬದಿ ಕಾರುಗಳಿಗೆ ನಿಲುಗಡೆ ವ್ಯವಸ್ಥೆ ಇದೆ. ಆದರೆ, ಅಂಗಡಿ ಮಳಿಗೆ ಬಾಡಿಗೆದಾರರೇ ಬೆಳಗ್ಗೆಯಿಂದ ರಾತ್ರಿವರೆಗೆ ತಮ್ಮ ಕಾರುಗಳನ್ನು ನಿಲ್ಲಿಸುತ್ತಿರುವುದರಿಂದ ಗ್ರಾಹಕರ ವಾಹನ ನಿಲುಗಡೆಗೆ ಸ್ಥಳ ಸಿಗುತ್ತಿಲ್ಲವೆಂಬ ದೂರುಗಳು ಕೇಳಿಬರುತ್ತಿವೆ. ನಿಂತಿರುವ ಕಾರುಗಳ ಹಿಂದೆ ಗ್ರಾಹಕರು ತಮ್ಮ ವಾಹನಗಳನ್ನು ನಿಲ್ಲಿಸಿಕೊಂಡು ಕಾಯುತ್ತಿರುವುದರಿಂದ ಸಂಚಾರಕ್ಕೆ ಅಡ್ಡಿಯಾಗುತ್ತಿದೆ ಎಂಬುದು ದೇವರಾಜ ಸಂಚಾರ ಠಾಣೆ ಪೊಲೀಸರಿಗೆ ತಲೆನೋವಾಗಿ ಪರಿಣಮಿಸಿದೆ.

ಈ ಹಿಂದೆ ಈ ರಸ್ತೆಯಲ್ಲಿ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಜಾರಿ ಮಾಡಲು ಮುಂದಾಗಿ, ಪಾಲಿಕೆಯಿಂದ ಟೆಂಡರ್ ಕರೆಯಲಾಗಿತ್ತಾದರೂ, ಯೋಜನೆ ಜಾರಿಗೆ ಯಾರೂ ಸಹಕರಿಸದ ಕಾರಣ ಅದು ನೆನೆಗುದಿಗೆ ಬಿದ್ದಿತ್ತು. ಅಲ್ಲದೆ, ಹಿಂದಿನ ಸಂಚಾರ ಎಸಿಪಿ ಸಂದೇಶ್‌ಕುಮಾರ್ ಅಂಗಡಿ ಮಳಿಗೆದಾರರ ಮನವೊಲಿಸಿ ವಾಹನ ನಿಲುಗಡೆ ಸಮಸ್ಯೆಗೆ ಮುಕ್ತಿ ಹಾಡಲು ಮುಂದಾಗಿದ್ದರಾದರೂ, ಅಂತಿಮ ಹಂತದಲ್ಲಿ ಕಾರಣಾಂತರಗಳಿಂದ ಅದೂ ಸಾಧ್ಯವಾಗಲಿಲ್ಲ.

ಮಳಿಗೆ ಬಾಡಿಗೆದಾರರ ಕಾರುಗಳಿಗೆ ದೇವರಾಜ ಮೊಹಲ್ಲಾದಲ್ಲೇ ಇರುವ ಪಾಲಿಕೆ ಖಾಲಿ ಜಾಗದಲ್ಲಿ ನಿಲುಗಡೆಗೆ ಅವಕಾಶ ಕಲ್ಪಿಸುವುದು ಹಾಗೂ ಪುರಭವನದ ಆವರಣದಲ್ಲಿರುವ ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್‌ನಲ್ಲಿ ಸೂಕ್ತ ಅವಕಾಶ ಕಲ್ಪಿಸುವ ಮೂಲಕ ದೇವರಾಜ ಅರಸು ರಸ್ತೆಯಲ್ಲಿ ಗ್ರಾಹಕರ ಕಾರುಗಳ ನಿಲುಗಡೆಗೆ ಅವಕಾಶ ಕಲ್ಪಿಸಲು ಸಂಚಾರ ಪೊಲೀಸರು ಶತಪ್ರಯತ್ನ ಮಾಡುತ್ತಿದ್ದಾರೆ. ತಮಗೆ ಪ್ರತ್ಯೇಕ ಸ್ಥಳದಲ್ಲಿ ಕಾರು ನಿಲ್ಲಿಸಲು ಅವಕಾಶ ನೀಡ ಬೇಕೆಂದು ಮಳಿಗೆದಾರರು ಒತ್ತಾಯಿಸುತ್ತಿದ್ದಾರೆ. ಅದು ಸಾಕಾರ ಗೊಂಡರೆ ಮಾತ್ರ ಅರಸು ರಸ್ತೆಯ ಹಲವು ವರ್ಷಗಳ ವಾಹನ ಪಾರ್ಕಿಂಗ್ ಸಮಸ್ಯೆಗೆ ಪರಿಹಾರ ಸಿಗಬಹುದು. ಇದೀಗ ಮಳಿಗೆದಾರರ ಸಂಘದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಗರ ಪಾಲಿಕೆ ಅಧಿಕಾರಿಗಳ ಸಹಕಾರದೊಂದಿಗೆ ಅರಸು ರಸ್ತೆಯಲ್ಲಿ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆ ಜಾರಿ ಗೊಳಿಸಲು ಯತ್ನಿಸುತ್ತಿರುವ ಪೊಲೀಸರಿಗೆ ಸ್ಥಳೀಯ ಜನ ಪ್ರತಿನಿಧಿಗಳೂ ಸಾಥ್ ನೀಡುವುದು ಅನಿವಾರ್ಯವಾಗಿದೆ ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ.

> **ವರ್ಗಾವಣೆಗೆ ಒತ್ತಾಯಿಸಿ ಶಿಕ್ಷಕರ ಪ್ರತಿಭಟನೆ**
>
> ಬೆಂಗಳೂರು: ಹದಿನೈದು ವರ್ಷಕ್ಕಿಂತ ಹೆಚ್ಚು ಕಾಲ ಒಂದೇ ಕಡೆ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ಸ್ವಂತ ಜಿಲ್ಲೆ ಅಥವಾ ಪಕ್ಕದ ಜಿಲ್ಲೆಗಳಿಗೆ ವರ್ಗಾವಣೆ ನೀಡಬೇಕು ಎಂದು ಒತ್ತಾಯಿಸಿ ವರ್ಗಾವಣೆ ವಂಚಿತ ಶಿಕ್ಷಕರು ನಗರದಲ್ಲಿ ಪ್ರತಿಭಟನೆ ನಡೆಸಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಕಚೇರಿ ಎದುರು ಸೇರಿದ್ದ ಶಿಕ್ಷಕರು, ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು. ವರ್ಗಾವಣೆ ಕೊಡಿ, ಇಲ್ಲವೇ ವಿಷ ಕೊಡಿ, ಸೇವಾ ಅವಧಿಯಲ್ಲಿ ಒಮ್ಮೆಯಾದರೂ ಸ್ವಂತ ಜಿಲ್ಲೆಗೆ ವರ್ಗಾವಣೆ ಕೊಡಿ ಎಂಬ ಬರಹವುಳ್ಳ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ವರ್ಗಾವಣೆ ವಂಚಿತ ಶಿಕ್ಷಕರ ಸಂಘ, ಪ್ರೌಢಶಾಲಾ (ಗ್ರಾಮೀಣ) ಶಿಕ್ಷಕರ ಸಂಘದ ಪದಾಧಿಕಾರಿಗಳೂ ಪ್ರತಿಭಟನೆಯಲ್ಲಿದ್ದರು. ಶಾಸಕ ಸತೀಶ ಜಾರಕಿಹೊಳಿ ಭೇಟಿ ನೀಡಿ ಬೆಂಬಲ ಸೂಚಿಸಿದರು.

ನೆಲಸಮ ವಿರೋಧಿಸಿ ಇಂದು ಅರ್ಧ ದಿನ ದೇವರಾಜ ಮಾರುಕಟ್ಟೆ ಬಂದ್

ಮೈಸೂರು, ಏ.19(ಆರ್‌ಕೆ)–ದೇವರಾಜ ಮಾರುಕಟ್ಟೆ ಕಟ್ಟಡವನ್ನು ನೆಲಸಮಗೊಳಿಸಬಾರದೆಂದು ಆಗ್ರಹಿಸಿ ನಾಳೆ (ಏ.20) ಅರ್ಧ ದಿನ ಮಳಿಗೆಗಳನ್ನು ಬಂದ್ ಮಾಡಿ ಪ್ರತಿಭಟನಾ ಮೆರವಣಿಗೆ ನಡೆಸಲು ಬಾಡಿಗೆದಾರರು ನಿರ್ಧರಿಸಿದ್ದಾರೆ. ಬುಧವಾರ ಬೆಳಗ್ಗೆ 9.30 ಗಂಟೆಗೆ ದೇವರಾಜ ಮಾರುಕಟ್ಟೆಯ ಚಿಕ್ಕಗಡಿಯಾರ ಬಳಿಯಿಂದ ಮೆರವಣಿಗೆ ಹೊರಟು, ಡಿಸಿ ಕಚೇರಿಗೆ ತೆರಳಿ ಮನವಿ ಪತ್ರ ಸಲ್ಲಿಸಲಾಗುವುದು ಎಂದು ದೇವರಾಜ ಮಾರುಕಟ್ಟೆ ಮಳಿಗೆ ಬಾಡಿಗೆದಾರರ ಸಂಘದ ಅಧ್ಯಕ್ಷ ಮಹದೇವು ತಿಳಿಸಿದ್ದಾರೆ.



ಮಧ್ಯಾಹ್ನದವರೆಗೆ ಮಾರುಕಟ್ಟೆಯ ಎಲ್ಲಾ ಅಂಗಡಿ ಮಳಿಗೆ, ತರಕಾರಿ, ಹಣ್ಣು, ಹೂ ಅಂಗಡಿಗಳನ್ನು ಬಂದ್ ಮಾಡಿ ಪ್ರತಿಭಟನಾ ಮೆರವಣಿಗೆ ನಡೆಸಿ ನಂತರ ಮಧ್ಯಾಹ್ನ ಮರಳಿ ಬಂದು ಅಂಗಡಿ ತೆರೆದು ವ್ಯಾಪಾರ–ವಹಿವಾಟು ನಡೆಸಲಾಗುವುದು ಎಂದರು.

ಶಿಥಿಲವಾಗಿದ್ದರೂ ಸದೃಢವಾಗಿರುವ ದೇವರಾಜ ಮಾರುಕಟ್ಟೆ ಕಟ್ಟಡವನ್ನು ರಿಪೇರಿ ಮಾಡಿ ಸಂರಕ್ಷಿಸಬಹುದಾಗಿದ್ದರೂ, ಈ ಪಾರಂಪರಿಕ ಕಟ್ಟಡವನ್ನು ನೆಲಸಮಗೊಳಿಸಿ ಹೊಸದಾಗಿ ನಿರ್ಮಿಸಲು ಜಿಲ್ಲಾ ಪಾರಂಪರಿಕ ಸಮಿತಿ ನಿರ್ಧರಿಸಿರುವುದು ಸರಿಯಲ್ಲ. ಈ ಬಗ್ಗೆ ಸಮಿತಿ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಡುತ್ತೇವೆ ಎಂದು ಮಹದೇವು ತಿಳಿಸಿದರು.

ಯಥಾಸ್ಥಿತಿ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ಗಳನ್ನು ನವೀಕರಿಸಿ ಸಂರಕ್ಷಿಸಿಕೊಳ್ಳಬಹುದು. ಸರ್ಕಾರ ತಮಗೆ ಜವಾಬ್ದಾರಿ ವಹಿಸಿದರೆ ತಾವೇ ರಿಪೇರಿ ಮಾಡಿಸಿ ಪಾರಂಪರಿಕ ಕಟ್ಟಡಗಳನ್ನು ಉಳಿಸುತ್ತೇವೆ ಎಂದು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅಭಿಪ್ರಾಯಿಸಿದ್ದಾರಲ್ಲದೆ, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರೂ ಕಟ್ಟಡಗಳನ್ನು ಕೆಡವದೇ ಸಂರಕ್ಷಿಸಬೇಕೆಂದು ಸಲಹೆ ನೀಡಿದ್ದರೂ, ಜಿಲ್ಲಾ ಪಾರಂಪರಿಕ ಸಮಿತಿ ನಿರ್ಧಾರ ಸರಿಯಲ್ಲ ಎಂದು ಮಹದೇವು ತಿಳಿಸಿದರು.

ಸ್ನಾತಕ, ಸ್ನಾತಕೋತ್ತರ ಪದವಿಗಳ ಪ್ರವೇಶಕ್ಕೆ ಅರ್ಜಿ ಅಹ್ವಾನ

ಮೈಸೂರು,ಏ.19–ಮೈಸೂರು ವಿಶ್ವವಿದ್ಯಾ ನಿಲಯದ ದೂರಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಗಳಿಗೆ ಜನವರಿ 2019, ಜುಲೈ 2019 ಹಾಗೂ ಜನವರಿ 2020ರ ಆವೃತ್ತಿಗಳಲ್ಲಿ ಪ್ರವೇಶಾತಿ ಹೊಂದಿದ್ದು ವಿವಿಧ ವೈಯಕ್ತಿಕ ಕಾರಣಗಳಿಂದಾಗಿ ಶೈಕ್ಷಣಿಕ ಚಟುವಟಿಕೆಗಳಿಂದ ತಟಸ್ಥವಾಗಿ ಉಳಿದಿರುವ ವಿದ್ಯಾರ್ಥಿಗಳು with in Double the duration of the course ನಿಯಮದಡಿಯಲ್ಲಿ ಪ್ರವೇಶಾತಿ ಪಡೆದುಕೊಳ್ಳಬಹುದು. ಪ್ರವೇಶಾತಿಯು ಏ.30 ಕೊನೆಯ ದಿನ. ದಂಡ ಶುಲ್ಕದೊಂದಿಗೆ ಪಾವತಿಸಲು ಮೇ 05 ಕೊನೆಯ ದಿನಾಂಕ.





ಮೈಸೂರಿನ ದಟ್ಟಗಳ್ಳಿಯಲ್ಲಿರುವ ನೈಪುಣ್ಯ ಶಾಲೆಯಲ್ಲಿ ಬೇಸಿಗೆ ಬಂಡಿ ಮಕ್ಕಳ ಶಿಬಿರದಲ್ಲಿ ದೇಸೀ ಆಟಗಳ ಬಗ್ಗೆ ತರಬೇತಿ ನೀಡಲಾಯಿತು.

ಸುತ್ತೂರು ಮಠ, ಮಹಾ ವಿದ್ಯಾಪೀಠದಿಂದ ನಾಲ್ಕು ಶಿಬಿರಗಳು

ಮೈಸೂರು,ಏ.19–ಸುತ್ತೂರು ಶ್ರೀ ಮಠದ ವತಿಯಿಂದ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಸಂಯುಕ್ತಾಶ್ರಯದಲ್ಲಿ ಮೇ 5ರಿಂದ 29ರವರೆಗೆ ನಾಲ್ಕು ಶಿಬಿರಗಳನ್ನು ಏರ್ಪಡಿಸಲಾಗಿದೆ. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ಹಾಗೂ ವಿಜಯಪುರ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶಿಬಿರಗಳು ನಡೆಯಲಿವೆ.

ಸುತ್ತೂರು ಶ್ರೀಕ್ಷೇತ್ರ, ಬಿಳಿಗಿರಿರಂಗನ ಬೆಟ್ಟ ಹಾಗೂ ಊಟಿಯಲ್ಲಿ ಸಾರ್ವಜನಿಕರಿಗೆ ಜೀವನೋತ್ಸಾಹ ಶಿಬಿರಗಳನ್ನು ಮತ್ತು ಆಧ್ಯಾತ್ಮಿಕ ಜಿಜ್ಞಾಸುಗಳಿಗಾಗಿ ಅಧ್ಯಯನ ಶಿಬಿರವನ್ನು ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಲಾಗಿದೆ. ಶಿಬಿರಗಳಲ್ಲಿ ಪ್ರತಿ ನಿತ್ಯ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸ, ಧಾರ್ಮಿಕ ಚಿಂತನ–ಮಂಥನ, ದೇಸೀ ಆಟಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದಲ್ಲಿ ನೇರವಾಗಿ, 0821–2548212 Extn. 223/224 ದೂರವಾಣಿಯಲ್ಲಿ ಅಥವಾ ಆಲಮಟ್ಟಿ ಶ್ರೀಗಳು (93411 31811), ಬಿ.ರಾಜೇಶ್ (9964141560), ಶ್ರೀ ಶ್ರೀಶೈಲ ಪಟ್ಟಣಶೆಟ್ಟಿ (9448649522), ಶ್ರೀ ಎಂ. ಶಿವಕುಮಾರಸ್ವಾಮಿ (98 44471330), ಹೆಚ್.ಎಸ್.ಸಿದ್ಧಮಲ್ಲಿಕಾರ್ಜುನಸ್ವಾಮಿ (9742122188) ಮತ್ತು ಜಿ.ರಮೇಶ್ (9945552052) ಇವರುಗಳನ್ನು ಸಂಪರ್ಕಿಸಿ ವಿವರ ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ. www.jssonline.orgಯಿಂದ ವಿವರ ಪಡೆಯ ಬಹುದು. ಇ–ಮೇಲ್ (jsspublikcations@gmail.com)ಮೂಲಕವೂ ನೋಂದಾಯಿಸಿಕೊಳ್ಳಬಹುದಾಗಿದೆ.

ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ವಿಚಾರ
ಮೇ 4ಕ್ಕೆ ಮೈಸೂರಲ್ಲಿ ಐಕ್ಯತಾ ಸಮಾವೇಶ

● ಸಮಾವೇಶಕ್ಕೆ ವಿಪಕ್ಷ ನಾಯಕ ಸಿದ್ದರಾಮಯ್ಯ ಅಧ್ಯಕ್ಷತೆ ● ಜಲದರ್ಶಿನಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಸಮಾವೇಶದ ರೂಪುರೇಷೆ ಚರ್ಚೆ



ಮೈಸೂರು,ಏ.19(ಪಿಎಂ)–ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿ ಉಳಿಸಿಕೊಳ್ಳುವ ಸಂಬಂಧ ಮಾಜಿ ಮುಖ್ಯಮಂತ್ರಿಗಳೂ ಆದ ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಮೇ 4ರಂದು ಮೈಸೂರಲ್ಲಿ ಹಿಂದುಳಿದ, ಶೋಷಿತ ಸಮುದಾಯಗಳ ಐಕ್ಯತಾ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಹಿಂದುಳಿದ ಸಂಘಟನೆಗಳ ಒಕ್ಕೂಟದ ಜಂಟಿ ಆಶ್ರಯದಲ್ಲಿ ಮೈಸೂರಿನ ಜೆಕೆ ಮೈದಾನದಲ್ಲಿ ಐಕ್ಯತಾ ಸಮಾವೇಶ ನಡೆಯಲಿದೆ. ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸಮಾವೇಶದ ಸಂಬಂಧ ಮಂಗಳವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಸಮಾವೇಶದ ರೂಪುರೇಷೆ ಕುರಿತಂತೆ ಚರ್ಚಿಸಲಾಯಿತು. ಹಿಂದುಳಿದ ಸಮುದಾಯಗಳ ಮುಖಂಡರು ಭಾಗವಹಿಸಿ ತಮ್ಮ ಅಭಿಪ್ರಾಯ ಹಂಚಿಕೊಂಡರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿ ಸಂಬಂಧ ಮೂರು ಹಂತದಲ್ಲಿ ಪರಿಶೀಲಿಸಲು ಸುಪ್ರೀಂ ಕೋರ್ಟ್ ಇತ್ತೀಚೆಗೆ ಆದೇಶ ನೀಡಿದೆ. ಇದು ಸಾಧ್ಯವಾಗದೇ ಇದ್ದಲ್ಲಿ ಸದ್ಯಕ್ಕೆ ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳನ್ನು 'ಸಾಮಾನ್ಯ' ಎಂದು ಪರಿಗಣಿಸಿ ಚುನಾವಣೆ ನಡೆಸುವಂತೆ ಕೋರ್ಟ್ ಹೇಳಿದೆ. ಈ ರೀತಿಯಾದಲ್ಲಿ ಹಿಂದುಳಿದ ವರ್ಗಗಳು ಮೀಸಲಾತಿ ಕಳೆದುಕೊಳ್ಳಲಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಸಭೆಯಲ್ಲಿ ಮಾತನಾಡಿದ ಮಾಜಿ ಮೇಯರ್ ಅನಂತು, ಮೀಸಲಾತಿಗೆ ಕುತ್ತು ಬಂದಿದ್ದರೂ ಹಿಂದುಳಿದ ವರ್ಗದ ಜನತೆ ಮೌನಕ್ಕೆ ಶರಣಾಗಿರುವುದು ಆತಂಕಕಾರಿ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರನ್ನು ಮೂಲೆಗುಂಪು ಮಾಡಲು ಪ್ರಯತ್ನಿಸುತ್ತಿವೆ. ಆದರೂ ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿರುವುದು ನೋಡಿದರೆ, ಹಿಂದುಳಿದ ಜನತೆಯಲ್ಲಿ ಜಾಗೃತಿ ಇಲ್ಲವಾಗುತ್ತಿದೆ ಎನ್ನಿಸುತ್ತದೆ. ಬಿಜೆಪಿಯನ್ನು ಅಧಿಕಾರದಿಂದ ದೂರ ಇಡದಿದ್ದರೆ, ಹಿಂದುಳಿದವರ ಶ್ರೇಯೋಭಿವೃದ್ಧಿ ಸಾಧ್ಯವಿಲ್ಲ ಎಂದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಹಿಂದುಳಿದ ವರ್ಗಕ್ಕೆ ಮೀಸಲಾತಿ ಕೈತಪ್ಪಿದರೆ ನಮ್ಮ ಮುಂದಿನ ಪೀಳಿಗೆ ನಮ್ಮನ್ನು ಶಪಿಸಲಿದೆ. ಅನೇಕ ಸಮುದಾಯಗಳು ಹೊಸದಾಗಿ ಮೀಸಲಾತಿ ಪಡೆಯಲು ಹೋರಾಟ ಮಾಡುತ್ತಿವೆ. ಆದರೆ ಇರುವ ಮೀಸಲಾತಿ ಸೌಲಭ್ಯ ಉಳಿಸಿಕೊಳ್ಳಲು ಪರಿಣಾಮಕಾರಿ ಪಯತ್ನ ನಮ್ಮ ಸಮುದಾಯಗಳಿಂದ ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ನಾಗೇಶ್, ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷ ಯೋಗೇಶ್, ರಾಜ್ಯ ನಾಯಕರ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ ಸೇರಿದಂತೆ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ಸರ್ಕಾರಗಳ ವೈಫಲ್ಯ ಎತ್ತಿ ಹಿಡಿಯುವಲ್ಲಿ ಮಾಧ್ಯಮಗಳ ಪಾತ್ರ ಅಪಾರ

● ಶಾಸಕ ಬಿ.ಹರ್ಷವರ್ಧನ್ ● ಪತ್ರಕರ್ತರಾದ ಹುಲ್ಲಹಳ್ಳಿ ಚೆನ್ನಸ್ವಾಮಿ, ಸಿ.ಎಂ.ಬಸವರಾಜು ಅವರಿಗೆ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ



ನಂಜನಗೂಡು, ಏ.19– ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಹಾಗೂ ಸರ್ಕಾರಗಳ ವೈಫಲ್ಯ ಎತ್ತಿ ಹಿಡಿಯುವ ಮೂಲಕ ಸರಿದಾರಿಗೆ ತರುವಲ್ಲಿ ಮಾಧ್ಯಮಗಳ ಪಾತ್ರ ಅಪಾರ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ನಂಜನಗೂಡು ತಾಲೂಕು ಪತ್ರಕರ್ತರ ಸಂಘದಿಂದ ಮಂಗಳವಾರ ಆಯೋಜಿಸಿದ್ದ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ತಂತ್ರಜ್ಞಾನ ಹೆಚ್ಚಾದಂತೆ ಎಲ್ಲರೂ ಸಾಮಾಜಿಕ ಜಾಲತಾಣದಲ್ಲಿ ಮುಳುಗಿ ಹೋಗಿದ್ದಾರೆ. ಸಾಕಷ್ಟು ಸುಳ್ಳು ಸಂದೇಶ ಹರಿದಾಡುತ್ತಿದ್ದು, ಸಾಮಾನ್ಯ ಜನ ಅದನ್ನೇ ಸತ್ಯವೆಂದು ನಂಬುವ ಸ್ಥಿತಿ ನಿರ್ಮಾಣವಾಗಿದೆ. ಆದರೆ ಪತ್ರಿಕೆಗಳ ಮೇಲೆ ಜನರು ಇಂದಿಗೂ ವಿಶ್ವಾಸ ಉಳಿಸಿಕೊಂಡಿದ್ದು, ನೈಜ ಸಂಗತಿಗಳನ್ನು ತಿಳಿಯಲು ಪತ್ರಿಕೆಗಳು ಸಹಕಾರಿಯಾಗಿವೆ. ಹೀಗಾಗಿ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಪತ್ರಿಕೆಗಳ ಮೇಲೆ ಜವಾಬ್ದಾರಿ ಹೆಚ್ಚಿದೆ ಎಂದರು.

ಕೇಂದ್ರ ಸರ್ಕಾರ ಜಾರಿಗೆ ತರಲು ಮುಂದಾಗಿದ್ದ ನೂತನ ಕೃಷಿ ಕಾಯ್ದೆ ವಿರುದ್ಧ ರೈತರು ದಂಗೆ ಎದ್ದು ವರ್ಷಗಳ ಕಾಲ ಹೋರಾಟ ನಡೆಸಿದಾಗ ಮಾಧ್ಯಮಗಳು ಸಮರ್ಥವಾಗಿ ಕಾರ್ಯ ನಿರ್ವಹಿಸಿದ ಪರಿಣಾಮ ಕೇಂದ್ರ ಸರ್ಕಾರ ಕಾಯ್ದೆ ಹಿಂಪಡೆಯಲು ಮುಂದಾಯಿತು. ಸಾಧಕ ಬಾಧಕಗಳ ವಿಮರ್ಶೆಯನ್ನು ಮಾಧ್ಯಮಗಳು ಸಮರ್ಥವಾಗಿ ಮಾಡಿದಾಗ ಸಮಾಜವನ್ನು ಸರಿದಾರಿಗೆ ತೆಗೆದುಕೊಂಡು ಹೋಗಬಹುದಾಗಿದೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಲೆಕ್ಕ ಮತ್ತು ಲೆಕ್ಕ ಪರಿಶೋಧನೆ ವಿಭಾಗದ ನಿರ್ದೇಶಕ ಕೆ.ಆರ್.ಸಂತಾನಂ ಮಾತನಾಡಿ, ಸ್ವಾತಂತ್ರ್ಯ ಪೂರ್ವದಿಂದಲೂ ಪತ್ರಿಕೆಗಳು ರಾಷ್ಟ್ರದ ಏಕೀಕರಣದಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಂಡಿವೆ. ಹಲವು ಬಾರಿ ಸರ್ಕಾರಗಳ ನಿರ್ಧಾರವನ್ನೇ ಮರಳಿ ಅವಲೋಕನ ಮಾಡುವ ನಿಟ್ಟಿನಲ್ಲಿ ತಮ್ಮ ಪಾತ್ರ ನಿರ್ವಹಿಸಿವೆ. ಈ ಕ್ಷೇತ್ರದಲ್ಲಿ ಅಹರ್ನಿಶಿ ಸೇವೆ ಸಲ್ಲಿಸುತ್ತಿರುವ ಪತ್ರಕರ್ತರನ್ನು ಗುರುತಿಸಿ ಕಳೆದ 12 ವರ್ಷಗಳಿಂದ ಸುತ್ತೂರು ಮಠದ ವತಿಯಿಂದ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ನೀಡುತ್ತಾ ಬರಲಾಗಿದೆ ಎಂದರು.

ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಯ 2020ನೇ ಸಾಲಿಗೆ ಹುಲ್ಲಹಳ್ಳಿ ವರದಿಗಾರ ಹುಲ್ಲಹಳ್ಳಿ ಚೆನ್ನಸ್ವಾಮಿ ಹಾಗೂ 2021ನೇ ಸಾಲಿಗೆ ವರದಿಗಾರ ಸಿ.ಎಂ.ಬಸವರಾಜು ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಲೆಕ್ಕ ಕೊಟ್ಟೇ ಎದುರಿಸುತ್ತೇನೆ...

ನನಗೆ ಅಭಿವೃದ್ಧಿ ವಿಚಾರದಲ್ಲಿ ರಾಜಕಾರಣ ಮಾಡಲು ಬರಲ್ಲ. ನಾನು ರಾಜಕಾರಣಿಯೂ ಅಲ್ಲ. ನನಗೆ ಹಳ್ಳಿಗಳಲ್ಲಿ ಶಾಲೆಗಳ ಉನ್ನತೀಕರಣ, ನೈರ್ಮಲ್ಯ, ರಸ್ತೆ ಅಭಿವೃದ್ಧಿ ಮಾಡಿ ಜನರಿಗೆ ಧ್ವನಿಯಾಗಬೇಕೆಂದು ಶಾಸಕನಾದವನು. ನನಗೆ ರಾಜಕೀಯ ಮಾಡೋದು ಇಷ್ಟವಿಲ್ಲ. ನನ್ನ ಅಧಿಕಾರಾವಧಿಯಲ್ಲಿ ಕ್ಷೇತ್ರಕ್ಕೆ ತಂದ 600 ಕೋಟಿ ಯೋಜನೆಗಳ ವಿವರಗಳ ಲೆಕ್ಕ ಕೊಟ್ಟೇ ಮುಂದಿನ ಚುನಾವಣೆಗೆ ಹೋಗುತ್ತೇನೆ ಎಂದು ಪ್ರತಿಪಕ್ಷಗಳಿಗೆ ಶಾಸಕ ಹರ್ಷವರ್ಧನ್ ಟಾಂಗ್ ಕೊಟ್ಟರು.

ಅಲ್ಲದೇ ಸ್ಮರಣಿಕೆ ಹಾಗೂ 10 ಸಾವಿರ ರೂ. ಚೆಕ್ ನೀಡಿ ಗೌರವಿಸಲಾಯಿತು. ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪಗೌಡ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದ ಅಧ್ಯಕ್ಷ ಕೆ.ದೀಪಕ್, ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಪಿ.ಮಹದೇವಪ್ರಸಾದ್, ಪ್ರಧಾನ ಕಾರ್ಯದರ್ಶಿ ಎಂ.ಪ್ರಕಾಶ್, ರಾಜ್ಯ ಸಮಿತಿ ಸದಸ್ಯ ಸಿ.ರಾಘವೇಂದ್ರ, ಜಿಲ್ಲಾ ಕಾರ್ಯ ಕಾರಿಣಿ ಸದಸ್ಯ ಶ್ರೀನಿವಾಸ್, ಮಧು ಉಪಸ್ಥಿತರಿದ್ದರು.

ನರಸೀಪುರದಲ್ಲಿ ಯಾರಿಗೆ ಟಿಕೆಟ್ ನೀಡಿದರೂ ಕಾಂಗ್ರೆಸ್ ಗೆಲ್ಲಿಸಿ

ತಾಲೂಕಿನ ಕುರುಬ ಸಮಾಜದ ಮುಖಂಡರೊಂದಿಗೆ ಮಾಜಿ ಸಿಎಂ ಸಿದ್ದರಾಮಯ್ಯ ಚರ್ಚೆ



ತಿ.ನರಸೀಪುರ, ಏ.19(ಎಸ್‌ಕೆ)– ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ನೀಡಿದರೂ, ಎಲ್ಲರೂ ಒಗ್ಗಟ್ಟಿನಿಂದ ದುಡಿದು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

ಸೋಮವಾರ ಮೈಸೂರಿನ ತಮ್ಮ ನಿವಾಸದಲ್ಲಿ ತಿ.ನರಸೀಪುರ ತಾಲೂಕಿನ ಕುರುಬ ಸಮಾಜದ ಮುಖಂಡರುಗಳನ್ನು ಕರೆಸಿಕೊಂಡು ಸಭೆ ನಡೆಸಿ ಬೇರೆ ಯಾವುದೇ ಪಕ್ಷದವರ ಆಮಿಷಗಳಿಗೆ ಬಲಿಯಾಗಬೇಡಿ ಎಂದು ಮನವಿ ಮಾಡಿದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮಾಜಿ ಸಚಿವರಾದ ಹೆಚ್.ಸಿ.ಮಹದೇವಪ್ಪ ಅಥವಾ ಅವರ ಪುತ್ರ ಸುನೀಲ್ ಬೋಸ್‌ಗೆ ಟಿಕೆಟ್ ನೀಡಬಹುದು. ಈ ಬಗ್ಗೆ ಹೈಕಮಾಂಡ್ ತೀರ್ಮಾನ ಕೈಗೊಳ್ಳಲಿದೆ. ಇವರಿಬ್ಬರನ್ನು ಬಿಟ್ಟು ಬೇರೆ ಯಾರಿಗೆ ಟಿಕೆಟ್ ನೀಡಿದರೂ ಪಕ್ಷದ ಗೆಲುವಿಗೆ ಎಲ್ಲರೂ ಶ್ರಮಿಸಬೇಕು ಎಂದು ಅವರು ಹೇಳಿದರು.

ಕಳೆದ ಚುನಾವಣೆಯಲ್ಲಿ ಒಗ್ಗಟ್ಟಿನ ಕೊರತೆಯಿಂದ ಕಾಂಗ್ರೆಸ್ ಸೋಲು ಅನುಭವಿಸಬೇಕಾಯಿತು. ಆದ್ದರಿಂದ ಚುನಾವಣೆಗೆ ಇನ್ನೂ ಒಂದು ವರ್ಷ ಇರುವಂತೆ ನಿಮ್ಮನ್ನು ಇಲ್ಲಿಗೆ ಕರೆಸಿಕೊಂಡು ಚರ್ಚೆ ನಡೆಸುತ್ತಿದ್ದೇನೆ. ಎಲ್ಲರೂ ಕಾಂಗ್ರೆಸ್ ಗೆಲ್ಲಿಸುವ ಮೂಲಕ ನಮ್ಮ ಕೈ ಬಲಪಡಿಸಬೇಕು ಎಂದು ತಿಳಿಸಿದರು ಎನ್ನಲಾಗಿದೆ.

ತಾಲೂಕಿನ ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಮತ್ತು ದೀನ ದಲಿತರು ಎಲ್ಲರೂ ಒಂದಾಗಿ ಪಕ್ಷದ ಪರವಾಗಿ ಕೆಲಸ ಮಾಡಬೇಕು. ಯಾವುದೇ ಕಾರಣಕ್ಕೂ ಕಚ್ಚಾಡಬಾರದು. ಎಲ್ಲರೂ ಭಿನ್ನಾಭಿಪ್ರಾಯ ಮರೆತು ದುಡಿಯಿರಿ. ಪಕ್ಷ ನಿಮ್ಮ ಜೊತೆ ಸದಾ ಇರಲಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯುವುದು ಖಚಿತ. ಆದ್ದರಿಂದ ಈಗಿನಿಂದಲೇ ಸಜ್ಜಾಗಿ ಎಂದು ತಿಳಿಸಿದ ಅವರು ಈಗಿರುವ ಬಿಜೆಪಿ ಸರ್ಕಾರದಿಂದ ರಾಜ್ಯದ ಜನತೆಗೆ ಯಾವುದೇ ಉಪಯೋಗವಾಗುತ್ತಿಲ್ಲ. ಇದನ್ನು ಮತದಾರರಿಗೆ ತಿಳಿಸಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದರು.

ಶಾಸಕ ಯತೀಂದ್ರ ಸಿದ್ದರಾಮಯ್ಯ, ಯುವ ಮುಖಂಡ ಸುನೀಲ್ ಬೋಸ್ ಅವರು ಸಿದ್ದರಾಮಯ್ಯನವರ ಜೊತೆ ಉಪಸ್ಥಿತರಿದ್ದರು. ತಾಲೂಕಿನ ಕುರುಬ ಸಮಾಜದ ನೂರಾರು ಮುಖಂಡರು ಭಾಗವಹಿಸಿದ್ದರು.



ಹೆಚ್.ಡಿ.ಕೋಟೆಯ ದಾಸ ಬಣಜಿಗ ಸಮಾಜದಿಂದ ಶ್ರೀರಾಮನವಮಿ ಆಚರಿಸಲಾಯಿತು. ಈ ವೇಳೆ ಶ್ರೀರಾಮ, ಲಕ್ಷ್ಮಣ, ಸೀತೆ ಹಾಗೂ ಹನುಮಂತನ ಮೂರ್ತಿಗಳನ್ನು ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಸಮಾಜದ ಮುಖಂಡರಾದ ನಾಗರಾಜು, ಗೋವಿಂದರಾಜಶೆಟ್ಟಿ, ರಾಮಚಂದ್ರಶೆಟ್ಟಿ, ಕೆಂಡಗಣ್ಣ, ಶ್ರೀಕಾಂತ್, ವಿನಯ್, ಸುರೇಶ್, ರವಿಕುಮಾರ್, ಗುರು, ಮಂಜು, ವಿನಯ್, ಸ್ವಾಮಿ ಇದ್ದರು.



ಸರಗೂರು ಪಟ್ಟಣದ ಸಾರ್ವಜನಿಕ ಗ್ರಂಥಾಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಗ್ರಂಥಪಾಲಕ ಶಿವಣ್ಣ, ಶಾಖಾ ಗ್ರಂಥಾಲಯದ ವರ್ಷ ಭಾಸ್ಕರ್ ಹಾಗೂ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಿಎಂ ಉಪಸ್ಥಿತಿಯಲ್ಲಿ ಅದ್ದೂರಿ ಅಂಬೇಡ್ಕರ್ ಜಯಂತಿಗೆ ನಿರ್ಧಾರ

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ



ತಿ.ನರಸೀಪುರ, ಏ.19(ಎಸ್‌ಕೆ)– ತಾಲೂಕಿನ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಉಪಸ್ಥಿತಿಯಲ್ಲಿ ಪಟ್ಟಣದಲ್ಲಿ ಅದ್ದೂರಿಯಾಗಿ ಅಂಬೇಡ್ಕರ್ ಜಯಂತಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ನಡೆದ ದಸಂಸ ಪದಾಧಿಕಾರಿಗಳು ಹಾಗೂ ಮುಖಂಡರ ಸಭೆಯಲ್ಲಿ ಮತನಾಡಿದ ಅವರು, ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕರಾದ ಎಂ.ಅಶ್ವಿನ್ ಕುಮಾರ್, ಯತೀಂದ್ರ ಅವರೊಂದಿಗೆ ಚರ್ಚಿಸಿ ಅದ್ದೂರಿಯಾಗಿ 131ನೇ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಗುವುದು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ದಿನಾಂಕ ನಿಗದಿಗೊಳಿಸಲಾಗುವುದು. ತಾಲೂಕಿನ ಎಲ್ಲಾ ವರ್ಗದ ಜನತೆ ಸಹಕಾರದೊಂದಿಗೆ ಹಾಗೂ 5 ಸಾವಿರಕ್ಕೂ ಹೆಚ್ಚು ಜನರನ್ನು ಸೇರಿಸಿ ಅಂಬೇಡ್ಕರ್ ಜಯಂತಿ ಆಚರಿಸಲು ನಿರ್ಧರಿಸಲಾಗಿದೆ ಎಂದರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಸಿದ್ದರಾಜು, ಮಂಜುನಾಥ್, ಪ್ರಸನ್ನ, ಕೆ.ಎನ್.ಪ್ರಭುಸ್ವಾಮಿ, ಡಾ.ಚಂದ್ರಶೇಖರ್, ಡಿ.ಆರ್.ಮೂರ್ತಿ, ರಾಜು, ಗಂಗಾಧರ್, ರಾಜಶೇಖರ್, ನಂಜುಂಡಯ್ಯ, ಬಸವರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಮಹೇಶ್, ಶಿವಣ್ಣ, ಮಹದೇವಯ್ಯ, ಮರಿಸ್ವಾಮಿ ಮತ್ತಿತರರಿದ್ದರು.

ಉತ್ತಮ ಆರೋಗ್ಯಕ್ಕೆ ಜೀವನ, ಆಹಾರ ಶೈಲಿ ಬದಲಾವಣೆ ಅಗತ್ಯ

ತಾಲೂಕು ಮಟ್ಟದ ಆರೋಗ್ಯ ಮೇಳದಲ್ಲಿ ಸಂಸದ ಪ್ರತಾಪ್ ಸಿಂಹ ಅಭಿಪ್ರಾಯ



ಹುಣಸೂರು, ಏ.19(ಕೆಕೆ)– ಪ್ರಸ್ತುತ ಕೊರೊನಾ ಸೇರಿದಂತೆ ಸಾಂಕ್ರಾಮಿಕ ಕಾಯಿಲೆಗಳಿಂದ ದೂರವಿದ್ದು, ಉತ್ತಮ ಆರೋಗ್ಯ ಹೊಂದಲು ನಮ್ಮ ದೈನಂದಿನ ಜೀವನ ಮತ್ತು ಆಹಾರ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಸಂಸದ ಪ್ರತಾಪ್‌ಸಿಂಹ ಅಭಿಪ್ರಾಯಪಟ್ಟರು.

ನಗರದ ಡಿ.ದೇವರಾಜ ಅರಸು ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಮಂಗಳವಾರ 75ನೇ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಆಯೋಜಿಸಿದ್ದ ತಾಲೂಕು ಮಟ್ಟದ ಉಚಿತ ಆರೋಗ್ಯ ತಪಾಸಣೆಯ ಆರೋಗ್ಯ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ಕೋವಿಡ್ ಸೋಂಕು ದೇಶದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿದೆ. ಹಾಗಾಗಿ ಕೇಂದ್ರ ಸರ್ಕಾರ ಏ.18 ರಿಂದ 22ರವರೆಗೆ ಪ್ರತಿ ತಾಲೂಕು ಕೇಂದ್ರಗಳಲ್ಲಿ ಆರೋಗ್ಯ ಉಚಿತ ತಪಾಸಣೆ ಆಯೋಜಿಸಲು ನಿರ್ದೇಶಿಸಿ ಪ್ರತಿ ತಾಲೂಕಿಗೆ ತಲಾ 2 ಲಕ್ಷ ರೂ. ಅನುದಾನ ಒದಗಿಸಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಚ್.ಪಿ.ಮಂಜುನಾಥ್ ಮಾತನಾಡಿ, ಆರೋಗ್ಯ ಮೇಳ ಆಯುಷ್ಮಾನ್ ಭಾರತ್ ಕಾರ್ಡ್ ಅನ್ನು ಎಲ್ಲರಿಗೂ ವಿತರಿಸುವ ಉದ್ದೇಶವನ್ನು ಹೊಂದಿದೆ. ಪ್ರತಿಯೊಬ್ಬರೂ ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಕಾರ್ಡ್ ಅನ್ನು ಪಡೆಯುವ ಮೂಲಕ ಆರೋಗ್ಯ ಸಮಸ್ಯೆಗಳಿಗೆ ಆರ್ಥಿಕ ನೆರವನ್ನು ಪಡೆಯಬೇಕಿದೆ ಎಂದರು.

ನಗರದ ಬೈಪಾಸ್ ರಸ್ತೆಯಲ್ಲಿ ಅತ್ಯಾಧುನಿಕ ರೀತಿ ನಿರ್ಮಾಣವಾಗುತ್ತಿರುವ ಆಸ್ಪತ್ರೆಯ ಎಲ್ಲಾ ಕೆಲಸಗಳು ಮುಗಿದಿದ್ದು, ಸದ್ಯದಲ್ಲೇ ಸಾರ್ವಜನಿಕ ಸೇವೆಗೆ ಅರ್ಪಿಸಲಾಗುವುದು. ತದ ನಂತರ ಈ ಹಳೆ ಆಸ್ಪತ್ರೆಯನ್ನು 14 ಕೋಟಿ ವೆಚ್ಚದಲ್ಲಿ ನವೀಕರಿಸಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಾಗಿ ಮಾರ್ಪಡಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಕೊರೊನಾ ವಾರಿಯರ್ಸ್‌ಗಳನ್ನು ಸನ್ಮಾನಿಸಲಾಯಿತು. ಶಿಬಿರದಲ್ಲಿ 241 ಎಬಿಆರ್‌ಕೆ ಕಾರ್ಡ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನಗರಸಭಾಧ್ಯಕ್ಷೆ ಸಮೀನಾ ಪರ್ವೀನ್, ಉಪಾಧ್ಯಕ್ಷ ದೇವನಾಯ್ಕ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಚ್.ಪ್ರಸಾದ್, ತಾಲೂಕು ಆರೋಗ್ಯಾಧಿಕಾರಿ ಡಾ.ಕೀರ್ತಿಕುಮಾರ್, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಸರ್ವೇಶ್‌ರಾಜೇಅರಸ್, ತಾಪಂ ಇಓ ಗಿರೀಶ್, ತಹಸೀಲ್ದಾರ್ ಡಾ. ಅಶೋಕ್, ಬಿಇಓ ನಾಗರಾಜು, ನಗರಸಭಾ ಸದಸ್ಯರಾದ ಮಂಜು, ರಮೇಶ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಎನ್.ಎಸ್.ಪ್ರಭಾಕರ್, ನಾಗರಾಜು, ಮಂಜುನಾಥ್, ಹೆಚ್.ಎ.ಮಂಜು ಮೊದಲಿಯರ್, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ರಾಜೇಶ್ವರಿ, ಆರೋಗ್ಯ ಸಿಬ್ಬಂದಿ, ನಗರಸಭಾ ಸದಸ್ಯರು ಇದ್ದರು.

ಕೆ.ಆರ್.ನಗರ ತಾಲೂಕು ಮಟ್ಟದ ಆರೋಗ್ಯ ಮೇಳದಲ್ಲಿ ಅವ್ಯವಸ್ಥೆ

ಸೂಕ್ತ ವ್ಯವಸ್ಥೆ ಇಲ್ಲದೆ ಬಿರು ಬಿಸಿಲಿನಲ್ಲಿ ನರಳಿದ ವೃದ್ಧರು, ಮಹಿಳೆಯರು, ಮಕ್ಕಳು

■ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಆರೋಗ್ಯ ಸಚಿವ ಡಾ. ಸುಧಾಕರ್ ■ ಕೆಲ ವೈದ್ಯರಿಂದ ಸರ್ಕಾರಿ ಆಸ್ಪತ್ರೆಗಳಿಗೆ ಕೆಟ್ಟ ಹೆಸರು ■ ನಮ್ಮ ದೇಶದಲ್ಲಿ ಆರೋಗ್ಯ ಶಿಕ್ಷಣದ ಕೊರತೆ ■ ಆರೋಗ್ಯ ಶಿಬಿರದಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಿ



ಕೆ.ಆರ್.ನಗರ, ಏ.19(ಕೆಟಿಆರ್)– ಆರೋಗ್ಯ ತಪಾಸಣೆಗಾಗಿ ಬಿರು ಬಿಸಿಲಿನಲ್ಲಿ ಸೂಕ್ತ ಆಸನಗಳ ವ್ಯವಸ್ಥೆ ಇಲ್ಲದೇ ಪರದಾಡುತ್ತಾ ಸರತಿ ಸಾಲಿನಲ್ಲಿ ಗಂಟೆಗಟ್ಟಲೇ ಕಾದು ನಿಂತ ವೃದ್ಧರು, ಮಹಿಳೆಯರು, ಮಕ್ಕಳನ್ನು ಕಂಡು ಕೆಂಡಾಮಂಡಲರಾದ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಘಟನೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ನಡೆಯಿತು.

ಜಿಲ್ಲಾಡಳಿತ, ಜಿಪಂ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಏರ್ಪಡಿಸಿದ್ದ ತಾಲೂಕು ಮಟ್ಟದ ಆರೋಗ್ಯ ಮೇಳವನ್ನು ವೀಕ್ಷಿಸಲು ಆಗಮಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಸಚಿವ ಡಾ.ಕೆ.ಸುಧಾಕರ್ ಅವರಿಗೆ ಸೂಕ್ತ ಮೂಲ ಸೌಕರ್ಯ ಕಲ್ಪಿಸದೆ ಬಿರು ಬಿಸಿಲಿನಲ್ಲಿ ತಪಾಸಣೆಗಾಗಿ ಕಾದು ನರಳುತ್ತಿದ್ದ ಜನರ ದರ್ಶನವಾಯಿತು.

ಪ್ರತಿ ವಿಭಾಗದ ಸ್ಟಾಲ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಸಚಿವರು ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡುವಾಗ ಶಿಬಿರದಲ್ಲಿ ಕಂಡು ಬಂದ ಅವ್ಯವಸ್ಥೆಗಳ ಬಗ್ಗೆ ಕಿಡಿಕಾರಿ ಬೇಸರ ವ್ಯಕ್ತಪಡಿಸಿದರಲ್ಲದೇ, ಸರ್ಕಾರ ಆರೋಗ್ಯ ಕ್ಷೇತ್ರದಲ್ಲಿ ವಿನೂತನ ಪ್ರಯತ್ನದ ಮೂಲಕ ದೇಶದಲ್ಲಿ ಏಕಾಲದಲ್ಲಿ ಆರೋಗ್ಯ ಶಿಬಿರ ಪ್ರಾರಂಭಿಸಿದೆ. ಇದಕ್ಕಾಗಿ ಪ್ರತಿ ತಾಲೂಕಿಗೆ 2 ಲಕ್ಷ ರೂ.ಗಳನ್ನು ಸರ್ಕಾರ ನೀಡಿದ್ದರೂ, ಅದರ ಸದ್ಬಳಕೆ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದೀರಿ ಎಂದು ಕಿಡಿಕಾರಿದರು.

ಶಿಬಿರ ಆಯೋಜನೆಗೂ ಮುನ್ನ ಜಿಲ್ಲಾಧಿಕಾರಿ, ಜಿಪಂ ಸಿಇಓ ಸ್ಥಳೀಯವಾಗಿ ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ಸಭೆ ಮಾಡಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕಿತ್ತು. ಬೆಳಗ್ಗೆಯಿಂದ 2–3 ಸಾವಿರ ಜನರಿಗೆ ತಪಾಸಣೆ ಮಾಡಿರಬಹುದು. ಆದರೆ ಸೂಕ್ತ ವ್ಯವಸ್ಥೆ ಮಾಡಿಲ್ಲ. ಈ ರೀತಿ ಮಾಡುತ್ತೀರಿ ಎಂಬ ಅನುಮಾನದಿಂದಲೇ ನಾನು ಇಲ್ಲಿಗೆ ಆಗಮಿಸುವ ಬಗ್ಗೆ ತಿಳಿಸದೇ ದಿಢೀರ್ ಎಂದು ಆಗಮಿಸಿರುವುದು. ಏ.22 ರವರೆಗೆ ಶಿಬಿರ ನಡೆಯಲಿದ್ದು, ಈ ರೀತಿಯಾಗದಂತೆ ಕ್ರಮ ವಹಿಸಿ ಎಂದು ಎಚ್ಚರಿಕೆ ನೀಡಿದರು.

ಸರ್ಕಾರಿ ಆಸ್ಪತ್ರೆಗಳ ವೈದ್ಯರು ಮತ್ತು ಸಿಬ್ಬಂದಿ ಜನರಲ್ಲಿ ಸರ್ಕಾರಿ ಆಸ್ಪತ್ರೆಗಳ ಮೇಲೆ ಒಳ್ಳೆಯ ಅಭಿಪ್ರಾಯ ಮತ್ತು ನಂಬಿಕೆ ಬರುವಂತಹ ಕೆಲಸ ಮಾಡಬೇಕು. ಕೆಲವು ವೈದ್ಯರ ಕೆಟ್ಟ ಆಲೋಚನೆಗಳಿಂದ ಸರ್ಕಾರಿ ಆಸ್ಪತ್ರೆಗಳಿಗೆ ಕೆಟ್ಟ ಹೆಸರು ಬರುತ್ತಿದ್ದು, ಜನ ಖಾಸಗಿ ಆಸ್ಪತ್ರೆಗಳ ಕಡೆ ಮುಖ ಮಾಡುವಂತೆ ಮಾಡಿದೆ. ಜಿಲ್ಲಾಧಿಕಾರಿಗಳು, ಜಿಪಂ ಸಿಇಓ, ಸ್ಥಳೀಯ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು ಅವರವರ ಕಾರ್ಯ ಕ್ಷೇತ್ರದ ಆಸ್ಪತ್ರೆಗಳಿಗೆ ಪ್ರತಿ ವಾರಕ್ಕೊಮ್ಮೆ ಭೇಟಿ ನೀಡಿ ಪರಿಶೀಲಿಸಿದರೆ ಉತ್ತಮ ಬದಲಾವಣೆ ಸಾಧ್ಯವಾಗಲಿದೆ ಎಂದು ಕಿವಿಮಾತು ಹೇಳಿದರು.

ವಿದೇಶಗಳಿಗೆ ಹೋಲಿಸಿದರೆ ನಮ್ಮ ದೇಶದ ಜನರಿಗೆ ಆರೋಗ್ಯ ಶಿಕ್ಷಣದ ಅರಿವಿನ ಕೊರತೆ ಇದೆ. ಈ ಕೊರತೆಯಿಂದ ಎಷ್ಟೋ ಕಾಯಿಲೆಗಳು ಹೊರಗೆ ಬರುವುದಿಲ್ಲ ರೋಗ ಉಲ್ಬಣವಾಗಿ ಅಂತಿಮ ಘಟ್ಟಕ್ಕೆ ಬಂದಾಗ ಮಾತ್ರ ವೈದ್ಯರ ಬಳಿ ಬರುವುದರಿಂದ ಸಾವು ನೋವುಗಳು ಹೆಚ್ಚಾಗಲಿವೆ ಎಂದ ಡಾ.ಕೆ.ಸುಧಾಕರ್, ದೇಶದ ಒಟ್ಟು ಸಾವಿನ ಪ್ರಮಾಣದಲ್ಲಿ ಶೇ.25ರಷ್ಟು ಮಂದಿ ಅಸಾಂಕ್ರಾಮಿಕ ರೋಗಗಳಿಂದ ಮೃತರಾಗುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು. ಆರೋಗ್ಯ ಕ್ಷೇತ್ರ ಪ್ರಧಾನವಾದ ಕ್ಷೇತ್ರ ಆರೋಗ್ಯಯುತ ಸಮಾಜದಿಂದ ಸದೃಢ ದೇಶ ಕಟ್ಟಲು ಸಾಧ್ಯ. ಆದ್ದರಿಂದ ನಮ್ಮ ಪ್ರಧಾನ ಮಂತ್ರಿಗಳ ಆಶಯದಂತೆ ಜನ ಸಾಮಾನ್ಯರಿಗೆ ಅನುಕೂಲವಾಗಲು ಈ ರೀತಿಯ ಆರೋಗ್ಯ ಶಿಬಿರ ಏರ್ಪಡಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಪೂರ್ಣಿಮಾ, ಆರೋಗ್ಯ ಇಲಾಖೆ ವಿಭಾಗೀಯ ಸಹ ನಿರ್ದೇಶಕ ಡಾ. ಉದಯ್‌ಕುಮಾರ್, ಡಿಹೆಚ್‌ಓ ಡಾ.ಕೆ.ಎಸ್. ಪ್ರಸಾದ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಟಿ.ಶಿವಪ್ರಸಾದ್, ಪುರಸಭಾಧ್ಯಕ್ಷ ಪ್ರಕಾಶ್, ಸದಸ್ಯರಾದ ಕೆ.ಎಲ್.ಜಗದೀಶ್, ಕೆ.ಬಿ.ವೀಣಾ, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಟಿಹೆಚ್‌ಓ ಡಾ.ಕೆ.ಆರ್.ಮಹೇಂದ್ರಪ್ಪ, ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಎಂ.ಎಸ್. ನಾಗೇಂದ್ರ, ಆರೋಗ್ಯ ಶಿಕ್ಷಣಾಧಿಕಾರಿ ಸಿ.ಎಂ.ರೇಖಾ, ಆರೋಗ್ಯ ಮೇಲ್ವಿಚಾರಕ ಕೆ.ವಿ.ರಮೇಶ್, ಆರೋಗ್ಯ ರಕ್ಷಾ ಕಮಿಟಿ ಸದಸ್ಯರಾದ ಹೆಚ್.ಜಿ. ಮಂಜುನಾಥ್, ಎಂ.ಎನ್.ರವಿಕುಮಾರ್, ರಂಗನಾಥ್ ಇನ್ನಿತರರಿದ್ದರು.

> ಆಯುಷ್ಮಾನ್ ಆರೋಗ್ಯ ಕಾರ್ಡ್ ಅನ್ನು ರಾಜ್ಯದಲ್ಲಿ 1.66 ಕೋಟಿ ಮಂದಿಗೆ ವಿತರಿಸಲಾಗಿದ್ದು, ಈ ವರ್ಷದಲ್ಲಿ ಪ್ರತಿಯೊಬ್ಬ ಪ್ರಜೆಗೂ ನೀಡುವ ಗುರಿ ಹೊಂದಲಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಇದರ ಅನುಕೂಲ ಪಡೆದುಕೊಳ್ಳುವ ಜತೆಗೆ 30 ವರ್ಷ ಮೇಲ್ಪಟ್ಟವರು ವರ್ಷಕ್ಕೆ ಒಮ್ಮೆಯಾದರೂ ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ. – ಡಾ.ಕೆ.ಸುಧಾಕರ್, ಆರೋಗ್ಯ ಸಚಿವ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೆಜಿಎಫ್ 2 (ತ): ಬೆ.8ಕ್ಕೆ, ಬೆ.11.30ಕ್ಕೆ, ಮ.3.15ಕ್ಕೆ, ಸಂ.6.30ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.15ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ.
ಸ್ಕ್ರೀನ್ 3	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.25ಕ್ಕೆ, ಬೀಸ್ಟ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.45ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬೀಸ್ಟ್ (ತ): ಬೆ.8.40ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬೀಸ್ಟ್ (ತ): ಬೆ.8ಕ್ಕೆ, ಬೆ.11.10ಕ್ಕೆ, ಮ.2.30ಕ್ಕೆ, ಸಂ.5.50ಕ್ಕೆ, ರಾ.9.10ಕ್ಕೆ.
ಸ್ಕ್ರೀನ್ 3	ಬೀಸ್ಟ್ (ತ): ಬೆ.8.20ಕ್ಕೆ, ಬೆ.11.45ಕ್ಕೆ, ಫೆಂಟಾಸ್ಟಿಕ್ ಬೀಸ್ಟ್ಸ್ (ಇಂ): ಮ.3.05ಕ್ಕೆ, ಜೇಮ್ಸ್ (ಕ): ಸಂ.6.10ಕ್ಕೆ, ಆರ್‌ಆರ್‌ಆರ್ (ಹಿಂ): ರಾ.9.20ಕ್ಕೆ.
ಸ್ಕ್ರೀನ್ 4	ಬೀಸ್ಟ್ (ತ): ಬೆ.8.10ಕ್ಕೆ, ಜೇಮ್ಸ್ (ಕ): ಬೆ.11.35ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ, ರಾ.9.50ಕ್ಕೆ, ಕೆಜಿಎಫ್ (ಕ): ಸಂ.6.25ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಆರ್‌ಆರ್‌ಆರ್ (2ಡಿ)(ಕ): ಬೆ.11ಕ್ಕೆ, ತ್ರಿಕೋನ (ಕ): ಸಂ.4ಕ್ಕೆ, ಗಣಿ (ತೆ): ಸಂ.6.45ಕ್ಕೆ.
ಸ್ಕ್ರೀನ್ 2	ಆರ್‌ಆರ್‌ಆರ್ (2ಡಿ)(ತೆ): ಮ.1.30ಕ್ಕೆ.
ಸ್ಕ್ರೀನ್ 3	ಆರ್‌ಆರ್‌ಆರ್ (2ಡಿ)(ಕ): ಸಂ.4ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ವರ್ಣಪಟಲ (ಕ): ಬೆ.11ಕ್ಕೆ, ಜೇಮ್ಸ್ (ಕ): ಮ.1.30ಕ್ಕೆ, ರಾ.7.30ಕ್ಕೆ, ಗಣಿ (ತೆ): ಸಂ.4.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಬೀಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆರ್‌ಆರ್‌ಆರ್ (ಕ)	1 ಪ್ರದರ್ಶನಗಳು
ಆರ್‌ಆರ್‌ಆರ್ (ತೆ)	3 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖತ್ರಾ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕೆಜಿಎಫ್–2 (ಕ)	4 ಪ್ರದರ್ಶನಗಳು
ಸಂಗಂ	
ಕೆಜಿಎಫ್ 2 (ಕ)	4 ಪ್ರದರ್ಶನಗಳು
ಲಿಡೋ	
ಹೋಂ ಮಿನಿಸ್ಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೀಸ್ಟ್ (ತ)	4 ಪ್ರದರ್ಶನಗಳು


ಲಕ್ನೋ ವಿರುದ್ಧ ಆರ್‌ಸಿಬಿಗೆ 18ರನ್ ಜಯ



ಮುಂಬೈ, ಏ.19– ನಾಯಕ ಫಾಪ್ ಡುಪ್ಲೆಸಿಸ್ ಅವರ ಅರ್ಧಶತಕ ಹಾಗೂ ಜೋಶ್ ಹ್ಯಾಜಲ್ವುಡ್ ವೇಗದ ದಾಳಿ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 18 ರನ್‌ಗಳ ಜಯ ಸಾಧಿಸಿದೆ.

ಈ ಮೂಲಕ ಆರ್‌ಸಿಬಿ ಆಡಿರುವ 7 ಪಂದ್ಯಗಳಲ್ಲಿ 5 ಗೆಲುವುಗಳೊಂದಿಗೆ 10 ಅಂಕ ಗಳಿಸಿ ಅಂಕಪಟ್ಟಿಯಲ್ಲಿ 2ನೇ ಸ್ಥಾನಕ್ಕೇರಿದೆ. ಇಲ್ಲಿನ ಡಿ.ವೈ.ಪಾಟೀಲ್ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 181 ರನ್ ಗಳಿಸಿತು. ಆದರೆ ಬೆಂಗಳೂರು ಆರಂಭ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 62 ರನ್ ಆಗುವಷ್ಟರಲ್ಲೇ ಅನುಜ್ ರಾವತ್ 4, ಮ್ಯಾಕ್ಸ್‌ವೆಲ್ 23, ಪ್ರಭುದೇಸಾಯಿ 10 ಹಾಗೂ ಕೊಹ್ಲಿ ಶೂನ್ಯಕ್ಕೆ ಔಟಾದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ತಾಳ್ಮೆಯ ಹಾಗೂ ಬಿರುಸಿನ ಆಟವಾಡಿದ ನಾಯಕ ಡುಪ್ಲೆಸಿಸ್ 64 ಎಸೆತಗಳಲ್ಲಿ 2 ಸಿಕ್ಸರ್, 11 ಬೌಂಡರಿ ಒಳಗೊಂಡ 96 ರನ್ ಗಳಿಸಿ ಔಟಾಗುವ ಮೂಲಕ 4 ರನ್‌ನಿಂದ ಶತಕದಿಂದ ವಂಚಿತರಾದರು. ಉಳಿದಂತೆ ಶಹಬಾಜ್ ಅಹ್ಮದ್ 26, ದಿನೇಶ್ ಕಾರ್ತಿಕ್ 13 ರನ್ ಗಳಿಸಿದರು. ಲಕ್ನೋ ಪರ ಚಮೀರಾ, ಜೇಸನ್ ಹೋಲ್ಡರ್ ತಲಾ 2, ಕ್ರುನಾಲ್ ಪಾಂಡ್ಯ 1 ವಿಕೆಟ್ ಕಬಳಿಸಿದರು. 182 ರನ್‌ಗಳ ಗುರಿ ಬೆನ್ನತ್ತಿದ ಲಕ್ನೋ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ನಾಯಕ ಕೆ.ಎಲ್.ರಾಹುಲ್ 30, ಕ್ರುನಾಲ್ ಪಾಂಡ್ಯ 42, ದೀಪಕ್ ಹೂಡಾ, ಬಡೋನಿ ತಲಾ 13, ಸ್ಟೋಯಿನಿಸ್ 24, ಹೋಲ್ಡರ್ 16 ರನ್ ಗಳಿಸಿದರು. ಆರ್‌ಸಿಬಿ ಪರ ಜೋಶ್ ಹ್ಯಾಜಲ್ವುಡ್ 4, ಹರ್ಷಲ್ ಪಟೇಲ್ 2, ಮೊಹಮ್ಮದ್ ಸಿರಾಜ್ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು. ಆರ್‌ಸಿಬಿ ಪರ ಫಾಪ್ ಡುಪ್ಲೆಸಿಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಪ್ರಹ್ಲಾದ್ ವೈದ್ಯ ನಿಧನ



ನಂಜನಗೂಡು, ಏ.19– ಪಟ್ಟಣದ ಪರಿಮಳ ಹೋಟೆಲ್ ಮಾಲೀಕ ಕೆ. ಪ್ರಹ್ಲಾದ್ ವೈದ್ಯ (83) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.